ಪುಣ್ಯಪಯೋನಿಧಿ

ಮಲ್ಲಿಕಾ

ಪುಣ್ಯಪಯೋನಿಧಿ

ಮಲ್ಲಿಕಾ

ವರಮೇಕೊ ಗುಣೀ ಪುತ್ರಃ
ನಚ ಮೂರ್ಖ ಶತಾನ್ಯಪಿ ।
ಏಕಶ್ಚಂದ್ರಸ್ತಮೋಹಂತಿ
ನಚ ತಾರಾಗಣಃ ಕ್ವಚಿತ್ ॥

Punyapayonidhi in Kannada by 'Mallika'
Published by Lakshmi Prakashana,
No. 359, 14th Cross, Sadashivanagara,
Bangalore-560 080.

ಪ್ರಥಮ ಮುದ್ರಣ : ೧೯೭೪
ದ್ವಿತೀಯ ಮುದ್ರಣ : ೧೯೯೫

ಬೆಲೆ : ಇಪ್ಪತ್ತಾರು ರೂಪಾಯಿಗಳು

ಮುದ್ರಕರು :
ನ್ಯೂ ಐಡಿಯಾಸ್
ನಂ. ೩೦, ೩ನೇ ಅಡ್ಡ ರಸ್ತೆ, ಬೈರಸಂದ್ರ ಮುಖ್ಯ ರಸ್ತೆ,
ಜಯನಗರ ಒಂದನೆಯ ಪೂರ್ವ ವಿಭಾಗ
ಬೆಂಗಳೂರು–೫೬೦ ೦೧೧

ಪುಣ್ಯಪಯೋನಿಧಿ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ನಂ. 359, 14ನೇ ಅಡ್ಡ ರಸ್ತೆ, ಸದಾಶಿವನಗರ
ಬೆಂಗಳೂರು—560 080

ಪುಣ್ಯಪಯೋನಿಧಿ

ದೃಶ್ಯ
೧

[ಧ್ರುವಕುಮಾರ ಆಗತಾನೇ ಪ್ರಾತಃರ್ವಿಧಿಗಳನ್ನು ಪೂರೈಸಿ ಪ್ರಾಂಗಣಕ್ಕೆ ಪದಾರ್ಪಣೆ ಮಾಡಿದ್ದಾನೆ. ದೂರ ದಿಗಂತದಲ್ಲಿ—ಓಕುಳಿಯೊತ್ತಿದ ಮುಗಿಲ್ ಪೀಠದಲ್ಲಿ ಹೊನ್ನಿನುಂಡೆಯಂತೆ ಮಂಡಿಸಿದ್ದ ಥಳಥಳಾಯಮಾನನಾದ ಬಾಲ ಭಾಸ್ಕರದೇವ, ಸಾಲುಪರ್ವತದ ಮೇಗಡೆ ಬೆಳ್ಳಿಯ ವಾರಾಶಿಯಂತೆ ಹರಿದ ಬೃಹದ್ ಬೆಳ್ಮುಗಿಲಿಗೆ ಸನ್ನಿವೇಶವು ಕೋದ ಹೊನ್ನಂಚಿನ ಸುರಸುಂದರವಾದ ಅಂಚಲ. ಭುವಿಯಮೇಲೆ ಹರಿದ ಹೊಂಬಿಸಿಲು ಬೆಚ್ಚಗೆ ಮೈಗಟ್ಟಿ ಮನಃ ಪ್ರಾಣಗಳನ್ನು ಆಕರ್ಷಿಸುವಂತಹ ಸಮಯ. ಗಿಡಮರಗಳಲ್ಲಿ ಕರ್ಣಾನಂದ ಕರವಾಗಿ ಹೊಮ್ಮುವ ಪಕ್ಷಿಗೊರಳ ಇನಿಇಂಚರ ವಿನಾ ನಿಶ್ಶಬ್ದ ಅಬ್ಧಿ ಯಾಗಿತ್ತು ಕುಟೀರ ಪ್ರಾಕಾರ.

ಬಾಲ ಸಹಜವಾದ ಉಲ್ಲಾಸ–ಉತ್ಸಾಹಗಳಿಂದ ಧ್ರುವಕುಮಾರನು ಚಿನ್ನಿಕೋಲು ತೆಗೆದುಕೊಂಡು ಆಟಕ್ಕಿಳಿದ. ಹರವಾದ ಅಂಗಳದುದ್ದಕೂ ಚಿನ್ನಿಯೊಡನೆ ಚಿನ್ನಾಟವಾಡಿತು ಎಳೆಯ ಶರೀರ. ಚಟ್‌ಪಟ್ ; ಇತ್ತ ಹೊಡೆದರೆ ಅತ್ತ. ಅತ್ತಹೊಡೆದರೆ ಇತ್ತ ಜಿಗಿಯುವ ಚಿನ್ನಿ. ಹೊಡೆಯು ವುದರಲ್ಲೂ ಉತ್ಸಾಹ ; ಹಾರುವುದರಲ್ಲೂ ಉತ್ಸಾಹ. ಆದರೇನು ? ಆ ಉತ್ಸಾಹ ಬಹಳ ಸಮಯ ಉಳಿಯಲಿಲ್ಲ. ಅವನು ಏಕಾಂಗಿ ; ಆಟದಲ್ಲಿ

ಸಹಜವಾಗಿ ಬೇಸರ ಮೂಡಿತು. ಬಾಲಕ ಸ್ವಲ್ಪಹೊತ್ತು ಹಾಗೂ ಹೀಗೂ ಆಟ ಆಡಿದನೇನೋ, ಅನಂತರ ತಾಯಿಯನ್ನು ಕೂಗಿ ಕರೆಯುವನು.

ಧ್ರುವಕುಮಾರ— ಅಮ್ಮಾ.... ?
(ಮಗನ ಕರೆ ಕುಟೀರದ ಹಿಂಭಾಗದಲ್ಲಿದ್ದ ತಾಯಿಗೆ ಕೇಳಿಸಲಿಲ್ಲವಾದುದರಿಂದ ಅವಳು ಓಗೊಡಲಿಲ್ಲ)

ಧ್ರುವಕುಮಾರ— ಅಮ್ಮಾ, ಓ ಅಮ್ಮಾ !

ಸುನೀತಿದೇವಿ— (ಅಲ್ಲಿಂದಲೇ) ಕರೆದೆಯಾ ಮಗೂ ?

ಧ್ರುವಕುಮಾರ— ಹೌದಮ್ಮಾ.
(ಸುನೀತಿದೇವಿಯು ಪ್ರಸನ್ನಮುಖಿಯಾಗಿ ಹೊರ ಬರುತ್ತಾಳೆ)

ಸುನೀತಿದೇವಿ— ಏನು ಮಗೂ ?

ಧ್ರುವಕುಮಾರ— ನನಗಿಲ್ಲಿ ಒಬ್ಬನೇ ಆಡಿಕೊಳ್ಳಲು ತುಂಬ ಬೇಸರ ಅಮ್ಮಾ. ಏನು ಮಾಡಲಿ ?

ಸುನೀತಿದೇವಿ— (ಸ್ವಗತ)ಅಯ್ಯೋ, ರಾಜಕುಮಾರನ ಅವಸ್ಥೆ ಈ ಮಟ್ಟಕ್ಕೆ ಬಂತು. (ಪ್ರಕಾಶ) ಏನು ಮಾಡೋಣ ಮಗೂ ? ಈ ಪರಿಸರದಲ್ಲಿ ನಿನ್ನ ಓರಗೆಯ ಮಕ್ಕಳಾರೂ ಇಲ್ಲವಲ್ಲಾ ?

ಧ್ರುವಕುಮಾರ— ನಾನು ಅರಮನೆಗೆ ಹೋಗಲೇ ?

ಸುನೀತಿದೇವಿ— (ನಿಟ್ಟುಸಿರು ಬಿಟ್ಟು) ಇಲ್ಲೇ ಆಡಪ್ಪಾ, ಅಂಗಳ ಹರ ನಾಗಿದೆ. ಅನಂತರ ಹೇಗೂ ವೇದಾಧ್ಯಯನ ಮಾಡುವುದುಂಟು.

ಧ್ರುವಕುಮಾರ— ಒಬ್ಬನೇ ... ಬಹಳ ಬೇಸರ. (ಸ್ವಲ್ಪಹೊತ್ತು ತನ್ನಲ್ಲೇ ಯೋಚಿಸಿ) ಅಮ್ಮಾ, ನಮ್ಮನ್ನೇಕೆ ಇಲ್ಲಿಗೆ ಕಳುಹಿಸಿದರು ಅಪ್ಪಾಜಿ ? ನಾವೇಕೆ ಅರಮನೆಯಲ್ಲಿರಬಾರದು ?
(ಎಳೆಯ ಕಣ್ಣಾಲಿಗಳಲ್ಲಿ ಸಖೇದಾಶ್ಚರ್ಯದ ಛಾಯೆ ಮಿನುಗಿತು)

ಸುನೀತಿದೇವಿ— (ಸ್ವಗತ) ಈ ಪ್ರಶ್ನೆಗೆ ಏನುತ್ತರ ಹೇಳಲಿ ? ನನ್ನ ಸಂಕಟವೇನಿದ್ದರೂ ಇರಲಿ, ಅದರ ತಾಪ ಇನಿತೂ ಮಗುವನ್ನು ಮುಟ್ಟಬಾರದು. (ಪ್ರಕಾಶ) ಸ್ಥಳಾಭಾವದಿಂದ ಮಗೂ, ಅರಮನೆ ಚಿಕ್ಕದು; ವ್ಯವಹಾರ ದೊಡ್ಡದು ಅಂದಮೇಲೆ ಇನ್ನೇನಾದೀತು ?

ಧ್ರುವಕುಮಾರ— ಅರಮನೆ ಚಿಕ್ಕದೇ? ಎಷ್ಟೊಂದು ವಿಶಾಲವಾಗಿದೆ?ಇನ್ನೂ ಎಷ್ಟು ಕೊಠಡಿಗಳು ಖಾಲಿ ಇಲ್ಲ ?

ಸುನೀತಿದೇವಿ— ಅವೆಲ್ಲಾ ಬೇಕೇ ಬೇಕು ಮಗೂ· ಅತಿಥಿ ಅಭ್ಯಾಗತರು ಬರುತ್ತಿರುತ್ತಾರೆ. ಸಭೆಗಳು ನಡೆಯುತ್ತವೆ. ಕೋಶಾಧಿಕಾರಿಗಳ ಮಂಡಲಿ ಕೂಡುತ್ತದೆ. ಅಮಾತ್ಯರ ಮಂತ್ರಾಲೋಚನೆ. ಪುರೋಹಿತರ ಪಂಚಾಂಗ ಪಠಣ ಇವುಗಳಿಗೆಲ್ಲಾ ಹೆಚ್ಚಿನ ಸ್ಥಳ ಇರುವುದೊಳ್ಳೆಯದು.

ಧ್ರುವಕುಮಾರ— ಅದಕ್ಕೆಂದೇ ಪ್ರಾಂಗಣದ ಆಚೆ 'ಮಂತ್ರ ಮಂಟಪ' ಕಟ್ಟಿದ್ದಾರೆ ಅಪ್ಪ. ಮತ್ತೇಕೆ ನಮಗೆ ಮಾತ್ರ ಅಲ್ಲಿಂದ ಉಚ್ಚಾಟನೆ ? ಕಿರಿಯರಾಣಿ ಮತ್ತು ಉತ್ತಮಕುಮಾರ ನಮ್ಮನ್ನಿಲ್ಲಿಗೆ ಕಳುಹಿಸಿದ ಮೇಲೂ ಸಹ ಅಲ್ಲೇ ಇದ್ದಾರಲ್ಲ ? ಅವರಲ್ಲಿಂದ ಹೊರ ಬರುವುದೆಂದು ?

ಸುನೀತಿದೇವಿ— (ಸ್ವಗತ) ದೇವರೇ ! ನಾನು ಹೇಗೆ ಸಮಾಧಾನ ಹೇಳಲಿ. ಎಂತು ನನ್ನ ಪರಿತಾಪವನ್ನೆಲ್ಲಾ ನುಂಗಿಕೊಂಡು ಈ ಮಗುವಿಗೆ ಹುರುಪು ನೀಡಲಿ ? (ಪ್ರಕಾಶ) ಅದನ್ನೆಲ್ಲಾ ಪ್ರಭುಗಳೇ ಎಂದಾದರೂ ನಿರ್ಣಯಿಸಬೇಕು. ಅದಕ್ಕೂ ಕಾಲಾವಕಾಶ ಬೇಕಲ್ಲ ಮಗೂ ?

ಧ್ರುವಕುಮಾರ— ಇದೇನಮ್ಮಾ, ಹೀಗನುತ್ತಿ ? ನಮ್ಮನ್ನಿಲ್ಲಿಗೆ ಕಳುಹಿಸಿ ಆಗಲೇ ಎಷ್ಟು ದಿನ ಆಯಿತು ?

ಸುನೀತಿದೇವಿ— (ಖಿನ್ನ ಮನಸ್ಕಳಾಗಿ ಸ್ವಲ್ಪಹೊತ್ತು ಯೋಚಿಸುತಿದ್ದು) ನಿನ್ನ ಮನಸ್ಸಿಗೆ ಹಾಗೆನ್ನಿಸಿದೆ ಅಷ್ಟೆ ; ಅಂತಹ ಹೆಚ್ಚಿನ ಸಮಯವೇನೂ ಕಳೆಯಲಿಲ್ಲ, ಮಗೂ.

ಧ್ರುವಕುಮಾರ— ಸರಿ ; ನಾನೀಗ ಅರಮನೆಗೆ ಹೋಗಿ ಉತ್ತಮಕುಮಾರ ನೊಂದಿಗೆ ಆಟವಾಡಿ ಬರುತ್ತೇನಮ್ಮಾ; ನಾನಿಲ್ಲಿ ಒಬ್ಬನೇ ಆಡಲಾರೆ.

ಸುನೀತಿದೇವಿ— ಉತ್ತಮಕುಮಾರ ಈಗಾಗಲೇ ಹೊರಾಂಗಣಕ್ಕೆ ಬಂದಿದ್ದಾನೋ ಇಲ್ಲವೋ.

ಧ್ರುವಕುಮಾರ— ಅಂತಃಪುರಕ್ಕೇ ಹೋಗುವೆ.

ಸುನೀತಿದೇವಿ— ಬೇಡ ಮಗೂ, ಆಟ ಆಡುವುದಕ್ಕೆ ಹೊರಾಂಗಣ ಚೆನ್ನ.

ಧ್ರುವಕುಮಾರ— ಅಂತಃಪುರದಿಂದ ಉತ್ತಮಕುಮಾರನನ್ನು ಹೊರಗೆ ಕರೆ ತಂದರಾಯಿತು.

ಸುನೀತಿದೇವಿ— ಈಗಲೇ ಬೇಡ ಮಗೂ, ಅವನು ಹೊರಬಂದ ನಂತರ ಅಂತಃಪುರಕ್ಕೆ ಹೋಗುವ ಗೋಜೇ ಇರುವುದಿಲ್ಲ.

ಧ್ರುವಕುಮಾರ— ಅಂತಃಪುರಕ್ಕೆ ಹೋದಾಗಲೆಲ್ಲ ಚಿಕ್ಕಮ್ಮ ಕೋಪಿಸಿ ಕೊಳ್ಳುತ್ತಾಳಲ್ಲ ಅದೇಕೆ ಅಮ್ಮಾ! (ಬಾಲಸಹಜವಾದ ಮುಗ್ಧತೆಯಲ್ಲಿ ಅಚ್ಚರಿ ಒಡೆದು ಮೂಡಿತು)

ಸುನೀತಿದೇವಿ— ಅವಳ ಸ್ವಭಾವವೇ ಹಾಗೆ. ಅದಕ್ಕೆ ಬೆಲೆ ಕೊಡಬಾರದು.

ಧ್ರುವಕುಮಾರ— ಹಾಗಾದರೆ....(ಅಷ್ಟಕ್ಕೆ ಸುಮ್ಮನಾಗುವನು)

ಸುನೀತಿದೇವಿ— (ಮಗುವನ್ನು ಮೈದಡವಿ ಮುದ್ದಿಟ್ಟು ಸಾಂತ್ವನಗೊಳಿಸುವ ದನಿಯಲ್ಲಿ) ಮಗೂ, ಧ್ರುವಕುಮಾರ, ಇವೆಲ್ಲಾ ಲೌಕಿಕ ವ್ಯವಹಾರಗಳು. ಇವನ್ನು ನಾವು ಮನಸ್ಸಿಗೆ ತೆಗೆದುಕೊಳ್ಳುವುದು ಉಚಿತವಲ್ಲ.

ಧ್ರುವಕುಮಾರ— ಅಂದರೆ...? ಇವೆಲ್ಲಾ ಸರ್ವೇಸಾಮಾನ್ಯ ಎಂದು ಅರ್ಥ? (ಮಂದಹಾಸ ಬೀರುವನು)

ಸುನೀತಿದೇವಿ— ಹೌದಪ್ಪಾ, ಎಲ್ಲರ ಜೀವನದಲ್ಲೂ ಈ ಏರುಪೇರುಗಳು ಇದ್ದೇ ಇರುತ್ತವೆ.

ಧ್ರುವಕುಮಾರ— ಸರಿ; ಈಗ ವೇಳೆಯಾಯಿತಲ್ಲ, ನಾನು ಅರಮನೆಗೆ ಹೋಗಿ ಬರುವೆ.

(ಸುನೀತಿದೇವಿ ಸ್ವಲ್ಪಹೊತ್ತು ಯೋಚಿಸಿ ಮಗನ ತಲೆಯನ್ನು ನೇವರಿಸಿ....)

ಸುನೀತಿದೇವಿ— ಆಗಬಹುದು. ಮೊದಲಿಷ್ಟು ತಲೆಬಾಚಿ ತಿಲಕ ತಿದ್ದುವೆ.

ಧ್ರುವಕುಮಾರ— ಆಗಲೇ ಆಯಿತಲ್ಲ, ಮತ್ತೇಕೆ ಈಗ?

ಸುನೀತಿದೇವಿ— ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ, ಒಂದು ಗಳಿಗೆ ಸಾಕು ನನ್ನ ಕಂದ ಅರಮನೆಗೆ ಹೋಗಬೇಕಾದರೆ ಮಿಂಚುವಂತಿರಬೇಕು!

ಧ್ರುವಕುಮಾರ— (ಅಸಡ್ಡೆಯಿಂದ) ಇರಲಮ್ಮಾ ಹೀಗೆ.

(ಆದರೂ ಅವಳು ಬಿಡಲಿಲ್ಲ. ಮರುಗಳಿಗೆಯಲ್ಲೇ ಸರಳ ಶೃಂಗಾರ ಮುಗಿಯಿತು. ಅವನು ಮೈಯೆಲ್ಲಾ ಮನಸ್ಸಾಗಿ ಹೊರಟ. ಅಕ್ಕರೆದುಂಬಿದ ನೋಟದಿಂದ ನೋಡುತ್ತ ನಿಂತಳು ತಾಯಿ. ಅದೇ ಉತ್ತಮಕುಮಾರ ಚಿನ್ನದ ಹಾವುಗೆಗಳನ್ನು ಮೆಟ್ಟಿ ತಕತಕ ಕುಣಿಯುವಾಗ ತನ್ನ ಮಗ ಬರಿಗಾಲಿನಿಂದ ನಡೆಯುವ ದುರ್ದೆಶೆ ಮನವನ್ನು ಮಂಜಿನಂತೆ ಕರಗಿಸಿತು. ನೀಳವಾದ ನಿಟ್ಟುಸಿರೊಂದನ್ನು ಹೊರಹಾಕಿ ಒಳಬಂದಳು. ಕಸವುಡುಗುತಿದ್ದ ದಾಸಿ ಪೊರಕೆಯನ್ನು ಬದಿಗಿಟ್ಟು ಅತೀ ವಿನಯವಂತಿಕೆಯಿಂದ ಕೇಳುತ್ತಾಳೆ)

ದಾಸಿ— ಧ್ರುವಕುಮಾರ ನಿಮ್ಮನ್ನು ಕರೆದದ್ದೇಕೆ ತಾಯಿ?

ಸುನೀತಿದೇವಿ— ಒಬ್ಬನೇ ಆಡಿ ಬೇಸರವಾಯಿತು ಪಾಪ, ಇನ್ನೂ ಚಿಕ್ಕವನು; ಜೊತೆಗಾರರಿಲ್ಲ, ತೊಂದರೆಯಾಗಿದೆ.

ದಾಸಿ— ಹೌದಮ್ಮಾ, ಹೂವಿನಂಥ ಮಗು. ಅದಕ್ಕೇನೂ ತಿಳಿಯದು. ತಪ್ಪು ಮಾಡದೆ ತೊಂದರೆಗೆ ಸಿಕ್ಕಿತು. ಈಗ ನೀವೇ ಒಂದಿಷ್ಟು ಅವನೊಂದಿಗೆ ಆಟದಲ್ಲಿ ಕೂಡಿದರೆ ಬೇಸರ ಹರಿದೀತು

ಸುನೀತಿದೇವಿ— ಅವನು ಕರೆದದ್ದು ಆಟಕ್ಕಲ್ಲ; ಅರಮನೆಗೆ ಹೋಗಲು ಅನುಮತಿಗಾಗಿ.

ದಾಸಿ— ಆಗಲೇ ಕಳುಹಿಸಿದಿರಾ?

ಸುನೀತಿದೇವಿ— ಅವನು ಬೇಡಿದಾಗ ಒಲ್ಲೆ ಎನ್ನಲು ಮನಸ್ಸು ಬರಲಿಲ್ಲ. ಈಗ ಸ್ವಲ್ಪ ಚಿಂತೆಯಾಗಿದೆ.

ದಾಸಿ— ಈ ವೇಳೆಗಾಗಲೇ ಉತ್ತಮಕುಮಾರ ಹೊರಬಂದಿದ್ದರೆ ತೊಂದರೆ ಏನಿಲ್ಲ. ಸ್ವಲ್ಪ ಹೊತ್ತು ಆಟವಾಡಿ ಹಿಂದಿರುಗ ಬಹುದು.

(ಅವಳು ಹಾಗೆಂದರೂ ಕಂಠದಲ್ಲಿ ಅಂತಹ ದೃಢತೆಯೇನೂ ಸ್ಫುರಿಸಲಿಲ್ಲ. ಅದು ಸುನೀತಿದೇವಿಯ ಮನವನ್ನು ಇನ್ನಷ್ಟು ಅಳುಕುವಂತೆ ಮಾಡಿತು. ಅವಳು ಸುಮ್ಮನೆ, ಸಸು ಖಿನ್ನ ಮನಸ್ಕಳಾಗಿ ನಿಂತುಬಿಟ್ಟಳು)

ದಾಸಿ— (ರಾಣಿಯ ಮನಃಸ್ಥಿತಿಯನ್ನರಿತು) ತಾಯಿ, ಈ ರಾಜ್ಯ ದಾದ್ಯಂತ ಮಳೆಬೆಳೆಗಳು ಸಮೃದ್ಧಿಯಾಗಿವೆ. ಪ್ರಜೆಗಳಲ್ಲಿ ಸುಖ-ಶಾಂತಿ ನೆಲೆಸಿವೆ. ಈಗ ಕೂಡಿ ಬಂದಿರುವ ತೊಂದರೆ ಯೆಂದರೆ ನಿಮ್ಮದೊಂದೇ. ಅದನ್ನಷ್ಟು ಪ್ರಭುಗಳು ತಿಳಿದುಕೊಳ್ಳದೇ ಹೋದುದು ತೀರ ದುರದೃಷ್ಟಕರ.

ಸುನೀತಿದೇವಿ— (ಭಾರವಾದ ದನಿಯಲ್ಲಿ) ಸುರುಚಿಯು ಕಿರಿಯ ರಾಣಿ ಯಾಗಿ ಬಂದಾಗನಾನವಳನ್ನುಎಷ್ಟುಪ್ರೀತಿಯಿಂದನೋಡಿ ಕೊಂಡಿದ್ದೆ ಎಂಬುದು ದೇವರಿಗೇ ಗೊತ್ತು. ಆದರೂ ಅವಳು ಹಗೆತನ ಸಾಧಿಸಿದ್ದು ವಿಶೇಷವೇ. ಪ್ರಭುಗಳ ತಲೆಯನ್ನೇ ಕೆಡಿಸಿಬಿಟ್ಟಳು. ಹೆಣ್ಣಾದವಳಿಗೆ ಈ ದುರ್ಗುಣ ಸಲ್ಲ.

ದಾಸಿ— ಆಗ ಅರಮನೆಯಲ್ಲಿ ನಿಮಗಿದ್ದ ಮನ್ನಣೆ–ಗೌರವಾದರ ಅವರ ಹೊಟ್ಟೆಯುರಿಸಿತು. ಮತ್ಸರ ಎಂಬುದು ಯಾರಿಗೂ ಬಹಳ ಕೆಟ್ಟ ಗುಣ ಅಮ್ಮಾ.

ಸುನೀತಿದೇವಿ— ಏನು ಮಾಡೋಣ ದಾಸೀಮಣಿ? ಅದು ಅವರವರ ಜನ್ಮ ಗತವಾದುದು.

ದಾಸಿ— ಪ್ರಭುಗಳು ತನ್ನನ್ನು ರೂಪಕ್ಕಾಗಿ ಮೆಚ್ಚಿದ್ದಾರೆ. ರಾಣಿ ಪದ ಕೊಡುವುದಕ್ಕಲ್ಲ ಎಂಬ ಭಾವನೆ ಅವರಲ್ಲಿ. ಆ ರಾಣೀಪದದ ಹಂಬಲ ಹಾಲಿನಂತಹ ಸಂಸಾರಕ್ಕೆ ಹುಳಿಯನ್ನು ಹಿಂಡಿತು.

ಅದಕ್ಕಾಗಿ ಅವರೆಷ್ಟು ಸಂಚು ನಡೆಸಿದ್ದಾರೆ ಎಂಬುದು ನಿಮಗಾಗ ತಿಳಿಯಲಿಲ್ಲ. ನಿಮ್ಮದು ತೀರ ದೊಡ್ಡ ಗುಣ. ಸಣ್ಣ ವಿಚಾರಗಳ ಕಡೆ ಮನಸ್ಸು ಹರಿಯಲೊಲ್ಲದು... ಆಗ ನೀವು ಎಚ್ಚರ ವಹಿಸಿದ್ದರೆ ಒಳ್ಳೆಯದಿತ್ತು.

ಸುನೀತಿದೇವಿ— ನಾನು ಎಚ್ಚರ ವಹಿಸಿದರೂ ಸಹ ಮಾಡುವುದೇನು ? ಆ ಬೆಡಗು ಬಿನ್ನಾಣಗಳನ್ನು ನಾನರಿಯೆ. ನನಗವು ಬೇಡವೂ ಬೇಡ. ಭಗವಂತನ ಧ್ಯಾನದಲ್ಲಿ ಶಾಂತಿಯಿಂದ ಹೊತ್ತು ಕಳೆಯುವುದು ಎಲ್ಲಕ್ಕೂ ಕ್ಷೇಮ.

ದಾಸಿ— ನಿಮ್ಮ ತಾಳ್ಮೆ ನೋಡಿದರೆ ನನಗೇ ಆಶ್ಚರ್ಯ. ಆದರೂ ಆ ಭಗವಂತ ನಿಮ್ಮ ಬಗ್ಗೆ ಏಕೆ ಅಷ್ಟು ನಿರ್ದಯನೋ, ಅರ್ಥವೇ ಆಗುತ್ತಿಲ್ಲ ನನಗೆ.

ಸುನೀತಿದೇವಿ— ಎಲ್ಲಾ ನಮ್ಮ ನಮ್ಮ ಪ್ರಾರಬ್ಧ ಕರ್ಮ.

ದಾಸಿ— ಹಾಗೆಂದರೆ ಹಿರಿಯ ರಾಣಿಯಾದ ನೀವು ಏನು ಸಾಧಿಸಿದ ಹಾಗಾಯಿತು ?

ಸುನೀತಿದೇವಿ— ದಾಸೀಮಣಿ, ಸಾಧನೆ ನಮ್ಮ ಆತ್ಮೋನ್ನತಿಗೆ ; ಭೋಗ ಭಾಗ್ಯಕ್ಕಲ್ಲ.

ದಾಸಿ— ನಿಮ್ಮ ರೀತಿನೀತಿ ನೋಡಿಯೇ ಕಿರಿಯರಾಣಿ ಹೆಬ್ಬುಲಿ ಯಾದುದು.

ಸುನೀತಿದೇವಿ— ಏನು ಮಾಡಲಿ ಹೇಳು ? ನಾನೊಬ್ಬಳೇ ಆದರೆ ಅದರ ರೀತಿಯೇ ಬೇರೆ. ಚಿನ್ನದಂತಹ ಮಗನಿದ್ದಾನೆ. ಮುಂದೆ ರಾಜನಾಗತಕ್ಕ.ಔರಸಪುತ್ರ.ಅವನಿಗೆ ಆಸರೆ ತಪ್ಪಬಾರದು ವಿದ್ಯಾಬುದ್ಧಿಗಳಲ್ಲಿ ಒಳ್ಳೆಯ ಶಿಕ್ಷಣಬೇಕು ಇದೆಲ್ಲಾ ಸಹನೆ ಇಲ್ಲದಿದ್ದರೆ ಹೇಗೆ ನಡೆಯುತ್ತೆ ?

ದಾಸಿ— ಹೌದು ತಾಯಿ, ನಿಮ್ಮಷ್ಟು ಸಹನೆ–ದೂರಾಲೋಚನೆ ಯಾರಿಗುಂಟು ?

ಸುನೀತಿದೇವಿ— ಆದರೂ ಸಹ ಈ ಬಗೆಯ ಜೀವನ ಬಹಳ ಕಷ್ಟ. ಎಲ್ಲಾ ಸಂಕಷ್ಟವನ್ನೂ ನಾನು ನನ್ನೊಳಗೇ ಅನುಭವಿಸಿಕೊಳ್ಳ

ಬೇಕು. ಧ್ರುವಕುಮಾರ ಇನ್ನೂ ಎಳೆಯ. ಈ ಭೇದಭಾವಗಳು ಅವನಿಗೆ ತಿಳಿಯುವುದಿಲ್ಲ. ಮೊದಲಿಂದಲೂ ಉತ್ತಮ ಕುಮಾರನೊಂದಿಗೆ ಕೂಡಿ ಆಡಿದವನು. ಈಗ ಬೇಡ ಎನ್ನುವುದು ಹೇಗೆ ? ಒಂದುವೇಳೆ ಹಾಗೆಂದರೆ ನನ್ನದೇ ಭೇದಭಾವ ಎನಿಸಬಹುದು ಅವನಿಗೆ.

ದಾಸಿ— ಹೌದು ತಾಯಿ, ನೀವೆಂದದ್ದು ಸಹಜ.

ಸುನೀತಿದೇವಿ— ಅರಮನೆಯ ಸಂಬಂಧವನ್ನು ತೀರ ಕಡಿದುಕೊಳ್ಳುವುದು ಸರಿಯಲ್ಲ.

ದಾಸಿ— ಹೌದು. ಹೌದು. ಒಂದಲ್ಲ ಒಂದು ದಿನ ಸ್ನೇಹ ಸಂಬಂಧ ಕೂಡಿಬರಬಹುದು.

ಸುನೀತಿದೇವಿ— ಎಲ್ಲಾ ಭಗವಂತನಿಗೆ ಬಿಟ್ಟು ಬಿಡುವೆ. ಅವನೇ ಅದರ ಕರ್ತೃ. ಅವನ ಅಣತಿಯಿಲ್ಲದೆ ಒಂದು ತೃಣವೂ ಅಲುಗದು. ಅದು ನನಗೊತ್ತು. ಮತ್ತೇಕೆ ಪ್ರಯತ್ನದ ಗೀಳು?

ದಾಸಿ— ನಿಮ್ಮ ಜ್ಞಾನವೇ ಜ್ಞೇಯ.

(ಸುನೀತಿದೇವಿ ಏನೂ ಹೇಳಲಿಲ್ಲ. ಮಾನಸಿಕ ಪ್ರಪಂಚ ಕಲಕಲಮಯವಾಗಿತ್ತು. ಅವಳು ಅದರಲ್ಲಿಯೇ ತೀವ್ರ ಮುಳುಗಿ ಹೋದಂತೆ ಸುಮ್ಮನಾದಳು. ಹಾಗೆ ಸ್ವಲ್ಪ ಸಮಯ ಉರುಳಿತ್ತೇನೋ ಹೊರಗಡೆ ಯಾರದೋ ಕಂಠ ಸ್ವರ ಕಹಳೆಯಂತೆ ಮೊಳಗುವುದು)

ಸಾಧು— ಜೈ ಶಂಕರ್ !

(ದಾಸಿಯು ಒಳಹೋಗಿ ಬೊಗಸೆಯಲ್ಲಿ ಭಿಕ್ಷೆಯನ್ನು ತರುವುದರೊಳಗಾಗಿ ಮತ್ತೆ ಸಾಧುವಿನ ಧ್ವನಿ)

ಸಾಧು— ಭಿಕ್ಷಾಂ ದೇಹಿ !

ದಾಸಿ— ಜೋಳಿಗೆ ತೆರೆಯಿರಿ ಸಾಧುಗಳೇ !

ಸಾಧು— ಮೊದಲು ಮಹಾರಾಣಿಯವರ ದರ್ಶನವಾಗಲಿ, ಜೈ ಉಮಾಶಂಕರ್!

ದಾಸಿ— ಅವರಿಗೆ ಬಿಡುವಿಲ್ಲ, ದಯವಿಟ್ಟು ಭಿಕ್ಷೆ ಸ್ವೀಕರಿಸಿರಿ.

ಸಾಧು— ರಾಣಿಯವರ ಅಮೃತಹಸ್ತದಿಂದಲ್ಲದೆ ನಾನು ಭಿಕ್ಷೆ ಸ್ವೀಕರಿಸಲಾರೆ.

ದಾಸಿ— ಅಷ್ಟೇಕೆ ಹಠ ಸಾಧುಗಳೇ ?

ಸಾಧು— ಅವರ ದರ್ಶನಾರ್ಥವಾಗಿಯೇ ನಾನು ಬಂದದ್ದು !

ದಾಸಿ— ದಯಮಾಡಿ ಕ್ಷಮಿಸಿ ಬಿಡಿ.

ಸಾಧು— ಜೈ ಉಮಾಶಂಕರ್ !

(ಅವನು ಅಲ್ಲಿಂದ ಹೆಜ್ಜೆ ತೆಗೆದಾಗಲೇ ಸುನೀತಿದೇವಿ ಹೊರ ಬರುತ್ತಾಳೆ. ಅವಳನ್ನು ನೋಡಿ ಸಂತುಷ್ಟನಾದ ಮುನಿ ಪುಂಗವ ಹಸ್ತಗಳನ್ನೆತ್ತಿ ಆಶೀರ್ವದಿಸುವನು)

ಸಾಧು— ದೇವಿ, ಮಹಾರಾಣಿ ! ನಿನಗೆ ಶುಭವಾಗಲಿ !

ಸುನೀತಿದೇವಿ— (ನಮಸ್ಕರಿಸಿ)ತಮ್ಮ ದರ್ಶನಲಾಭದಿಂದ ಪರಮಾನಂದ ವಾಯಿತು ಮಹರ್ಷಿಗಳೇ,ತಮ್ಮನ್ನು ನಿರ್ಲಕ್ಷಿಸಿದೆನೆಂದು ತಾವು ಅನ್ಯಥಾ ಭಾವಿಸಬಾರದು.

(ದಾಸಿಯು ಕೈಯ್ಯಲ್ಲಿದ್ದ ಭಿಕ್ಷೆಯನ್ನು ತೆಗೆದುಕೊಂಡು ಅತ್ಯಂತ ವಿನೀತಭಾವದಿಂದ ಮಹರ್ಷಿಗೆ ನೀಡುವಳು)

ಸಾಧು— ತಾಯಿ, ನೀನೀಗ ಸಂಕಟದಿಂದ ತೊಳಲುತ್ತಿರುವೆ. ನೀನು ಕಿಂಚಿತ್ತೂ ಯೋಚಿಸಬೇಡ. ಹೇಗೆ ನಿನಗೆ ಸಂಕಟ ಒದಗಿ ದೆಯೋ ಹಾಗೆಯೇ ಅದು ನಿವಾರಣೆಯಾಗಲಿದೆ. ಭಗ ವಂತನನ್ನು ಕುರಿತು ಸದಾ ಧ್ಯಾನ ಮಾಡು. ಮುಂದೆ ಅವನೇ ನಿನಗೆ ಮಂಗಳವನ್ನುಂಟುಮಾಡುತ್ತಾನೆ.

ಸುನೀತಿದೇವಿ— ತಮ್ಮ ಅನುಗ್ರಹಕ್ಕೆ ಮತ್ತು ಉಪದೇಶಕ್ಕೆ ನಾನು ಅತ್ಯಂತ ಕೃತಜ್ಞಳಿರುವೆ.

ಸಾಧು— ಈ ಸಂಕಷ್ಟಗಳು ಯಾರಿಗೂ ತಪ್ಪಿದ್ದಲ್ಲ. ಅದಕ್ಕಾಗಿ ಚಿಂತಿಸಬಾರದು.

ಸುನೀತಿದೇವಿ— ಅಪ್ಪಣೆ ಮುನಿಪುಂಗವರೇ.

ಸಾಧು— ಮುಂದೆ ನಿನ್ನಮಗನು ಸತ್ಯಸಂಧನಾಗಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದು ಸುಖಿಯಾಗುವನು.

ಸುನೀತಿದೇವಿ— ತಮ್ಮ ಹಾರೈಕೆಯೂ ಫಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವೆ.

ಸಾಧು— ನಿನಗೆ ಮಂಗಳವಾಗಲಿ.

(ಸಾಧು ಪುಂಗವ ಅಲ್ಲಿಂದ ನಿರ್ಗಮಿಸುವನು)

ಸುನೀತಿದೇವಿ— (ದಾಸಿಯನ್ನು ಕುರಿತು)ಇದುವರೆಗೆ ಎಷ್ಟು ಮಂದಿ ಸಾಧು ಪುಂಗವರು ಮತ್ತು ಪಂಡಿತೋತ್ತಮರು ಇದೇಮಾತನ್ನು ಹೇಳಲಿಲ್ಲ? ಹಿರಿಯರ ಆಶೀರ್ವಚನ ಒಳ್ಳೆಯದೆ. ಅದೂ ಸಹ ಭಗವಂತನ ಪರೋಕ್ಷವಾದ ಅನುಗ್ರಹ ಎನ್ನಬಹುದು.

ದಾಸಿ— ಅಷ್ಟಾದರೆ ಸಾಕಲ್ಲ ತಾಯಿ.

ಸುನೀತಿದೇವಿ— ಜೀವನ ಎಂದಮೇಲೆ ಕಷ್ಟಸುಖಗಳು ಇದ್ದೇ ಇರುತ್ತವೆ. ಅದು ಯಾರಿಗೂ ತಪ್ಪಿದ್ದಲ್ಲ. ನಾವು ಕಷ್ಟಸಹಿಷ್ಣುಗಳಾಗಿದ್ದಲ್ಲಿ ಅವು ಗಣನೆಗೆ ಬಾರದೇ ಹೋಗುವುವು.

ದಾಸಿ— ಅಂತಹ ದೃಢಭಾವ ಎಷ್ಟು ಮಂದಿಗಿದ್ದೀತು ?

ಸುನೀತಿದೇವಿ— ಇಲ್ಲದಿದ್ದಲ್ಲಿ ಅದರಿಂದ ಎಂತಹವರಿಗೂ ಅಪಾರವಾದ ದುಃಖ ತಪ್ಪುವುದಿಲ್ಲ.

(ನೀಳವಾದ ನಿಟ್ಟುಸಿರನ್ನು ಬಿಡುವಳು)

ದಾಸಿ— ಹೌದು. (ಒಡತಿಯ ತಾಳ್ಮೆಯನ್ನು ಅರಿತು ಮನದಲ್ಲೇ ಹರ್ಷಿಸುವಳು)

(ಪರದೆ ಬೀಳುವುದು)

ದೃಶ್ಯ

೨

[ಪೂರ್ವ ದಿಕ್ತಟದಲ್ಲಿ ಹೊಮ್ಮಿದ ಉದಯರಾಗ ಆಗಲೇ ವಿಲುಪ್ತವಾಗಿ ಧವಳಿಮಾಕಾಂತಿ ಉಜ್ವಲಿಸುತಿತ್ತು ಬೃಹದ್ ಜಲಧರಗಳಲ್ಲಿ ತರುಲತಾಗುಲ್ಮಾದಿಗಳಲ್ಲಿ ನಿತ್ಯಗುರು ಅನಿಲದೇವನ ಮೃದು ಮಂದ ಸಂಚರಣ ಸುಯ್ಯನೆ ಸುಯ್ಯುವ ನಿಡುಸುಯ್ಲೊಂದಿಗೆ.

ಕುಟಿಯ ಪ್ರಾಚೀರವನ್ನು ದಾಟಿದ ಧ್ರುವಕುಮಾರ. ಪುಷ್ಪಗುಲ್ಮವೀಥಿಯನ್ನು ತಲ್ಪಿದ. ಅದು ಪೌರವೀಥಿಗಳಲ್ಲಿ ವಿಶಾಲವೂ ಸ್ವಚ್ಛವೂ ಆಗಿದು ರಾಜವೀಥಿ ಎಂಬ ಗೌರವ ಪಡೆದಿತ್ತು, ಅದರ ಎರಡೂ ಕಡೆಗಳಲ್ಲಿ ಸುಣ್ಣ ತೊಡೆದ ಆಟ್ಟಾಲಿಕೆಯ ಮಹಾಸೌಧಗಳು. ಸುತ್ತಮುತ್ತಲೂ ಗಿಡುಬಳ್ಳಿಗಳ ಪ್ರಾಚೀರ. ಅವುಗಳ ಪುಷ್ಪೋದ್ಯಾನಗಳಿಂದ ಮೂಗನ್ನು ಮುತ್ತುವಂತೆ ಹೊಮ್ಮುವ ಪುಷ್ಪಸೌಗಂಧ.ಮೇಲಾಗಿ ಮಲ್ಲಿಗೆ, ಬಕುಳ, ಸಂಪಿಗೆ, ಸಿಂಧುವಾರ ಇಂತಿತ ಹೂಗಳ ಕಂಪಂತೂ ತಂತಮ್ಮ ಪರಿಚಯವನ್ನು ತಾವೇ ಹೇಳಿಕೊಳ್ಳುವಷ್ಟು ಸುಗಂಧ ಬಂಧುರ. ಭವನ-ವಲಭಿಗಳಿಂದ ರೆಕ್ಕೆಬಡಿದು ಕೂಜನಗೈಯ್ಯುತ್ತ ಹೊರಡುತ್ತಿರುವ ಪಾರಿವಾಳಗಳ ಪರಿವಾರ. ಒಟ್ಟನಲ್ಲಿ ಪಥಿಕರ ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುವ ಹಾದಿ-ಪುಷ್ಪಗುಲ್ಮವೀಥಿ.

ಅದೇ ಹಾದಿ ಹಿಡಿದ ಸಹ ಪಾಂಥರಿಗೆ ಸಾಮಾನ್ಯನಂತೆ ಏಕಾಂಗಿಯಾಗಿ ಹೊರಟಿರುವ ಧ್ರುವಕುಮಾರನ್ನು ನೋಡಿದರೆ ಮಮತೆ-ಮರುಕ-ಗೌರವ-ಆದರಗಳು ಒಮ್ಮೆಗೇ ಮೂಡುತ್ತವೆ. ಎದೆಯ ನಿಡುಸುಯ್ಲನ್ನು ತಮ್ಮ ತಮ್ಮೊಳಗೇ ಹುಗಿದಿಟ್ಟುಕೊಂಡು ಕ್ಷೇಮವನ್ನು ವಿಚಾರಿಸುವರು....)

ಒಬ್ಬ— ಏನು ಬುದ್ಧಿ ಚೆನ್ನಾಗಿದ್ದೀರಾ ? ಹಿರಿಯ ರಾಣಿಯವರು ಚೆನ್ನಾಗಿದ್ದಾರಷ್ಟೆ ?

ಧ್ರುವಕುಮಾರ— ಹೌದಪ್ಪ. ನೀವೆಲ್ಲಾ ಕ್ಷೇಮವಷ್ಟೆ ?

ಇನ್ನೊಬ್ಬ— ಬುದ್ಧೀ, ಒಬ್ಬರೇ ಹೊರಟಿರಲ್ಲ ; ಎಲ್ಲಿಗೆ ?

ಧ್ರುವಕುಮಾರ— ಅರಮನೆಗೆ.

(ಸ್ವಲ್ಪ ಮುಂದೆ ಹೋಗುತ್ತಲೂ ಮತ್ತೊಬ್ಬ)

ಮತ್ತೊಬ್ಬ— ನೀವು ಹೀಗೆ ಒಬ್ಬರೇ ಓಡಾಡುವುದನ್ನು ನೋಡಿದರೆ ಸಂಕಟ ಬುದ್ಧಿ.

ಇನ್ನೊಬ್ಬ— ಅರಮನೆಯಿಂದ ದೂರವಾಗಿ ಆಟಪಾಠಗಳಿಗೆ ಬಹಳ ತೊಂದರೆಯಾಯಿತು ನಿಮಗೆ !

ಒಬ್ಬ— ಜೊತೆಗಾರರಿಲ್ಲ ; ಬಹಳ ಬೇಸರ ಅಲ್ಲವೇ ?

ಧ್ರುವಕುಮಾರ— (ನಸು ನಕ್ಕು) ಚಿಂತಿಲ್ಲ ; ಆಗಾಗ ಅರಮನೆಗೆ ಹೋಗಿ ಬರುವೆ.

ಒಬ್ಬ— ನೀವು ಚೆನ್ನಾಗಿರಬೇಕು ಬುದ್ಧೀ ಮುಂದೆ...(ಮಾತು ಅಷ್ಟಕ್ಕೆ ತುಂಡುಗಡಿದು ಸುಮ್ಮನಾಗುವನು)

ಧ್ರುವಕುಮಾರ— ನೀವೂ ಚೆನ್ನಾಗಿರಬೇಕು.

(ಅರಮನೆಯ ಕೆಲಸಗಾರನಾದ ಅಹಿಲ ಸ್ವಲ್ಪ ದೂರದಲ್ಲಿ ಕಾಣಿಸಿಕೊಂಡು ಸನಿಹಕ್ಕೆ ಬಂದ)

ಅಹಿಲ— ಅರಮನೆಗೆ ಹೊರಟಿರಾ ಬುದ್ಧಿ. ನಿನ್ನೆ ನೀವು ಬರಲಿಲ್ಲ. ಸಣ್ಣ ಬುದ್ಧಿಯವರು ನಿಮ್ಮ ಹಾದಿ ನೋಡುತ್ತಲೇ ಇದ್ದರು.

ಧ್ರುವಕುಮಾರ— (ಪ್ರಸನ್ನಮುಖಿಯಾಗಿ) ಹೌದಾ....? (ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ) ಇದೇನು, ಈ ಹೊತ್ತಿನಲ್ಲಿ ನೀನು ಅರಮನೆಗೆ ? ಇಂದು ಮುಂಜಾನೆ ಹೋಗಲಿಲ್ಲವೇ ?

ಅಹಿಲ— ಆಗಲಿಲ್ಲ ಬುದ್ಧಿ. ಏನೋ ತೊಂದರೆಯಾಯಿತು. ಇನ್ನು ಕರಣಿಕರಿಗೆ ತಿಳಿದರೆ ತುತ್ತಿಗೆ ಕತ್ತರಿ ಪ್ರಯೋಗ. ಅವರಿಗೆ ಕರುಣೆಯೇ ಇಲ್ಲ.

ಧ್ರುವಕುಮಾರ— ನೀನವರನ್ನು ಮೊದಲೇ ಕೇಳಬೇಕಾಗಿತ್ತು.

ಅಹಿಲ— ತೊಂದರೆಗಳು ಹೇಳಿಕೇಳಿ ಬರುವುದಿಲ್ಲ ಒಡೆಯಾ ಮುಂಜಾನೆ ಅವರಿಗೆ ಹೇಳಿಬರಲು ಸಮಯ ಸಿಗಲಿಲ್ಲ. ಹೀಗೆ ಏನೇನೋ ಆಗುತ್ತೆ. ನೀವು ಒಂದು ಉಪಕಾರ ಮಾಡಿ. ಒಳಹೋದವರೇ ದಿಡ್ಡಿಬಾಗಿಲಿನ ಚಿಲಕ ತೆಗೆದುಬಿಟ್ಟರೆ ಹಾಗೇ ಒಳ ಸೇರಿಕೊಳ್ಳುವೆ.

ಧ್ರುವಕುಮಾರ— ಈಗ ಇಲ್ಲಿ ಎಷ್ಟು ವಿನಯ-ವಿಧೇಯತೆ? ಅರಮನೆಯೊಳಗೆ ಸೇರಿಬಿಟ್ಟೆ ಎಂದರೆ ನೀನೇ ಒಂದು ಕಿರುಬ ! ಎಷ್ಟೊಂದು ಆಕ್ಷೇಪಿಸುತ್ತಿ ನನ್ನ ?

ಅಹಿಲ— ಅದಕ್ಕೆ ಬೇರೆ ಕಾರಣ ಬುದ್ಧಿ. ನಾವು ನಿಮ್ಮ ಕಿಂಕರರು. ರಾಣಿ ಆಕ್ಷೇಪಿಸುವುದರಿಂದ ನಾವು ಎಚ್ಚರ ವಹಿಸಬೇಕು; ಅಷ್ಟೆ. ಇಲ್ಲದಿದ್ದರೆ ನಮಗೇನು ನಿಮ್ಮಮೇಲೆ ?

ಧ್ರುವಕುಮಾರ— ಇರಲಿ ಬಿಡಪ್ಪಾ. ನಾನು ಒಳ ಹೋದನಂತರ ದಿಡ್ಡಿ ಬಾಗಿಲ ಚಿಲಕ ತೆಗೆದಿಡುವೆ.

ಅಹಿಲ— ತುಂಬ ಉಪಕಾರ ಬುದ್ಧಿ. (ಕೈ ಮುಗಿಯುವನು)
(ಧ್ರುವಕುಮಾರ ಮಾತಾಡದೆ ಎಳೆ ನಗು ಬೀರಿದ. ಅಹಿಲ ಬಲಭಾಗದ ಹಾದಿ ಹಿಡಿದು ದಿಡ್ಡಿಬಾಗಿಲ ಕಡೆ ಹೊರಟ)

(ಹಾದಿಕಳೆದು ಅರಮನೆ ಸಮೀಪಿಸುತ್ತಲೂ ಅರಮನೆಯ ವಾಮ) ಪಾರ್ಶ್ವದ ಪುಷ್ಕರಣಿಯಲ್ಲಿ ಸಾರಸಗಳ ಸರಸ ಕೇಳಿಯ ಕ್ರೇಂಕಾರ ಕಿವಿಯನ್ನು ತಾಗಿ ಅಂತಸ್ಥಲ ಹೌಹಾರಿತು. ಅವನು ಹಿಂದೆಲ್ಲಾ ಉತ್ತಮ ಕುಮಾರನೊಂದಿಗೆ ಪುಷ್ಕರಣಿಯ ತೀರದಲ್ಲಿ ಕುಳಿತು ಅವುಗಳ ಚೆಂದಾಟವನ್ನು ಕಣ್ಣಣಿಯೆ ಈಕ್ಷಿಸುತಿದ್ದ. ಆಹಾರದ ಆಮಿಷವನ್ನು ತೋರಿ ಅವುಗಳನ್ನು ಗಪ್ಪನೆ ಹಿಡಿದುಕೊಂಡು ಮುದ್ದಿಸುತಿದ್ದುದೂ ಉಂಟು. ಈಚೆಗೆ ಅರಮನೆಯನ್ನು ಬಿಟ್ಟು ಕುಟೀರದ ವಾಸ ಆರಂಭವಾದಮೇಲೆ ಅವನ ಪಾಲಿಗೆ ಅಂತಹ ಮನರಂಜನೆ ನೀಡುವ ಸೌಕರ್ಯಗಳೊಂದೂ ಇಲ್ಲ. ಕುಟಿ ಚಿಕ್ಕದಾಗಿ-ಚೊಕ್ಕವಾಗಿ ರೂಪುಗೊಂಡಿದ್ದರೂ ಅದು ಅರಮನೆಯ ಅಂತಸ್ತಿಗೆ

ಹೋಲಿಸುವಂತೆಯೇ ಇರಲಿಲ್ಲ. ಉತ್ತಾನಪಾದರಾಯ ಯಾವಾಗಾದರೊಮ್ಮೆ ಬಂದು ಹೋಗುವ. ಅದಷ್ಟರಿಂದಲೇ ಸಾಧ್ವೀ ಶಿರೋಮಣಿ ಮಡದಿಗೆ ಸಂತೃಪ್ತಿ. ಆದರೆ ಧ್ರುವಕುಮಾರನ ರೀತಿಯೇ ಬೇರೆ. ಅವನ ಆಟಪಾಠಗಳಿಗೆ, ಸ್ನೇಹಕೂಟಕ್ಕೆ ಜೊತೆಗಾರ ಬೇಕೇ ಬೇಕು; ಅದಕ್ಕಾಗಿ ಅರಮನೆಯ ಸಂಪ್ರವವನ್ನು ಉಳಿಸಿಕೊಳ್ಳುವ ಮನಸ್ಸು ಅಥವಾ ಹುಮ್ಮಸ್ಸು. ಮನೆಯಲ್ಲಿ ಬೇಸರ ಮೂಡಿದಾಗಲೆಲ್ಲ ಉತ್ತಮಕುಮಾರನೆಡೆಗೆ ಧಾವಿಸುವ ; ಹಾಗೆ ಹೋದಾಗಲೆಲ್ಲ ಸಾಮಾನ್ಯವಾಗಿ ಅರಮನೆಯ ಹೊರಗೆ ಬಹಿಃಪ್ರಕೋಷ್ಠದಲ್ಲಿ ಅಥವಾ ಅಜಿರಭೂಮಿಯಲ್ಲಿ ಉತ್ತಮಕುಮಾರನನ್ನು ಭೇಟಿಯಾಗುವ ಕಾರಣ ಅಂತಃಪುರಕ್ಕೆ ಹೋಗುವ ಪ್ರಮೇಯ ಬರುವುದೇ ಇಲ್ಲ ಧ್ರುವಕುಮಾರನಿಗೆ. ಒಂದೆರಡು ದಿನ ಹೋಗದಿದ್ದಲ್ಲಿ ಅವನೇ ಇವನನ್ನು ಒತ್ತಾಯಿಸುವ. ಕಿರಿಯರಾಣಿಯ ಮತ್ಸರ ಎಷ್ಟೇ ಇದ್ದರೂ ಮಕ್ಕಳ ಸ್ನೇಹಸಂಬಂಧ ಅಕ್ಷಯ. ಒಂದು ವೇಳೆ ಅವನ ಪ್ರಶ್ರಯವೂ ದೊರೆಯುತಿತ್ತೇನೋ ಸುರುಚಿದೇವಿಯ ಪ್ರಬಲವಾದ ವಿರೋಧವಿಲ್ಲದಿದ್ದರೆ.

ಅರಮನೆಯ ಬಹಿಃಪ್ರಕೋಷ್ಠದ ಮುಂದೆ ಗೋಮಯೋಪಲಿಪ್ತ ಅಜಿರಭೂಮಿಯು ರಂಗವಲ್ಲಿಯ ಚಿತ್ತಾರಗಳಿಂದ ಅಲಂಕೃತವಾಗಿದ್ದು ಆಟಪಾಠಗಳಿಗೆ ಅನುಕೂಲಿಸುವಂತೆ ವಿಶಾಲವಾಗಿಯೂ ಇತ್ತು. ಅದರ ಗಿಡಮರ ಬಳ್ಳಿಗಳು ಹಸುರು ಸೂಸುತ್ತವೆ. ಅವುಗಳ ಸುಖಾಶ್ರಯದಲ್ಲಿ ಶುಕ, ಸಾರಿಕೆ, ಲಾವ, ತಿತ್ತಿರ, ಕುಕ್ಕುಟ, ಕೆಂಬೂತ, ಮಯೂರ ಮುಂತಾದವುಗಳ ಕಲರವವೂ ಆಗಾಗ ಹೊಮ್ಮುವುದು.

ಹುಡುಗರಿಗೆ ಅಂಗಳದಲ್ಲಿ ಆಡಿದ ಆಟ ಬೇಸರ ಮೂಡಿಸಿದಾಗ ಆ ಮರಗಳನ್ನೇರಿ ಮರಕೋತಿ ಆಟ ಆಡುವರು. ಅದಕ್ಕೆ ಕಿರಿಯರಾಣಿಯ ತೀವ್ರ ವಿರೋಧವಿದ್ದುದರಿಂದ ಅವಳು ಅಂತಃಪುರದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಮಾತ್ರ ಅವಕಾಶ. ಇಬ್ಬರೂ ಸಮಯ ಸಾಧನೆಯಲ್ಲಿ ತಮ್ಮ ಆಶೋತ್ತರಗಳನ್ನು ಪೂರೈಸಿಕೊಳ್ಳುವರು. ಅಂತಹ ಸಂದರ್ಭದಲ್ಲಿ ದಾಸದಾಸಿಯರ ಆಕ್ಷೇಪಣೆಗೆ ಧ್ರುವಕುಮಾರ ಒಳಗಾಗುವುದು ಸಹಜ ಆದರೂ ಅವನು ಲೆಕ್ಕಿಸಿದರಷ್ಟೇ ?

ಅರಮನೆಗೆ ಅವನು ಹಾಗೆ ಹೋದಾಗಲೆಲ್ಲ ಕಿರಿಯರಾಣಿ ಒಂದಲ್ಲ ಒಂದು ಕಾರಣದಿಂದ ಆಕ್ಷೇಪವೆತ್ತುವುದರಿಂದ ದಾಸದಾಸಿಯರಿಗೆ ಕಿನಿಸಿಗೆ ಮತ್ತು ತಳಮಳ. ಅವನು ಅರಮನೆಗೆ ಬರದಿರುವುದೇ ಲೇಸು ಎಂಬ ಭಾವ ಮನದಲ್ಲಿ. ಏನಾದರೂ, ಎಂತಾದರೂ ಒಂದು ನೆಪವನ್ನು ಮುಂದಿಟ್ಟು ಅವನು ಬಂದಾಗಲೆಲ್ಲ ಹಿಂದಿರುಗಿಸುವುದರಲ್ಲೇ ಹೆಚ್ಚಿನ ಆಸಕ್ತಿ. ಆದರೆ ಅದಾವ ಕುಹಕ–ಕುತಂತ್ರಗಳನ್ನೂ ಅರಿಯದ ಉತ್ತಮಕುಮಾರನ ಸ್ವಚ್ಛ ಸ್ನೇಹಾನುರಾಗ ಆ ಎಲ್ಲಕ್ಕೂ ತಡೆ. ಅವನು ಬಂದೊಡನೆಯೇ ಇವನು ಇಲ್ಲಿಂದಲ್ಲೇ ಚಿಮ್ಮುವುದರಿಂದ 'ಬೇಡ' ಎನ್ನುವ ಪ್ರಸಂಗ ಬರುವುದೇ ಇಲ್ಲ. ಇಬ್ಬರೂ ಒಂದಾಗಿ ಆನಂದದಿಂದ ನಿರ್ಭೀತಿಗಳಂತೆ ವಿಹರಿಸುವರು ಪ್ರಾಂಗಣ-ಬಹಿಃಪ್ರಕೋಷ್ಠಗಳಲ್ಲಿ.

[ಧ್ರುವಕುಮಾರ ಅರಮನೆಯ ಹೆಬ್ಬಾಗಿಲಿಗೆ ಬಂದಾಗ ದ್ವಾರಪಾಲಕರು ಅಲ್ಲಿಂದಿಲ್ಲಿಗೆ ವಿಚರಿಸುತ್ತ ಹರಟೆಯಲ್ಲಿ ಮಗ್ನರಾಗಿದ್ದುದು ಕಂಡು ಬಂತು]

ಭೈರವ— ಇದೇನು ಬುದ್ಧಿ? ಇಷ್ಟು ಬೇಗ ಇತ್ತ ಕಡೆ ಪಯಣ...?

ಧ್ರುವಕುಮಾರ— (ಮುಗುಳು ನಕ್ಕು)ಉತ್ತಮಕುಮಾರನನ್ನು ನೋಡುವ ಉದ್ದೇಶದಿಂದ.

ಕಾಳಿಂಗ— ಈಗಾಗಲೇ ಅದಾವ ಕಾರ್ಯ ಅವರಲ್ಲಿ ?

ಧ್ರುವಕುಮಾರ— ಕಾರ್ಯ ಅಲ್ಲಪ್ಪಾ, ಕೂಡಿ ಆಡುವುದಕ್ಕೆ.

ಭೈರವ— ಬುದ್ಧೀ, ಹೊತ್ತು ಏರಿದಮೇಲೆ ಬಂದರೆ ಅವರು ಸಿಗುವುದು ಸರಿ. ಈಗ ಇಷ್ಟು ಮುಂಚೆ ಬಂದರೆ ಎಲ್ಲಿ ಸಿಗುತ್ತಾರೆ ನಿಮಗೆ ?

ಧ್ರುವಕುಮಾರ— ಹೋಗಿ ನೋಡುವೆ.

ಕಾಳಿಂಗ— ಉತ್ತಮಕುಮಾರರು ತಮ್ಮನ್ನು ಬರ ಹೇಳಿದ್ದಾರೆಯೆ?

ಧ್ರುವಕುಮಾರ— ಇಲ್ಲ ನಾನೇ ಬಂದೆ.

ಭೈರವ— ತಾವು ಅನಂತರ ಬಂದರಾಗದೇ ?

ಕಾಳಿಂಗ— ಹೋಗಲಿ ಬಿಡು ; ಇನ್ನು ಅಷ್ಟು ದೂರ ಹೋಗಿ ಬರುವುದೆಂದರೆ ಎಷ್ಟು ಶ್ರಮ ?

(ಕಂಠದಲ್ಲಿ ಕಾರುಣ್ಯದ್ರವ್ಯ ತಟ್ಟನೆ ಒಸರಿತು. ಕಾಳಿಂಗ ಹೃತ್ಪೂರ್ವಕವಾಗಿ ಹೇಳಿದ)

ಭೈರವ— ಆಯಿತು, ಒಳಗಡೆ ಹೋಗಿ ಬುದ್ಧಿ ಇನ್ನು ಮೇಲೆ ಹೊತ್ತು ಏರಿದಮೇಲೆ ಬಂದರೆ ಅನುಕೂಲ. ಇಲ್ಲದಿದ್ದರೆ ಹಿಂದಿರುಗಿ ಹೋಗಬೇಕಾಗಬಹುದು.

ಧ್ರುವಕುಮಾರ— ಎಲ್ಲಿದ್ದಾನೆ, ಉತ್ತಮಕುಮಾರ ?

ಕಾಳಿಂಗ— ಬಹುಶಃ ಅಜಿರಭೂಮಿಯಲ್ಲಿಯೇ ಇರಬಹುದು; ಹೋಗಿ ನೋಡಿ.

(ಧ್ರುವಕುಮಾರ ಹೆಬ್ಬಾಗಿಲನ್ನು ದಾಟಿ ಒಳಾಂತರಕ್ಕೆ ಕಾಲಿಟ್ಟಾಗ ಚೇಟಿಯರು ಕಂಡು ಬಂದರು. ಅದಾವ ಕಾರ್ಯ ನಿಮಿತ್ತವೋ ತೀವ್ರ ಅವಸರದಲ್ಲಿದ್ದ ಸುರುಚಿಯ ದಾಸಿ–ಕುರಂಗಿ ತಟ್ಟನೆ ನಿಂತು ಪ್ರಶ್ನಿಸುವಳು)

ಕುರಂಗಿ— ಇದೇನಪ್ಪಾ, ಇಲ್ಲಿ ಇಷ್ಟು ಮುಂಚಿನ ವ್ಯವಹಾರ ?

ಧ್ರುವಕುಮಾರ— ಉತ್ತಮಕುಮಾರನಿಗಾಗಿ ಬಂದೆ. ಅವನೆಲ್ಲಿದ್ದಾನೆ ? ಇಲ್ಲಿ ಕಾಣಿಸುತ್ತಲೇ ಇಲ್ಲವಲ್ಲ ?

(ಅವನ ಕುತೂಹಲಭರಿತ ಪ್ರಶ್ನೆಗೆ ಕುರಂಗಿಯು ಉತ್ತರಿಸುವ ಮೊದಲೇ ಮಾತಂಗಿಯು ಬಾಯ್ದೆರೆದಳು)

ಮಾತಂಗಿ— ನೀವೀಗಲೇ ಅವರನ್ನು ನೋಡಬೇಕೆ ?

ಧ್ರುವಕುಮಾರ— ಹೌದು.

ಕುರಂಗಿ— ಈಗ ಸಾಧ್ಯವಿಲ್ಲ. ಪ್ರಭುಗಳೊಂದಿಗೆ ಒಡ್ಡೋಲಗಕ್ಕೆ ಹೋಗಿದ್ದಾರೆ ಉತ್ತಮಕುಮಾರ.

ಧ್ರುವಕುಮಾರ— ನಿಜವಾಗಿ...?

ಕುರಂಗಿ— (ಮುಖವನ್ನು ವಿಕೃತಗೊಳಿಸಿ ದರ್ಪದಿಂದ) ಓ....ಹೋ! ಎಂತಹ ಪ್ರಶ್ನೆ? ನಾನೇನು ಸುಳ್ಳು ಹೇಳುತಿದ್ದೇನೆಯೇ ?

ದೌವಾರಿಕ— ಇವಳ ಗರಡಿಯಲ್ಲೇ ಅವರು ಪಳಗಿರಬಹುದು. ಯಾರಿಗೆ ಗೊತ್ತು ?

(ಇಬ್ಬರ ತುಟಿಗಳಲ್ಲೂ ಕಿರು ನಗೆ ಮೂಡಿತು)

ಮಾತಂಗಿ— ಈವತ್ತು ನನ್ನ ಮೇಲಂತೂ ಬಹಳ ಖಾರವಾಗಿದ್ದಾಳೆ. ನನ್ನ ಹೊರಹಾಕಿದರೂ ಹಾಕಬಹುದು. ನಾನು ಹಿರಿಯ ರಾಣಿಯ ಕುಟೀರಕ್ಕೆ ಹೋಗಿ ಬಿಡುವೆ. ನನಗೆ ಇವರ ಸಹವಾಸ ಬೇಡ.

ದೌವಾರಿಕ— ಹೊರ ಹಾಕಿದ ಮೇಲೆ ನಿನ್ನ ಅಲ್ಲಿರಲಿಕ್ಕಾದರೂ ಬಿಡ ಬೇಕಲ್ಲ ? ಅದನ್ನು ಮೊದಲು ಯೋಚಿಸು.

ಮಾತಂಗಿ— ಅಷ್ಟೂ ಇವಳಿಂದ ಸಾಧ್ಯವೇ ?

ದೌವಾರಿಕ— ಮತ್ತೆ, ಏನೆಂದುಕೊಂಡಿದ್ದಿ? ಕಾಲೋಚಿತವಾಗಿ ಬಾಳು ವುದನ್ನು ಈಗ ನಾವೂ ಕಲಿಯಬೇಕು !

ಮಾತಂಗಿ— ನೀನು ಪಳಗಿದ್ದಿ, ಬಿಡು.

ದೌವಾರಿಕ— ನಾವು ಪಳಗದಿದ್ದರೂ ರಾಜಕಾರಣ ಪಳಗಿಸುತ್ತೆ !

(ಮಾತಂಗಿ 'ಹೌದು' ಎಂಬಂತೆ ತಲೆದೂಗಿದಳು, ಮಾತಾಡಲಿಲ್ಲ)

(ಪರದೆ ಬೀಳುವುದು)

ಒಂದು ರಾದ್ಧಾಂತಕ್ಕೆ ದಾರಿ ಮಾಡದಿದ್ದರೆ ಅವಳು ಕುರಂಗಿಯೇ ಅಲ್ಲ.

ಮಾತಂಗಿ— ಅವಳು ಮುನಿಡಮೇಲೆ ಕೇಳಬೇಕೆ ? ಮೊದಲೇ ಚಂಡಿ !

ದೌವಾರಿಕ— ನನ್ನ ಕೆಲಸ ಬೇಕಾದಷ್ಟಿದೆ. ಇನ್ನೂ ಕಾಗದಪತ್ರಗಳ ವಿತರಣೆಯಾಗಲಿಲ್ಲ. ಕರಣಿಕರಿಗೆ ನಿರೂಪ ಕಳುಹಿಸಿದ್ದರೂ ಈವರೆಗೆ ಬರಲಿಲ್ಲ. ಅವರ ನಿರೀಕ್ಷೆಯಲ್ಲಿ ಹೆಬ್ಬಾಗಿಲ ಕಡೆ ಬಂದೆ ನಿಮ್ಮಗಳ ದರ್ಶನವಾಯಿತು; ಇಲ್ಲಿ ನಿಂತೆ. ಇನ್ನು ಕರಣಿಕರು ಬಂದರೆಂದರೆ....(ಅಷ್ಟಕ್ಕೆ ಸುಮ್ಮನಾಗುವನು)

ಮಾತಂಗಿ— ನೀನು ಬಿಡಪ್ಪಾ, ಸುಖಪುರುಷ. ಕುಂತು-ನಿಂತು ಕಾಲಹರಣ ಮಾಡಬಹುದು. ನಮಗೆ ಬೆನ್ನು ಮುರಿಯುವ ಕೆಲಸ ಇಲ್ಲಿ.

ದೌವಾರಿಕ— ಹಾಗೆನ್ನಬೇಡ. ನನಗೂ ಒಂದು ಗಳಿಗೆ ಬಿಡುವು ದೊರೆಯದಷ್ಟು ಕೆಲಸ ಕಾರ್ಯಗಳ ನಿರ್ವಹಣೆಯುಂಟು. ಈ ಕುರಂಗಿ ತಾಯಿಯನ್ನು ನೋಡಿ ಬೆಪ್ಪಾದೆ ಅಷ್ಟೆ.

ಮಾತಂಗಿ— ಇದಿಷ್ಟೆಯೇನು? ಇನ್ನು ಏನೇನಿದೆಯೋ ನೋಡಲಿಕ್ಕೆ. ನೋಡು, ಚೆನ್ನಾಗಿಯೇ ನೋಡು. ಆಮೇಲೆ ಇನ್ನಷ್ಟು ಜೋರಾಗಿ ಮಂತ್ರ ಹೇಳಬಹುದು.

ದೌವಾರಿಕ— ಅಂದರೆ....?

ಮಾತಂಗಿ— ನಾನು ಬಂದಾಗ ಏನೇನೋ ಮಣಮಣ ಮಂತ್ರ ಹೇಳಿಕೊಂಡಿದ್ದೆ ? ಅದೆಲ್ಲಾ ಯಾವಾಗ ಕಲಿತದ್ದು?

ದೌವಾರಿಕ— ಮಂತ್ರತಂತ್ರ ನನಗೆಲ್ಲಿಂದ ಬರಬೇಕು ? ಅದು ಮಂತ್ರ ಅಲ್ಲ ; ಲೋಕ ವ್ಯವಹಾರ !

ಮಾತಂಗಿ— ಅಷ್ಟಾದರೂ ತಿಳಿದುಕೊಂಡಿದ್ದೀಯಲ್ಲ, ಅದೇ ವಿಶೇಷ.

ದೌವಾರಿಕ— ಕುರಂಗಿ ಮಾತಾಯಿ ಬಂದಮೇಲೆ ದಿನಕ್ಕೊಂದು ಬಗೆ ಕಲಿಸುತ್ತಾಳೆ !

ಮಾತಂಗಿ— ಬಿಡು....ಕಿರಿಯರಾಣಿಯ ಗರಡಿಯಲ್ಲಿ ತಯಾರಾದವಳು!

ಗಳನ್ನು ಹತ್ತಿ ಹೋಗುವುದನ್ನು ನಿಟ್ಟಿಸಿದ ದೌವಾರಿಕ ತನ್ನಲ್ಲೇ ಮುಸಿ ಮುಸಿ ನಗುವನು)

ದೌವಾರಿಕ— (ಸ್ವಗತ) ರಾಜನೀತಿ–ರಾಣೀನೀತಿ ಒಂದೊಂದೂ ಚಿತ್ರ ವಿಚಿತ್ರವಾಗಿವೆ. ಇಬ್ಬರಲ್ಲೂ ಹಗಲೂ-ರಾತ್ರಿಗಳಷ್ಟು ಅಜ ಗಜಾಂತರ. ರಾಜ ದಕ್ಷನಾದರೂ ರಾಣಿಯ ಹಿಡಿತದಲ್ಲಿ ರುವುದು ಸೋಜಿಗ. ಈಗಲೇ ಹೀಗಾದರೆ ಮುಂದೇನು ಕತೆಯೋ? ಕಿರಿಯರಾಣಿ ಅರಮನೆಗೆ ಕಾಲಿಡುವ ಮುನ್ನ ಆಡಳಿತ ಚಿನ್ನದಂತೆ ಚೊಕ್ಕವಾಗಿತ್ತು. ಹಿರಿಯರಾಣಿ ದೈವ ಭಕ್ತಿ-ಗುರುಭಕ್ತಿ ಉಳ್ಳವಳು. ಪ್ರಜೆಗಳಲ್ಲಿ ಪ್ರೀತಿ-ವಿಶ್ವಾಸ ಮತ್ತೊಂದು–ಮಗದೊಂದು ಇತ್ತು. ಈ ಕಿರಿಯರಾಣಿಗೆ ಅದಾವುದೂ ಇಲ್ಲ. ಬರೀ ಬೆಡಗು ಬಿನ್ನಾಣಗಳಿವೆ. ಅದ ರಿಂದಷ್ಟು ದೊರೆಯನ್ನು ಮರುಳು ಮಾಡಿ ಸವತಿ ಮತ್ಸರ ವನ್ನು ಸಾಧಿಸಿಯೇ ಬಿಟ್ಟಳು. ಅಂದಿನಿಂದ ವ್ಯವಹಾರ ಒಂದೇ ಸಮನೆ ಕೆಡುತ್ತಿದೆ. ಹಿರಿಯರಾಣಿಯಿಂದ ರಾಣೀ ಪದವನ್ನು ಕಿತ್ತುಕೊಂಡ ಮೇಲೆ ಅವಳನ್ನು ಕಿರಿಯರಾಣಿ ಯಂತೆ ಗೌರವಪೂರ್ವಕವಾಗಿ ನೋಡಬಹುದಿತ್ತು. ಅದೂ ಇಲ್ಲ; ದಾಸಿಗಿಂತಲೂ ಕೀಳು. ಹ್ಞೂ ನಡೆದಷ್ಟು ಕಾಲ ನಡೆಯಲಿ- ಇದೆಲ್ಲಾ ನಮಗೇಕೆ? ಹೊಟ್ಟೆ ಬಟ್ಟೆಗಾಗಿ ಚಾಕರಿಯೊಂದಾದರೆ ರಾಜನಿಷ್ಠೆಯ ನೇಮ ಇನ್ನೊಂದು. ಈ ಎರಡೂ ಅಚಲವಾಗಿರುವತನಕ ಮರ್ಯಾದೆಯಿಂದ ಬಾಳಬಹುದು.

(ತುಟಿಗಳಲ್ಲಿ ತಿರಸ್ಕಾರದ ನಗು ಅಳಳುವುದು. ಅದೇ ಸಮಯಕ್ಕೆ ಸರಿಯಾಗಿ ಮಾತಂಗಿ ಪ್ರವೇಶಿಸುವಳು)

ಮಾತಂಗಿ— ಏನಪ್ಪಾ ಇಲ್ಲಿ ನಿಂತಿದ್ದಿ ?

ದೌವಾರಿಕ— ಕುರಂಗಿ ಮಾತಾಯಿ ಮುನಿದಿದ್ದಾಳೆ. ಏನೇನಾಗುತ್ತೋ ನೋಡೋಣವೆಂದು ಇಲ್ಲೇ ನಿಂತೆ. ಅಂತೂ, ಈವತ್ತು

ಕುರಂಗಿ— ಎಲ್ಲಿಂದ ಬರುತಿದ್ದಿ ? ಒಡ್ಡೋಲಗದ ಕಡೆಯಿಂದಲೇ ?

ದೌವಾರಿಕ— ಹೌದು, ಹೌದು.

ಕುರಂಗಿ— ಏನು ವಿಶೇಷ ಅಲ್ಲಿ ?

ದೌವಾರಿಕ— ವಿಶೇಷವೇ? ಧ್ರುವಕುಮಾರನ ಬಗ್ಗೆ ಕೇಳುತಿದ್ದಿ ತಾನೇ?

ಕುರಂಗಿ— ಹೌದಪ್ಪಾ, ನಾನು ಬೇಡವೆಂದರೂ ಕೇಳಲಿಲ್ಲ. ಆ ಕೆಟ್ಟ ಮಾತಂಗಿ ಇದ್ದಾಳಲ್ಲ. ಅವಳ ಒತ್ತಾಸೆ ಇದಕ್ಕೆಲ್ಲ ಕಾರಣ ನಾನು ತಡೆಯುವುದರೊಳಗಾಗಿ ಬಿರುಗಾಳಿಯಂತೆಯೇ ಹೋಗಿಬಿಟ್ಟ. ಈಗ ಅಲ್ಲಿ ಏನು ಮಾಡುತಿದ್ದಾನೆ ಅವನು?

ದೌವಾರಿಕ— ಅಲ್ಲಿ ಮಾಡುವುದೇನು ? 'ಅಪ್ಪಾ' ಅಂತ ಬಳಿಗೆ ಹೋದಾಗ ಪ್ರಭುಗಳು ಹೇಗೆ ಸುಮ್ಮನಿದ್ದಾರು ? ಅವನನ್ನು ಎತ್ತಿಕೊಂಡು ಸಿಂಹಾಸನದ ಮೇಲೆ ಪಕ್ಕದಲ್ಲಿ ಕೂಡಿಸಿಕೊಂಡರು. ಒಬ್ಬ ಮಗ ಸರ್ವಾಲಂಕಾರ ಭೂಷಿತ. ಇನ್ನೊಬ್ಬ ಗರೀಬ. ಅದೇ ಇಂದಿನ ಒಡ್ಡೋಲಗದ ವಿಶೇಷ ! (ಹಿ ಹ್ಹಿ ಹ್ಹೀ ಎಂದು ನಗುವನು)

ಕುರಂಗಿ— ನಿಜವಾಗಿ ?

ದೌವಾರಿಕ— ಹೌದು, ಹೌದು, ಹೌದು !

ಕುರಂಗಿ— ಸಿಂಹಾಸನದ ಮೇಲೆ....? ಅಯ್ಯೋ, ಎಂತಹ ಅಸಹ್ಯ! ರಾಜತ್ವವನ್ನು ಕಳೆದುಕೊಂಡ ಮೇಲೆ ಕೂಡುವುದೆಂದರೆ ಎಂತಹ ಅಭಾಸ...?

ದೌವಾರಿಕ— ಹೋಗಿ ನೋಡು ಆ ಚೆಂದ.

ಕುರಂಗಿ— ಆಯಿತು, ಈವತ್ತು ನನ್ನನ್ನು ಮುಗಿಸಿ ಬಿಡುತ್ತಾಳೆ ಮಹಾರಾಣಿ !

(ಕುರಂಗಿಯ ಮುಖ ಕೂಡಲೇ ಕಪ್ಪಿಟ್ಟಿತು. ಅವಳು ಅಂತಃಪುರದ ಕಡೆ ಹೊರಟಳು. ಭಯ ಮಾತ್ಸರ್ಯಗಳಿಂದ ಕೂಡಿದ ಚಿತ್ತ ಕಲಕಿ ಬಗ್ಗಡವಾಗಿತ್ತು. ಅವಳು ಶ್ವಾಸ ನಿಶ್ವಾಸಗಳನ್ನು ಬಿಗಿ ಹಿಡಿದು ಅಂತಃಪುರದ ಮೆಟ್ಟಿಲು

ಹೆಚ್ಚು. ಮುಂದೆ ನಿನ್ನ ಗತಿ ಏನಾದೀತು ಎಂಬುದನ್ನು ಕುರಿತು ಯೋಚಿಸಿರುವೆಯಾ ?

ಮಾತಂಗಿ— ಸುಮ್ಮನಿರು ಸಾಕು ! ನನ್ನ ಮೇಲೇಕೆ ಕೋಪ? ಧ್ರುವ ಕುಮಾರನಿಗೆ ನಾನು ಒಡ್ಡೋಲಗಕ್ಕೆ ಹೋಗಲು ಹೇಳಿದೆನೆ ?

ಕುರಂಗಿ— ಆಗಲೇ ನಾನು ಎಷ್ಟು ಬಗೆಯಲ್ಲಿ ಹೇಳಿದೆ....? ಎಲ್ಲಕ್ಕೂ ನೀನೇ ಕೊಕ್ಕೆ ಹಾಕಿದ್ದು.

ಮಾತಂಗಿ— ನಿನ್ನ ಆರೋಪಣೆ ಸಾಕು ! ಅವರು ಹೋದರೆ ನಾನೇನು ಮಾಡಬಲ್ಲೆ ?

ಕುರಂಗಿ— ಇದು ಆರೋಪಣೆಯಲ್ಲ. ನಿನ್ನ ಧೂರ್ತ ನಡತೆ ಪ್ರತ್ಯಕ್ಷ! ನಿನ್ನ ಒತ್ತಾಸೆ ಇಲ್ಲದಿದ್ದರೆ ಆ ದಾಸೀಪುತ್ರ ಹೇಗೆ ಒಡ್ಡೋಲಗಕ್ಕೆ ಪ್ರವೇಶಿಸುತಿದ್ದ ?

ಮಾತಂಗಿ— ಎಲೆ,ಅಧಿಕಪ್ರಸಂಗಿ! ನೀನು ಪ್ರಭುಗಳ ಉಪ್ಪುಂಡು ಅವರ ವಂಶಾವಳಿಯ ಮೇಲೆ ಎಂತಹ ಅತ್ಯಾಚಾರ ನಡೆಸುತಿದ್ದಿ ? ನೀನು ದಾಸಿಯೋ, ಪಟ್ಟದರಾಣಿಯೋ ?

(ಆ ಮಾತಿನಿಂದ ಕೆರಳಿ ಕೆಂಡವಾದಳು ಕುರಂಗಿ)

ಕುರಂಗಿ— ನೀನು ಈಗಲೇ ಬಾ, ರಾಣಿಯ ಬಳಿಗೆ ! ಹಳೆ ಹೆಗ್ಗಣದ ಕೊಬ್ಬೆಷ್ಟು ನೋಡಿ ಬಿಡುವೆ.

ಮಾತಂಗಿ— ಹೊಸ ಹೆಗ್ಗಣಗಳ ಹಾವಳಿಯಿಂದ ಹಳೇ ಹೆಗ್ಗಣಗಳು ಎಲ್ಲಿ ಉಳಿಯಬೇಕು? ನಿನ್ನ ಬಳಿ ನನಗೆ ಯಾವ ವ್ಯವಹಾರವೂ ಬೇಡ ಹೋಗು, ಹೋಗು !

(ಆ ಕ್ಷಣವೇ ಅಲ್ಲಿಂದ ಸರಸರ ಹೊರಟಳು ಮಾತಂಗಿ. ಕುರಂಗಿ ಇನ್ನೂ ಏನೇನು ಹೇಳಬಯಸಿದ್ದಳೋ ಅದೆಲ್ಲಾ ಕಂಠಸ್ಥವಾಗಿ ತನ್ನಲ್ಲೇ ಉಳಿಯಿತು. ಸಿಟ್ಟಿನಿಂದ ಕಿಡಿಕಿಡಿಯಾಗಿ ಅಂತಃಪುರದ ಕಡೆ ಹೊರಟಾಗಲೇ ಒಡ್ಡೋಲಗದ ಕಡೆಯಿಂದ ಬರುತಿದ್ದ ದೌವಾರಿಕ ಎದುರಾದ. ಕುರಂಗಿಯ ಮನಸ್ಸು ಅತ್ತ ಹೊರಳಿ ತಟ್ಟನೆ ಅಲ್ಲೇ ನಿಂತಳು)

ಕುರಂಗಿ— (ಅಧಿಕಾರಯುಕ್ತಕಂಠಸ್ವರದಿಂದ)ಒಡ್ಡೋಲಗದಲ್ಲಿ ಪಂಡಿತರೂ, ರಾಜಕಾರಣಿಗಳೂ, ಅಧಿಕಾರಿಗಳೂ, ನೆರೆದಿರುತ್ತಾರೆ. ಈಗ ಯಾರೂ ಅಲ್ಲಿಗೆ ಹೋಗುವುದು ಸರಿಯಲ್ಲ.

ಧ್ರುವಕುಮಾರ— ಹಾಗಾದರೆ, ಇಲ್ಲೇ ಸ್ವಲ್ಪಹೊತ್ತು ಇದ್ದು ನೋಡುವೆ. ಉತ್ತಮಕುಮಾರ ಹೊರಬರುತ್ತಾನೇನೋ.

ಕುರಂಗಿ— (ಏರಿದ ದನಿಯಲ್ಲಿ)ಕಾಯುವುದರಿಂದೇನು ಫಲ? ಅವರೀಗ ಖಂಡಿತ ಸಿಗುವುದಿಲ್ಲ.

ಮಾತಂಗಿ— (ಕುರಂಗಿಯನ್ನು ಕುರಿತು) ಮಗು ಇಲ್ಲಿರುವುದರಿಂದ ನಿನಗೇನು ಬಾಧಕ? ಏಕೆ ಅಷ್ಟೊಂದು ಕಟ್ಟಾಜ್ಞೆ. ಒಂದು ವೇಳೆ ಉತ್ತಮಕುಮಾರ ಹೊರಬಂದರೆ ಆಡಿಕೊಳ್ಳಲಿ.

ಕುರಂಗಿ— ಸರಿ; ಸರಿ ನಿನಗೆ ರೀತಿನೀತಿ ಒಂದೂ ತಿಳಿಯದು. ಮಗು ಇರುವುದರಿಂದ ಬಾಧಕವೇನೂ ಇಲ್ಲ. ಇಲ್ಲಿ ಇದ್ದು ಮಾಡುವುದಾದರೂ ಏನು ? ಅದು ನಮ್ಮ ಪ್ರಶ್ನೆ.

(ಆ ಮಾತು ಕೇಳಿ ಧ್ರುವಕುಮಾರನ ಚಿತ್ತ ಪ್ರಕ್ಷುಬ್ಧವಾಯಿತು. ತಕ್ಷಣ ಹಿಂದೆ ಮುಂದೆ ಯೋಚಿಸದೆ....)

ಧ್ರುವಕುಮಾರ— ಸರಿ ; ನನಗೆ ಯಾರ ಸಹಾಯವೂ ಬೇಡ. ನಾನೇ ಒಡ್ಡೋಲಗಕ್ಕೆ ಹೋಗುವೆ.

ಕುರಂಗಿ— ಧ್ರುವಕುಮಾರ....ಇದೇನು ?

(ಅತ್ಯಂತ ಉದ್ವೇಗದಿಂದ ಆ ಮಾತು ಹೊರಬೀಳುವುದರೊಳಗಾಗಿ ಅವನು ಒಡ್ಡೋಲಗದ ಕಡೆ ಧಾವಿಸಿಯೇ ಬಿಟ್ಟ. ಚಿಗರಿಯಂತಹ ಅವನ ಚಟುವಟಿಕೆಯನ್ನು ಕಂಡು ಮಾತಂಗಿ ಸಂತುಷ್ಟಳಾದರೆ ಕುರಂಗಿಯ ಮನಸ್ಸು ಮತ್ಸರದಿಂದ ಕೊತ ಕೊತ ಕುದಿಯಿತು)

ಕುರಂಗಿ— (ಮಾತಂಗಿಯ ಕಡೆ ತೀಕ್ಷ್ಣ ನೋಟವನ್ನು ಹರಿಸಿ)ಎಂಥ ಮಳೆ ನೀನು? ನಿನ್ನ ಒತ್ತಾಸೆಯಿಂದಲೇ ಧ್ರುವಕುಮಾರ ಒಳಹೋಗಲು ಕಾರಣ. ಎಲೆ ದುಷ್ಟೆ! ನಿನಗೆ ಪ್ರತಿಷ್ಠೆ

ಮಾತಂಗಿಯಲ್ಲಿ. ಎಷ್ಟಾದರೂ ಹಳೆಯದಾಸಿ, ಸುನೀತಿ ದೇವಿಯ ಕಾಲದಿಂದಲೂ ಇದ್ದವಳು)

ಮಾತಂಗಿ— ನೀನು ಒಡ್ಡೋಲಗಕ್ಕೆ ಹೋಗಿ ಉತ್ತಮಕುಮಾರನನ್ನು ಕರೆತರಬಲ್ಲೆಯಾ ? ಹೇಗೂ ನೀನು ಅತ್ತ ಹೋಗುವವಳಿದ್ದಿ. (ಅವಳ ಕೋಪವನ್ನು ಅಲಕ್ಷಿಸಿ, ಅನುಕಂಪ ಯುಕ್ತವಾಣಿ ಹೊಮ್ಮಿತು)

(ಸುರುಚಿದೇವಿಯು ಬಯಸಿದಾಗಲೆಲ್ಲ ಕುರಂಗಿಯು ಒಡ್ಡೋಲಗಕ್ಕೆ ಹೋಗಿ ಉತ್ತಮಕುಮಾರನನ್ನು ಕರೆತರುತಿದ್ದುದರಿಂದಲೇ ಆ ಮಾತು ಹೇಳಿದ್ದಳು ಮಾತಂಗಿ. ಆದರೆ ಅದು ಕುರಂಗಿಯ ಚಿತ್ತವನ್ನೇ ಕೆರಳಿಸಿತು)

ಕುರಂಗಿ— ನೀನು ಎಂಥ ಮಾತು ಹೇಳುತಿದ್ದಿ ? ವಿನಾಕಾರಣ ಹೋದರೆ ಪ್ರಭುಗಳು ಏನೆಂದಾರು ? (ದನಿ ಕಟುವಾಗಿ ಹರಿಯಿತು)

ಮಾತಂಗಿ— ಧ್ರುವಕುಮಾರ ಬಂದಿದ್ದಾರೆ ಎಂದರಾಯಿತು.

ಕುರಂಗಿ— ಈಗ ಅಲ್ಲಿಗೆ ಹೋದರೆ ಕಪಾಳಮೋಕ್ಷವಾದೀತು ! ತಿಳಿಯಿತೇ ?

(ಅವಳ ಅಸಮಾಧಾನ ಮತ್ತು ಅಸಹಕಾರಗಳ ಆಳವೆಷ್ಟೆಂಬುದನ್ನರಿತ ಧ್ರುವಕುಮಾರನ ಮನದಲ್ಲಿ ಸ್ವಲ್ಪ ಹೊತ್ತು ಕಿಂಕರ್ತವ್ಯತೆ ತುಂಬಿ ಹೋಯಿತು. ಸುಮ್ಮನೆ ಇಬ್ಬರ ಮುಖವನ್ನೂ ದೃಷ್ಟಿಸಿ ನೋಡಿದ. ಮಾತಂಗಿಯ ಸಮಾಧಾನವೆಷ್ಟೋ ಅಸಹಾಯಕತೆಯೂ ಅಷ್ಟೇ. ಅವರಲ್ಲಿ ಯಾರೊಬ್ಬರ ಸಹಾಯವನ್ನು ಅಪೇಕ್ಷಿಸುವುದಕ್ಕಿಂತ ತಾನೇ ಹೋಗಬಾರದೇಕೆ ಎಂಬ ಪ್ರಶ್ನೆಯು ಉದಿಸಿ ಬುದ್ಧಿ ಭಾವದ ಸೂಕ್ಷ್ಮತೆರೆ ಎಳೆಎಳೆಯಾಗಿ ಮೈಗೂಡಿಕೊಂಡಿತು ಮನದಲ್ಲಿ)

(ಆಗ ಧ್ರುವಕುಮಾರ ಮಾತಾಡದೆ ಅವಳನ್ನು ದಿಟ್ಟಿಸಿ ದಿಟ್ಟಿಸಿ ನೋಡುತ್ತಾನೆ)

ಮಾತಂಗಿ— ಅವರು ಒಡ್ಡೋಲಗಕ್ಕೆ ಹೋಗುವುದುಂಟು. ಹಾಗೆ ಹೋಗಿರಲೂ ಬಹುದು. ನಾನು ಮಾತ್ರ ನೋಡಲಿಲ್ಲ. (ನುಡಿ ವಿನೀತಭಾವದಿಂದ ಹೊರಬಿತ್ತು)

ಧ್ರುವಕುಮಾರ— ಹಾಗಾದರೆ, ನಾನೂ ಅಲ್ಲಿಗೆ ಹೋಗುವೆ.

ಕುರಂಗಿ— ಛೀಃ ! ಅದು ಸರಿಯಲ್ಲ. ನೀವಲ್ಲಿಗೆ ಹೋಗಕೂಡದು !

ಧ್ರುವಕುಮಾರ— ಅದೇಕೆ ?

ಕುರಂಗಿ— ಅಲ್ಲಿ ರಾಜಸಭೆ ನಡೆಯುತ್ತಿದೆ, ವಂದಿಮಾಗಧರಿರುತ್ತಾರೆ; ಹೀಗೆ ಒಮ್ಮಿಂದೊಮ್ಮೆಲೇ ಹೋಗುವುದು ಸರಿಯಲ್ಲ. (ದರ್ಪದಿಂದ ಕೂಡಿದ ನುಡಿ ಕರ್ಕಶವಾಗಿತ್ತು)

ಧ್ರುವಕುಮಾರ— ಈಗ... (ಮಾತನ್ನು ಅಷ್ಟಕ್ಕೆ ತುಂಡುಗಡಿದು ಮಾತಂಗಿಯ ಕಡೆ ನಿಟ್ಟಿಸುತ್ತಾನೆ)

ಮಾತಂಗಿ— ನೀವು ಅನಂತರ ನೋಡಿದರೆ ಆಗದೇ ಕುಮಾರ ?

ಧ್ರುವಕುಮಾರ— ಅದಿರಲಿ, ಉತ್ತಮಕುಮಾರ ಹೋಗಿದ್ದಾನೆ ; ನಾನೇಕೆ ಹೋಗಬಾರದು ?

(ಆ ಪ್ರಶ್ನೆಯನ್ನು ಕೇಳಿ ಕುಪಿತಳಾದ ಕುರಂಗಿ ಸಿಡುಕಿನಿಂದ ಉತ್ತರಿಸುತ್ತಾಳೆ)

ಕುರಂಗಿ— ಈ ಪ್ರಶ್ನೆ ಇಲ್ಲಿ ಏಳಬಾರದು !

(ಧ್ರುವಕುಮಾರ ಒಮ್ಮೆಲೇ ಚಕಿತನಾದ. ಭಾವಭರಿತ ನೋಟ ಇಬ್ಬರ ಕಡೆಗೂ ಹರಿಯಿತು)

ಮಾತಂಗಿ— (ಮರುಕದಿಂದ) ಈ ಸಲ ಬಿಡು ಮಗೂ. ಇನ್ನೆಂದಾದರೂ ಹೋಗಬಹುದು.

(ಸುರುಚಿಯ ಅಚ್ಚುಮೆಚ್ಚಿನ ದಾಸಿ-ಕುರಂಗಿ. ಅವಳಿಗೆ ಮಾತಂಗಿಯ ಮರುಕ ಶೂಲದಂತೆ ಇರಿಯುವುದು ಸಹಜ: ತೀಕ್ಷ್ಣ ದೃಷ್ಟಿಯಿಂದ ನೋಡುತ್ತ ತೀವ್ರ ಅಸಮಾಧಾನವನ್ನು ಸೂಸುವಳು. ಆದರೇನು? ಅಂದಿಂದಿನ ಅನುಕಂಪನೇ

ದೃಶ್ಯ

೩

[ಕುರಂಗಿಯು ತೀವ್ರಗತಿಯಲ್ಲಿ ಮೆಟ್ಟಿಲು ಹತ್ತಿ ಅಂತಃಪುರವನ್ನು ಪ್ರವೇಶಿಸಿದಾಗ ಸುರುಚಿದೇವಿಯು ಕಟ್ಟಿದ್ದ ಮುಡಿಯನ್ನು ಬಿಚ್ಚಿ ಬಾಚಿ ಕೊಳ್ಳುವುದರಲ್ಲಿದ್ದಳು. ಪಾದಸಪ್ಪಳ ಕೇಳಿ ಹಿಂತಿರುಗಿ ನೋಡಿದ ಅವಳು ಕುರಂಗಿಯ ವಿಚಿತ್ರ ರೀತಿಯ ಪ್ರವೇಶ ಮತ್ತು ಕುಪಿತ ಮುಖಭಾವ ಇವುಗಳನ್ನು ಕಂಡು ಒಂದು ಗಳಿಗೆ ಡಂಗು ಬಡಿದಂತಾದಳು. ತರುವಾಯ ಕೈಯಲ್ಲಿದ್ದ ಬಾಚಣಿಗೆಯೂ ಸಹ ಹಾಗೆಯೇ ವ್ಯರ್ಥವಾಗುಳಿದು ಅವಳ. ಮನಸ್ಸು, ಆತ್ಮ, ಪ್ರಾಣ ಎಲ್ಲವೂ ಕುರಂಗಿಯೆಡೆಗೇ ಕೇಂದ್ರೀಕೃತವಾದುವು. ಕರತಳ ಮೆಲ್ಲಮೆಲ್ಲಗೆ ಸ್ವೇದಧಾರೆಯಿಂದ ಆರ್ದ್ರವಾಗತೊಡಗಿತು. ಏನು ಕೇಳಲೂ ತಕ್ಷಣ ನಾಲಿಗೆ ಹೊರಳಲಿಲ್ಲ. ಹೇಗೂ ಸನಿಹಕ್ಕೆ ಬರುತ್ತಾಳಷ್ಟೆ ಎಂಬ ನಿರೀಕ್ಷೆ ಮನದಲ್ಲಿ. ಅಂತೂ, ಕುರಂಗಿ ಆವುದೋ ವಿಚಿತ್ರ ಸನ್ನಿವೇಶದಲ್ಲಿ ಸಿಕ್ಕಿದ್ದಾಳೆ ಎಂಬುದು ಆಗಲೇ ಸುಸ್ಪಷ್ಟ.ಅವಳು ಸಮೀಪಿಸುವುದನ್ನು ಎದುರು ನೋಡುತ್ತ ಮೂರ್ತಿಮತ್ತಾಗಿ ಬಿಟ್ಟಳು ಸುರುಚಿದೇವಿ.ಹೃದಯಕರಂಡ ಆತುರತೆಯ ಆವೇಗದಿಂದ ತುಂಬಿ ಬಿರಿಯುತ್ತಿರುವಂತೆ ಭಾಸವಾಯಿತು.

ಆದರೆ, ಆಕ್ಷಣದಲ್ಲಿ ರಾಣಿಯ ತೀವ್ರಾತುರತೆಯನ್ನು ಗ್ರಹಿಸಿದ ಕುರಂಗಿಯ ಉತ್ಸಾಹವೆಲ್ಲಾ ಒಂದೇ ಬಾರಿಗೆ ಇಳಿದು ಹೋಯಿತು, ಸಾಗರ ಉಬ್ಬರವೇ ಇಳಿದು ಹೋದಂತೆ. ಅವಳ ಕ್ಷಿಪ್ರ ಕೋಪೋದ್ವೇಗ ಗೊತ್ತಿಲ್ಲದಿಲ್ಲ. ತಾನು ಮುಂದುವರಿಯಬೇಕೋ ಬೇಡವೋ ಎಂಬ ಸಮಸ್ಯೆ ಬೇರೆ. ಸುದ್ದಿ ಕೊಡುವುದರಿಂದ ಎಲ್ಲಿ ತಾನೇ ಅವಳ ಕೋಪಾನಲಕ್ಕೆ ಸಿಕ್ಕಬಹುದೋ ಎಂಬ ತೀವ್ರ ಭಯ ಮತ್ತು ಆಶಂಕೆ. ಒಂದು ಗಳಿಗೆ ಅವಳಿಂದ ಒಂದು

ಹೆಜ್ಜೆಯನ್ನೂ ತೆಗೆಯಲಾಗಲಿಲ್ಲ ಹೊಸ್ತಿಲ ಬಳಿಯಿಂದ. ಮೊದಲೇ ಶಂಕಿತ ಚಿತ್ತ ಸುರುಚಿದೇವಿಯದು, ಅನಂತರ ಹೇಳುವುದೇನು ? ಅವಳು ಇನ್ನಷ್ಟು ಉದ್ವೇಗದ ಸುಳಿಯಲ್ಲಿ ಸಿಕ್ಕಿ ಕಣ್ಣುಗಳು ಲೋಹಿತವರ್ಣ ತಳೆಯತೊಡಗಿದುವು. ಆದರೂ ಸಹ, ಕುರಂಗಿ ಮುಂಬರಿಯಲಿಲ್ಲ. ಸುರುಚಿದೇವಿ ಬಯಸಿದ್ದ ಕ್ಷಿಪ್ರ ನಿರೀಕ್ಷೆ ಪೂರ್ಣ ವಿಫಲಗೊಂಡ ಮೇಲಂತೂ ತೀವ್ರಾತುರದಲ್ಲಿ ಸಿಕ್ಕಿ ದೊಡ್ಡದಾಗಿ ಬಾಯ್ದೆರೆದು....]

ಸುರುಚಿದೇವಿ— ಎಲೇ, ಹಾಳಾದವಳೇ ! ನೀನು ಒಳಗೆ ಬಂದದ್ದೇಕೆ ? ಅಲ್ಲೇ ನಿಂತದ್ದೇಕೆ? ಏನಾಯಿತು ನಿನಗೆ ? ಏನು ಸಮಸ್ಯೆ ನಿನ್ನಲ್ಲಿ ?
(ಪ್ರಶ್ನೆಗಳ ಮೇಲೆ ಪ್ರಶ್ನೆ, ರೋಷರುದ್ಧ ಕಂಠ, ರಂಗು ರಂಗಿನ ಮುಖವರ್ಣ, ಹಣೆ ಸೀಮಂತರೇಖೆಗಳ ಮೇಲೆ ಕೆದರಿ ಆಚ್ಛನ್ನವಾದ ಅಲಕರಾಶಿ ಒಂದೊಂದು ಗಮನೀಯವೇ. ಕುರಂಗಿ ಏನೋ ಹೇಳಲೆಂದು ತಲೆಯೆತ್ತಿ ನೋಡುವ ಸಾಹಸ ಮಾಡಿದಳೇನೋ, ಅದಕ್ಕಿಂತ ಹೆಚ್ಚಾದ ಯಾವ ಕ್ರಮ ಕೈಕೊಳ್ಳಲೂ ಅವಳಿಂದ ಸಾಧ್ಯವಾಗಲಿಲ್ಲ. ಕೈಕಾಲುಗಳಲ್ಲಿ ನಡುಕಂಪನದ ಅಲೆ ಹರಿದಾಡಲಾರಂಭಿಸಿತು)

ಸುರುಚಿದೇವಿ— ನಿನಗೇನಾಯಿತೇ ಮೂಳಿ ? ಏಕೆ ಬಂದಿದ್ದೀ ? ಒದರ ಬಾರದೇ ?

ಕುರಂಗಿ— (ಪ್ರಯತ್ನ ಪೂರ್ವಕವಾಗಿ)ನಾನು....ಹೇಳಿದೆ....(ಮುಂದೆ ಮಾತು ಹೊರಡಲೇ ಇಲ್ಲ. ಒಣಗಿದ ತುಟಿಗಳನ್ನು ನಾಲಿಗೆಯಿಂದ ಒರಸಿಕೊಂಡು ಸುಮ್ಮನಾದಳು)

ಸುರುಚಿದೇವಿ— ಏನು ನೀನು ಹೇಳಿದ್ದು ? ಸರಿಯಾಗಿ ಹೇಳು !
(ರಾಣಿಯ ಮನಸ್ಥಿತಿ ಕ್ಷಣಕ್ಷಣಕ್ಕೂ ಅಸ್ತವ್ಯಸ್ತಗೊಳ್ಳುತಿದ್ದುದು ಗಮನಕ್ಕೆ ಬಂತು. ಇನ್ನು ಅವಳನ್ನು ಕಾಯಿಸಿದರೆ ಏಟು ತಿನ್ನುವುದಂತೂ ಖಂಡಿತ. ಕಾಲುಗಳ ಶಕ್ತಿ

ಉಡುಗುತಿದ್ದರೂ,ಗಂಟಲಿನ ಹಸಿ ಒಣಗುತಿದ್ದರೂ ಹೇಳದೆ ವಿಧಿ ಇರಲಿಲ್ಲ. ತಾನೇ ಆರಂಭಿಸಿದ ಪ್ರಕರಣ ; ತಾನೇ ರಂಗುರಂಗಾಗಿ ವಿವರವನ್ನು ಮುಂದಿಡುವುದರಿಂದ ರಾಣಿಯವಿಶ್ವಾಸ-ಕರುಣೆಗಳನ್ನುಸಂಪಾದಿಸಬಹುದುಎಂಬ ಕಿಂಚಿತ್ ಆಶಾಭಾವ ಮನದಲ್ಲಿ. ಅಂತೂ, ಕುರಂಗಿ ತನ್ನನ್ನು ತಾನೇ ಸಾವರಿಸಿಕೊಂಡು ಹತ್ತು ಹೆಜ್ಜೆಮುಂದು ವರಿಯುವುದರಲ್ಲಿ ಶಕ್ತಳಾದಳು. ಆದರೆ ಒಂದೊಂದು ಹೆಜ್ಜೆಯೂ ಮಣಭಾರ; ಶ್ವಾಸನಿಶ್ವಾಸಗಳೂ ಮಣಭಾರ. ಕಳೆದುಳಿದ ಶಕ್ತಿಯನ್ನೆಲ್ಲಾ ತಾನೇ ಸಾಹಸ ಪೂರ್ವಕ ವಾಗಿ ಕ್ರೋಢೀಕರಿಸಿ ಸನಿಹಕ್ಕೈತಂದು ನಮಸ್ಕರಿಸಿದಳು)

ಕುರಂಗಿ— ತಾಯಿ, ನಿಮಗೆ....ಹೇಳಲೇ ಬೇಕಾದ...ವಿಚಾರವಿತ್ತು ...ಬಂದೆ ಕ್ಷಮಿಸಿ.

ಸುರುಚಿದೇವಿ— ಏನದು ಬೇಗನೆ ಹೇಳು? ಏನಾಗಿದೆ ನಿನಗೆ? ಎಷ್ಟೊತ್ತು ಕಾಯಲಿ ನಾನು ?

ಕುರಂಗಿ— ನೀವು ಕೋಪಿಸಿಕೊಳ್ಳಬೇಡಿ ತಾಯಿ....ನನಗೆ ಅದೇ ಭಯ.

ಸುರುಚಿದೇವಿ— ನೀನು ಹೀಗಾಡಿದರೆ ಯಾರಿಗಾದರೂ ಕೋಪವೇ? ಏನು ಸಮಾಚಾರ ? ಏನಾದರೂ ಹೇಳುವುದಿತ್ತೇ ?

ಕುರಂಗಿ— ಹೌದು! ಅದಕ್ಕೇ ಬಂದದ್ದು—ನಿಮ್ಮನ್ನು ನೋಡು ತ್ತಲೂ ನನಗೆ ಭಯವಾಯಿತು....(ಮುಂದೆ ಮಾತಾಡದೆ ಅವಳ ಅಪ್ಪಣೆಯನ್ನು ನಿರೀಕ್ಷಿಸುವಳು)

ಸುರುಚಿದೇವಿ— ಹೇಳು ಮತ್ತೆ, ಏಕೆ ಸುಮ್ಮನೆ ಇದ್ದಿ ?

ಕುರಂಗಿ— ಈಗ....ನಾನು ಪಡಸಾಲೆಯ ಕಡೆಯಿಂದ ಬರುವಾಗ.... (ಅಷ್ಟಕ್ಕೆ ಉಸಿರು ಕಟ್ಟಿದಂತೆ ಉಗುಳು ನುಂಗುವಳು)

ಸುರುಚಿದೇವಿ— ಉತ್ತಮಕುಮಾರ ಒಡ್ಡೋಲಗದಲ್ಲಿದ್ದಾನಷ್ಟೆ ?

ಕುರಂಗಿ— ಹೌದು, ಇದ್ದಾರೆ. ಧ್ರುವಕುಮಾರರೂ ಅಲ್ಲಿಗೆ ಹೋಗಿ ದ್ದಾರೆ.

ಸುರುಚಿದೇವಿ— ನಿಜವಾಗಿ ...?

(ಆಶ್ಚರ್ಯ–ಉದ್ವೇಗಗಳ ಒಕ್ಕೂಟವಾದಳು ಸುರುಚಿ)

ಕುರಂಗಿ— (ತಲೆಬಾಗಿ) ಹೌದು... ತಾಯಿ.

ಸುರುಚಿದೇವಿ— ಒಡ್ಡೋಲಗಕ್ಕೆ ಧ್ರುವ....?

ಕುರಂಗಿ— ಹೌದು ಅದನ್ನೇ ನಾನು ತಿಳಿಸ ಬಂದದ್ದು !

ಸುರುಚಿದೇವಿ— ಅವನಿಗೇನು ಕೆಲಸ ಅಲ್ಲಿ? ಎಂತಹ ಅಸಹ್ಯ !

ಕುರಂಗಿ— ನಾನು ಬೇಡವೆಂದು ಎಷ್ಟೋ ಹೇಳಿದೆ ತಾಯಿ....

ಸುರುಚಿದೇವಿ— ಅವನನ್ನು ತಡೆಯಲಿಲ್ಲವೇಕೆ ?

ಕುರಂಗಿ— ನಾನು ಹೇಳುವಷ್ಟು ಹೇಳಿದೆ. ಮಾತಂಗಿ ಅಲ್ಲಿಯೇ ಇದ್ದಳು. ಅವಳ ಪ್ರೋತ್ಸಾಹದಿಂದಲೇ ನನ್ನ ಮಾತನ್ನು ಲಕ್ಷಿಸಲಿಲ್ಲ, ಧ್ರುವಕುಮಾರ.

ಸುರುಚಿದೇವಿ— (ಕೈಯ್ಯಲ್ಲಿದ್ದ ಬಾಚಣಿಗೆಯನ್ನು ರೊಯ್ಯನೆ ಬಿಸುಟು, ಕೋಪದ ಕಿಡಿಗಳನ್ನು ಕಾರಿ) ಹೇಗೆ ಬಿಟ್ಟೆ? ದರದರನೆ ಎಳೆದು ಆಚೆಗೆ ಹಾಕಬೇಕಿತ್ತು !

ಕುರಂಗಿ— ತಾಯಿ, ನನ್ನನ್ನು ಕ್ಷಮಿಸಿಬಿಡಿ...ತಪ್ಪು ನನ್ನದಲ್ಲ ಮಾತಂಗಿಯದು.

(ಕೈಮುಗಿದು ಅಡ್ಡ ಬೀಳುವಳು)

ಸುರುಚಿದೇವಿ— ಚೆನ್ನಂಗಿ ಇರಲಿಲ್ಲವೇ ಅಲ್ಲಿ ?

ಕುರಂಗಿ— ಇಲ್ಲ ತಾಯಿ. ಅವಳಿಂದು ಬಂದಿಲ್ಲ, ಹೊಟ್ಟೆ ಶೂಲೆ ಯಂತೆ.

ಸುರುಚಿದೇವಿ— ಅವಳಿದ್ದರೆ ಇಂತಹ ಅನಾಹುತಗಳು ನಡೆಯುವುದಿಲ್ಲ. ನೀನು ನಿಷ್ಪ್ರಯೋಜನ ! ಪ್ರಾಂಗಣದಿಂದ ಅವನನ್ನು ಹಿಂದಕ್ಕೆ ಕಳುಹಿಸಬೇಕಾಗಿತ್ತು.

ಕುರಂಗಿ— ಅವರು ಪ್ರಾಂಗಣಕ್ಕೇ ಬಂದದ್ದು. ಉತ್ತಮಕುಮಾರ ಒಡ್ಡೋಲಗದಲ್ಲಿದ್ದದ್ದು ತಿಳಿದು ಅಲ್ಲಿಗೆ ಹೋದರು! ನಾನು ಬೇಡವೆಂದೆ. ಆ ಮಾತಂಗಿ ಎಲ್ಲಕ್ಕೂ ಕೊಕ್ಕೆ ಹಾಕಿದಳು.

ಸುರುಚಿದೇವಿ— ಅವಳನ್ನು ಇಂದೇ ಇಲ್ಲಿಂದ ಹೊರಹಾಕು. ನೀನು. ಚೆನ್ನಂಗಿ ಅಂತಃಪುರಕ್ಕೆ ಸಾಕು. ಇತರೆಯುವರು ಒಳಗಡೆ ನೋಡಿಕೊಳ್ಳಲಿ.

ಕುರಂಗಿ— ಧ್ರುವಕುಮಾರ ಪ್ರಭುಗಳೊಂದಿಗೆ ಸಿಂಹಾಸನದಲ್ಲಿ ಮಂಡಿಸಿದ್ದಾರಂತೆ !

ಸುರುಚಿದೇವಿ— ಏನು ? ಪ್ರಭುಗಳೊಡನೆ ಸಿಂಹಾಸನದಲ್ಲಿ ?

ಕುರಂಗಿ— ಹಾಗೆಂದು ...ದ್ವಾರಪಾಲಿಕ....ಹೇಳಿದ. (ತಲೆ ಬಾಗುವಳು)

ಸುರುಚಿದೇವಿ— ಸಿಂಹಾಸನವನ್ನೇರಲು ಆ ತೊತ್ತಿಗೆ ಅದೆಷ್ಟು ಧೈರ್ಯ ?

ಕುರಂಗಿ— ನಾನು ಹೋಗಿ ನೀವು ಬರಹೇಳಿದ್ದಿರೆಂದು ಕರೆಯಲೇ ?

ಸುರುಚಿದೇವಿ— ನಿನ್ನ ಮಾತನ್ನು ಲಕ್ಷಿಸುವನೇ ?

ಕುರಂಗಿ— ಅವರೇ....(ಮುಂದೆ ಮಾತು ಹೊರಡದೆ ಸುಮ್ಮನಾಗುವಳು)

ಸುರುಚಿದೇವಿ— ಎಲ್ಲಾ ಆದಮೇಲೆ ಬಂದಿದ್ದಿ, ನಡೆ ! ತೊತ್ತಿನ ಹೆಣ್ಣೆ! ನಿನ್ನಿಂದೇನಾದೀತು ?

(ಕುರಂಗಿ ತಲೆಬಾಗಿದಳು.ಕೋಪತಾಪಗಳ ಸಿಡಿಮದ್ದಾದ ರಾಣಿಯನ್ನು ಹುಬ್ಬೆತ್ತಿ ನೋಡುವುದೂ ಸಹ ಕಷ್ಟವಾಯಿತು. ಕೈಕಾಲುಗಳು ನಡುಗುತಿದ್ದುದರಿಂದ ಎಲ್ಲಿ ಕುಸಿದು ಬೀಳುವೆನೋ ಎನ್ನಿಸಿತು ಅವಳಿಗೆ)

ಸುರುಚಿದೇವಿ— ನಡೆ, ಒಡ್ಡೋಲಗಕ್ಕೆ ಹೋಗೋಣ. ಅದೇನಾಗಿದೆಯೋ ನೋಡಿ ಬಿಡುವೆ.

ಕುರಂಗಿ— (ಈಗ....ತೊದಲುವಳು)

ಸುರುಚಿದೇವಿ— ಈಗಲೇ ಸರಿ ; ಮತ್ತೇಕೆ ಕಂಬದಂತೆ ನಿಂತೆ ? ನಡೆ ಹೋಗೋಣ !

(ಅತ್ಯಂತ ಕೋಪೋದ್ದೀಪ್ತಳಾದ ರಾಣಿಯ ಮೈ-ಮನಸ್ಸು ಸಿಡಿಮದ್ದಾಗಿ, ಕಣ್ಣುಗಳೆರಡೂ ರಕ್ತರಂಜಿತವಾದುವು. ತಾನು ಆ ಸುದ್ದಿಯನ್ನು ಮುಟ್ಟಿಸುವಾಗ ರಾಣಿಯು ಒಡ್ಡೋಲಗಕ್ಕೆ ಧಾಳಿ ಇಟ್ಟಾಳೆಂಬ ಭಾವನೆ ಇರಲಿಲ್ಲ

ಕುರಂಗಿಗೆ. ಹಾಗಾಗಬಾರದು, ಅದರಿಂದ ರಾಣಿಗೇ ಅಪಕೀರ್ತಿ ಎಂಬುದು ಮನೋಗತ. ಏನಾದರೂ ಹೇಳಿ ಸಮಾಧಾನಿಸೋಣವೆಂದರೆ ನಾಲಿಗೆ ಅಲುಗದು. ಮನಃಪ್ರಾಣಗಳಲ್ಲಿ ನಸುಕಂಪನದ ಅಲೆ ಹರಿದಾಡಹತ್ತಿತು. ಅತೀವ ಕಳವಳ–ಆಶಂಕೆಗಳ ಪ್ರಭಾವದಲ್ಲಿ ಅವಳು ಮುಗ್ಧಳಾಗಿ ಹೋದಳು)

ಸುರುಚಿದೇವಿ— ನಡೆ ಮುಂದೆ ! ಅಯೋಗ್ಯಳೇ ! ವೃಥಾ ನಿನ್ನನ್ನಿಲ್ಲಿ ಸಂಪೋಷಿಸಿದ್ದಾಯ್ತು.

(ಕಿರಿಯರಾಣಿ ಬಿಚ್ಚಿದ ಮುಡಿಯನ್ನು ಬಾಚಲೂ ಇಲ್ಲ ! ಕಟ್ಟಲೂ ಇಲ್ಲ. ಹೊರಟೇ ಬಿಟ್ಟಳು ಚಂಡಿತನ ಸರ್ವಾಂಗಗಳಲ್ಲೂ ವ್ಯಕ್ತವಾಗುವಂತೆ)

ಕುರಂಗಿ— (ಕೈ ಮುಗಿದುಕೊಂಡು) ತಾಯಿ, ಕ್ಷಮಿಸಬೇಕು. ಅಲ್ಲಿ ರಾಜಸಭೆ ನಡೆಯುತ್ತಿದೆ.

ಸುರುಚಿದೇವಿ— ರಾಜಸಭೆಯಾದರೇನು ? ಅಲ್ಲಿಯ ಯಾರಿಗೂ ನಾನು ಕಿರಿಯಳಲ್ಲ !

(ಕುರಂಗಿ ಮರುಮಾತಾಡದೆ ಬೆದರಿದ ಕುರಿಮರಿಯತೆ ಮುಂದೆ ನಡೆದಳು. ಸುರುಚಿದೇವಿಯ ಹೆಜ್ಜೆಗಳ ತಾಡನ ಗೇಂಡಾಮೃಗಕ್ಕೆಉಪಮಾನವಾಗುವಂತೆಕೇಳಿಬರುತಿತ್ತು.

ಅರಮನೆಯ ಕಲ್ಯಾಣ ಮಂಟಪದಲ್ಲಿ ಉತ್ತಾನಪಾದ ರಾಯನ ಒಡ್ಡೋಲಗ ನಡೆದಿತ್ತು. ಅನೇಕ ಮಂದಿ ಗಣ್ಯರು ನೆರೆದಿದ್ದು ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಚಾರ ಸಂಕೀರ್ಣ ನಡೆಸಿದ್ದರು. ಬಿಚ್ಚುಗತ್ತಿಯ ಪಹರೆಯವರು ಉಚಿತವರಿತು ಶಿಸ್ತಿನಿಂದ ಪಹರೆ ನಡೆಸುತಿದ್ದಾರೆ. ನವರತ್ನ ಖಚಿತ ಸಿಂಹಾಸನದ ಮೇಲೆ ತಂದೆಯ ಎಡಬಲಗಳಲ್ಲಿ ಮಕ್ಕಳಿಬ್ಬರೂಮಂಡಿಸಿರಾಜಸಭೆಯನ್ನು ವೀಕ್ಷಿಸುವುದರಲ್ಲಿ ತನ್ಮಯರಾಗಿದ್ದರು. ಅಂತಹಸುಸಂದರ್ಭದಲ್ಲಿ ಅಂತಃಪುರದ ಕಡೆಯ ಬಾಗಿಲ ಪರದೆಯನ್ನು ಓಸರಿಸಿ ತುಂಬಿದ

ಸಭೆಗೆ ಬಿರುಗಾಳಿಯಂತೆ ನುಗ್ಗಿಬಂದ ಕಿರಿಯರಾಣಿಯನ್ನು ನೋಡಿ ದೊರೆ ಬೆಚ್ಚಿದ. ಬೃಹದ್ ಸಭೆ ಬೆಕ್ಕಸಬೆರಗಾಗಿ ಎವೆಯಿಕ್ಕದೆ ನೋಡಿತು. ಕೆದರಿದ ಕೂದಲು, ಉದ್ರಿಕ್ತ ಮುಖಭಾವ, ಮಿಂಚಿನ ಕಣ್ಣುಗಳು, ಅಸ್ತವ್ಯಸ್ತ ಉಡುಪು, ತಲೆಯಮೇಲೆ ಒಂದು ಉತ್ತರೀಯವೂ ಇಲ್ಲ. 'ಏನೀ ಪ್ರಮಾದ' ಎಂದು ಎದೆ ತಲ್ಲಣಿಸಿದ ದೊರೆಯು ಸಭಾಸದರ ಮುಂದೆ ಹೋಗುವ ಮಾನಕ್ಕಾಗಿ ಮೌನ ದಿಂದ ತಲೆಬಾಗಿದ. ಆದರೆ, ಅದೊಂದೂ ಸುರುಚಿದೇವಿಯ ಗಮನಕ್ಕೆ ಬರಲೇ ಇಲ್ಲ. ಕೋಪತಾಪಗಳ ಒತ್ತಡದಿಂದ ಎದೆ ಏರಿಳಿಯುತಿತ್ತು. ಧ್ರುವಕುಮಾರನನ್ನು ದೃಷ್ಟಿ ಯಿಂದಲೇ ಸುಟ್ಟು ಬಿಡುವಂತೆ ತೀಕ್ಷ್ಣವಾಗಿ ನೋಡುತ್ತ ಕಟಿಯಮೇಲೆ ಕೈಕಟ್ಟಿದಳು)

ಸುರುಚಿದೇವಿ— ಎಲೈ ತೊತ್ತಿನಮಗನೇ, ನೀನೇಕೆ ಬಂದೆ ಇಲ್ಲಿಗೆ ?

(ಅವಳ ಭೈರವರೂಪು ಎಳೆಯ ಮನವನ್ನು ತೆಕ್ಕನೆ ಡಂಗು ಬಡಿಸಿತು. ಯಾವ ಉತ್ತರವನ್ನೂ ಕೊಡದೆ ಅವಳ ಮುಖವನ್ನು ಭಯಭೀತಿಯಿಂದ ನಿಟ್ಟಿಸಿದ ಧ್ರುವ ಕುಮಾರ)

ಸುರುಚಿದೇವಿ— ಹೇಳು! ಏಕೆ ಬಂದೆ ? ನಿನ್ನನ್ನು ಕರೆತಂದವರಾರು ?

(ಆಗ ಧ್ರುವಕುಮಾರನಿಗೆ ಉತ್ತರಿಸುವುದು ಸೂಕ್ತವೆನಿ ಸಿತು. ಒಣಗಿ ಬಂದ ತುಟಿಗಳನ್ನು ತುದಿನಾಲಿಗೆಯಿಂದ ಒರಿಸಿಕೊಂಡು ಪ್ರಯತ್ನಪೂರ್ವಕವಾಗಿ ಮೃದು ಮಂದ ನುಡಿಗಳನ್ನು ಹೊರಹಾಕಿದ)

ಧ್ರುವಕುಮಾರ— ಯಾರೂ ನನ್ನನ್ನಿಲ್ಲಿಗೆ ಕರೆತರಲಿಲ್ಲ ಚಿಕ್ಕಮ್ಮಾ, ನಾನೇ ಬಂದೆ.

ಸುರುಚಿದೇವಿ— ನೀನೇ ಬಂದೆಯಾದರೆ ಪ್ರಾಂಗಣದಲ್ಲಿರಬೇಕಿತ್ತು, ಇಲ್ಲಿ ಗೇಕೆಬಂದೆ ?

(ಪೂರ್ಣ ಸಭಾದೃಷ್ಟಿ ಅತ್ತಲೇ ಕೇಂದ್ರೀಕೃತವಾಯಿತು, ಮಂತ್ರಮುಗ್ಧ ಗತಿಯಲ್ಲಿ)

ಧ್ರುವಕುಮಾರ— ಮೊದಲು ಪ್ರಾಂಗಣಕ್ಕೆ ಬಂದೆ. ಉತ್ತಮಕುಮಾರ ಅಲ್ಲಿ ಸಿಗಲಿಲ್ಲ. ಇಲ್ಲಿದ್ದಾನೆಂದು ತಿಳಿದು ಇಲ್ಲಿಗೆ ಬಂದೆ.

ಸುರುಚಿದೇವಿ— ನಿನಗೆ ಅಷ್ಟಕ್ಕೆ ಅವಕಾಶ ಕೊಟ್ಟದ್ದೂ ಕೂಡ ನಮ್ಮ ತಪ್ಪು!

(ಆ ಮಾತು ಕೇಳಿ ಏನೂ ಹೇಳಲೂ ತೋರಲಿಲ್ಲ ಧ್ರುವ ಕುಮಾರನಿಗೆ. ಮೈಮರವಟ್ಟಂತೆ ಸುಮ್ಮನೆ ನೋಡಿದ. ಕಣ್ಣುಗಳಲ್ಲಿ ದೈನ್ಯಭಾವ ತುಂಬಿ ಬಂತು)

ಸುರುಚಿದೇವಿ— ಸಿಂಹಾಸನವೇರುವ ಯೋಗ್ಯತೆ ನಿನಗೆ ಇದೆಯೇ ?

ಧ್ರುವಕುಮಾರ— ಅದು ನನಗೆ ತಿಳಿಯದು. ಉತ್ತಮಕುಮಾರ ಕುಳಿತ್ತು ದುದನ್ನು ನೋಡಿ ನನಗೂ ಕುಳಿತುಕೊಳ್ಳಬೇಕೆನಿಸಿತು. ನಾನು ಅಪ್ಪಾಜಿಯನ್ನು ಬೇಡಿದೆ. ಅವರು ಕುಳ್ಳಿರಿಸಿ ಕೊಂಡರು.

(ಉತ್ತಾನಪಾದರಾಯನು ಬಾಗಿದ ತಲೆಯೆತ್ತದೆ ಶಿಲಾ ಮೂರ್ತಿಯಂತೆ ನಿಶ್ಚಲಭಂಗಿಯಲ್ಲಿ ಕುಳಿತಿದ್ದ. ಅತೀವ ಪರಿತಾಪ ತುಂಬಿದ ಹೃದಯಕರಂಡ ಈಗಲೀಗ ಬಿರಿಯು ವಂತೆ ಭಾಸವಾಯಿತು. ಆದರೂ ಆಗಿನ ಪರಿಸ್ಥಿತಿಯಲ್ಲಿ ಅವನಿಂದ ಬಾಯ್ದೆರೆಯಲಾಗಲಿಲ್ಲ)

ಸುರುಚಿದೇವಿ— ಉತ್ತಮಕುಮಾರನಂತೆ ನಿನಗೂ ಸಿಂಹಾಸನವೇರಬೇಕೆ ನಿಸಿತೋ ? ಹಾಗಾದರೆ ನೀನೇನು ರಾಣೀಪುತ್ರನೇ ? ಸಿಂಹಾಸನದ ಹಕ್ಕು ರಾಣೀಪುತ್ರನಿಗೆ ಮಾತ್ರ ಎಂಬು ದನ್ನು ಬಲ್ಲೆಯಾ ? ನೀನು ಆ ಯೋಗ್ಯತೆ ಪಡೆಯಬೇಕಾ ದರೆ ರಾಣಿಯ ಗರ್ಭದಲ್ಲಿ ಮರುಹುಟ್ಟು ಪಡೆಯಬೇಕು ತಿಳಿಯಿತೇ ?

(ಧ್ರುವಕುಮಾರ ಚಿಕ್ಕಮ್ಮನ ಕಟುದನಿಯ ವ್ಯಾಖ್ಯಾನ ದಿಂದ ತಲ್ಲಣಿಸಿಹೋದ. ಏನು ಹೇಳಲೂ ತೋರಲಿಲ್ಲ)

ಸುರುಚಿದೇವಿ— ನೀನು ಗೊಂಡಾರಣ್ಯದಲ್ಲಿ ಉಗ್ರತಪಸ್ಸು ಮಾಡಿ ನಾರಾಯಣನನ್ನು ಒಲಿಸಿಕೊಂಡು ವರ ಪಡೆದುಕೊ.

ಅನಂತರ ಸಿಂಹಾಸನವನ್ನೇರಬಹುದು ! ಈಗ ಹೊರಗೆ ನಡೆ !
(ಆಮಾತು ಅಂತಃಸ್ಥಲವನ್ನು ಮುಟ್ಟಿತು. ಧ್ರುವ ಕುಮಾರ ಅವಳನ್ನು ಹುಬ್ಬೆತ್ತಿ ನೋಡುವಷ್ಟು ಸಾಹಸ ಮಾಡಿದ. ತಂದೆಯ ಮೂಕಮೌನ, ಸಭೆಯ ಸ್ತಬ್ಧಗತಿ ಆತ್ಮಶಕ್ತಿಯನ್ನೇ ಕುಂದಿಸುವಂತಿದ್ದರೂ ಅವಳು ನೀಡಿದ ಉಗ್ರತಪಸ್ಸಿನ ಸಲಹೆ ವಿಚಾರಾತ್ಮಕವಾಗಿ ತೋರಿ ತೀವ್ರ ಆಲೋಚನಾ ಪರವಶನಾದ. ಅಲ್ಲಿಂದ ತನಗೆ ಎದ್ದು ಹೋಗಲು ಅವಳ ಅತ್ಯುಗ್ರ ಆಣತಿಯಾಗಿದ್ದರೂ, ಎದ್ದು ಹೋಗುವ ವಿಚಾರ ತಲೆಯಲ್ಲಿ ಇನಿತೂ ಸುಳಿಯಲೇ ಇಲ್ಲ. ಆದರೆ, ಆ ಮುಹೂರ್ತದಲ್ಲಿ ಅದನ್ನು ಅರಿತುಕೊಳ್ಳದ ಸುರುಚಿದೇವಿ ತನ್ನ ಆಜ್ಞೆಯನ್ನುಲ್ಲಂಘಿಸಿದನೆಂದು ಪರಿ ಭಾವಿಸಿ. ವ್ಯಗ್ರಳಾಗಿ ರತ್ನ ಸಿಂಹಾಸನದ ಮೆಟ್ಟಿಲು ಹತ್ತಿ ಧ್ರುವಕುಮಾರನ ಕೈಹಿಡಿದು ಕೆಳಗೆಳೆದಳು. ಆ ಧೂರ್ತ ರಭಸಕ್ಕೆ ಸಿಕ್ಕಿ ಮುಗ್ಗರಿಸಿದ ಅವನು ರತ್ನಸಿಂಹಾಸನದ ಮೆಟ್ಟಿಲ ಮೇಲೆ ದೊಪ್ಪನೆ ಬಿದ್ದು ನೋವು ಅಪಮಾನ ಗಳಿಂದ 'ಅಪ್ಪಾಜಿ' ಎನ್ನುತ್ತಾ ಸಭೆ ಮರುಗುವಂತೆ ರೋಧಿಸತೊಡಗಿದ)

ಸಭೆ — ಏನನ್ಯಾಯ, ಏನನ್ಯಾಯ !

ಉತ್ತಮಕುಮಾರ— ಅಯ್ಯೊ, ಬಿದ್ದು ಬಿಟ್ಟನಲ್ಲಮ್ಮಾ ಪಾಪ, ನೋವಾ ಯಿತು. (ಧ್ರುವನ ಬಳಿಗೆ ಬಂದು) ಏಳಪ್ಪಾ, ಧ್ರುವ.... ನಿಮ್ಮಮ್ಮನ ಕಡೆಗೆ ಹೋಗೋಣ.

ಸಭೆ— ಆ ಚಿಕ್ಕಮಗುವಿಗಿರುವಷ್ಟು ಕರುಣೆಯೂ ಇಲ್ಲವಲ್ಲ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ ! ಛೀ ! ಛೀ !

ಸುರುಚಿದೇವಿ— ನೀನು ಈ ಸಿಂಹಾಸನವನ್ನು ಏರಲೇಬೇಕಾದರೆ ಅದಕ್ಕೆ ತಕ್ಕ ಯೋಗ್ಯತೆಯನ್ನು ಪಡೆದುಕೊಂಡು ಬರ ಬೇಕು! ಅದುವರೆಗೆ ನಿನ್ನ ಮುಖವನ್ನು ನನಗೆ ತೋರಲೇ ಬೇಡ ತಿಳಿಯಿತೇ? ಈಗಲೇ ಇಲ್ಲಿಂದ ಹೊರಟುಹೋಗು !

(ಕೆಳಗೆ ಬಿದ್ದಲ್ಲೇ ಕುಳಿತುಕೊಂಡು ಅಳುತ್ತಿದ್ದ ಧ್ರುವ ಕುಮಾರನನ್ನು ಅತ್ಯಂತ ಹೀನಾಯವಾಗಿ ನೋಡುತ್ತ ತನ್ನ ಹಿಂದಿದ್ದ ಕುರಂಗಿಯನ್ನು ಕುರಿತು....)

ಸುರುಚಿದೇವಿ— ಎಲೇ, ಕುರಂಗಿ! ಇವನನ್ನು ಈಗಲೇ ಹೆಬ್ಬಾಗಿಲಿಂದಾಚೆ ದಬ್ಬಿ ಬಾ.

ಕುರಂಗಿ— ಅ ...ಪ್ಪಣೆ ...!

(ಸಭೆ ಏನೆನ್ನುವುದೋ ಪ್ರಭುಗಳು ಏನೆನ್ನುವರೋ ಎಂಬ ಭಯದಿಂದ ತಲೆಬಾಗಿ ನಿಂತ ಕುರಂಗಿಯು ಹೆಜ್ಜೆ ತೆಗೆಯು ಲಿಲ್ಲ. ಮನಸ್ಸು ಕಳವಳದಿಂದ ತುಂಬಿ ಹೋಯಿತು)

ಸುರುಚಿದೇವಿ— ಮತ್ತೇಕೆ ನಿಂತಿದ್ದಿ?ಅವನನ್ನು ಈ ಕ್ಷಣ ಎಳೆದುಕೊಂಡು ಹೋಗಾಚೆ !

ಸಭೆ— ಬಾಲಕನ ಮೇಲೆ ದರ್ಪ ಸಲ್ಲದು ಸಾವಧಾನ....ಸಾವಧಾನ !

(ಸುರುಚಿದೇವಿ ಸಭೆಯತ್ತ ತಿರುಗಿಯೂ ನೋಡಲಿಲ್ಲ. ಮದಮಾತ್ಸರ್ಯ ಮತ್ತವಾದ ಬುದ್ಧಿಗೆ ಅದು ತಾಗಲೂ ಇಲ್ಲ. ಅವಳ ಗಮನನೆಲ್ಲಾ ವಸ್ತುಸ್ಥಿತಿಯ ಮೇಲಿತ್ತು. ಒಡತಿಯಂತೆಯೇ ಕ್ರೂರಹೃದಯಿಯಾದ ಕುರಂಗಿಯು ಒನ್ಮೆ ಮಹಾರಾಜನ ಕಡೆಗೂ ಇನ್ನೊಮ್ಮೆ ಸಭಾ ಮಂಡಲಿಯ ಕಡೆಗೂ ದೃಷ್ಟಿ ಹೊರಳಿಸಿ ನೋಡಿ, ಎಲ್ಲರ ಅಸಹಾಯಕ ಸ್ಥಿತಿಯನ್ನು ಗಮನಿಸಿದ ಮೇಲೆ ಧ್ರುವ ಕುಮಾರನ ತೋಳನ್ನು ಅದುಮಿ ಹಿಡಿದುಕೊಂಡಳು. ಅವನು ತಂದೆಯ ಕಡೆ ಅತ್ಯಂತ ದೈನ್ಯ ದೃಷ್ಟಿಯಿಂದ ನೋಡುತ್ತ ಸಂಕಟಭರಿತನಾಗಿ ಬಿಕ್ಕಿಬಿಕ್ಕಿ ಎಳೆಯ ಮಗು ವಿನಂತೆ ಅಳಹತ್ತಿದರೂ ಬಿಡದೆ ಅವನನ್ನು ಮೆಲ್ಲಮೆಲ್ಲನೆ ನಡೆಸಿಕೊಳ್ಳುತ್ತ ಹೊರ ಕರೆತಂದನಂತರ ನಿರ್ದಯದಿಂದ ದರದರನೆ ಎಳೆದುಕೊಂಡು ಹೋಗಿ ಮಹಾದ್ವಾರದ ಆಚೆಗೆ ದಬ್ಬಿ ಬಿಟ್ಟಳು. ಸಭೆಯ ಮನಸ್ಸು ಕೊರೈಸುವಂತೆ

ಮಗುವಿನ ಅಳುದನಿ ಕೇಳಿಸುತ್ತಲೇ ಇತ್ತು ; ಅದಕ್ಕೆ ಪ್ರತಿಯಾಗಿ ಹೊಮ್ಮಿದ ಬಿಸುಸುಯ್ಲು ಮಾಡೆತ್ತರಕ್ಕೂ ಏರಿತು. ಗೆದ್ದ ಹುರುಪಿನಲ್ಲಿದ್ದ ಸುರುಚಿದೇವಿಯು ಅಲ್ಲಿ ಒಂದು ಕ್ಷಣವೂ ನಿಲ್ಲದೆ ಅಂಬಿನಿಂದ ಬಿಟ್ಟ ಬಾಣದಂತೆ ಸರ್ರನೆ ಹೊರಟು ಅಂತಃಪುರವನ್ನು ಸೇರಿಕೊಂಡಳು.

ಉತ್ತಾನಪಾದರಾಯನ ಮನಸ್ಸು ದುಃಖ–ಸಂಕಟ–ಪರಿತಾಪಗಳಿಂದ ತುಂಬಿ ಹೋಯಿತು. ಮಹದ್ ಸಭಾ ಮಂಡಲಿಯ ಮುಂದೆ ತನಗುಂಟಾದ ಅತೀವ ಅಪಮಾನವನ್ನು ಸಹಿಸಲಾರದೆ ಕಾರ್ಯಕಲಾಪಗಳನ್ನು ಬದಿಗೊತ್ತಿ ತನ್ನ ಏಕಾಂತ ಮಂದಿರದ ಹಾದಿ ಹಿಡಿದ. ಅದು ಪ್ರಾಂಗಣದ ಆಚೆ ಹೊಸಮಹಲಿನ ಉತ್ತಮಾಂಗದಲ್ಲಿ ರೂಪುಗೊಂಡಿತ್ತು. ಒಳಹೋದವನೇ ಕದ ಮುಚ್ಚಿಕೊಂಡು ಪಲ್ಲಂಕದಮೇಲೆ ಉರುಳಿದ. ಕಂಬನಿಯ ಕೋಡಿ ಧಾರೆ ಧಾರೆಯಾಗಿ ಹರಿಯಿತು ದುಃಖವಾರ್ಧಿಗೆ ಸರ್ವ ಸಾಕ್ಷಿಯಾಗಿ. ಅದುವರೆಗೆ ಅಪಾರವಾದ ಸಹನೆಯಿಂದ ಕಿರಿಯ ರಾಣಿಯ ಎಷ್ಟೋ ಅಪಚಾರಗಳನ್ನು ಸಂಪೂರ್ಣ ಸಹಿಸಿಕೊಂಡಿದ್ದ. ಆದರೆ, ಅದು ಅಷ್ಟು ಹದ್ದುಮೀರಿ ಹೋಗುವುದೆಂಬ ಭಾವನೆ ಎಂದೂ ಮೂಡಿರಲಿಲ್ಲ.ಅವನ ಭಾಗಕ್ಕೆ ಹಿರಿಯರಾಣಿ ಒಬ್ಬಳೇ ಇದ್ದಾಗ ಸುಖಶಾಂತಿಗೆ ಯಾವ ಕೊರತೆಯೂ ಬಂದಿರಲಿಲ್ಲ. ವಿಧಿ ಈ ದುರ್ನಿಮಿತ್ತವನ್ನು ಯಾವ ಉದ್ದೇಶದಿಂದ ಹೊಂಚಿಕೊಂಡಿತ್ತೋ, ಕಿರಿಯ ರಾಣಿಯನ್ನು ಮಿಂಚಿನ ಕಿಡಿಯಂತೆ ಕಣ್ಕುಂದೆ ಸುಳಿದಾಡಿಸಿ ಮರುಳು ಮಾಡಿತು. ಬುದ್ಧಿಹೀನನಾಗಿ, ತರ್ಕಹೀನನಾಗಿ, ಸಂಯಮಹೀನನಾಗಿ ಅವಳ ಕೊರಳಿಗೆ ಹೂಮಾಲೆಯನ್ನು ಹಾಕಿ ಅಗಾಧವಾದ ತಪ್ಪು ಮಾಡಿದ್ದ. ವ್ಯಾಮೋಹ ಅವನನ್ನು ಪ್ರಾಣಿಗಿಂತಲೂ ಕಡೆಯಾಗಿ

ಬೇಟೆಯಾಡಿ ದೌರ್ಭಾಗ್ಯದ ಉದಯ ಗೀತೆಯನ್ನು ಹಾಡಿತ್ತು.

ಅಂದಿನಿಂದಲೂ ತನ್ನ ಅಂತರಂಗದ ಅರಣ್ಯರೋಧನವನ್ನು ಗೂಢಗುಪ್ತಾಂಗದಲ್ಲಿ ಅಡಗಿಸಿಟ್ಟಿದ್ದ. ಎದೆಯ ನಿಡುಸುಯ್ಲಿನಲ್ಲಿ ಸ್ವೇದಬಿಂದುಗಳು ಒಣಗುತಿದ್ದುವು. ದೈವದತ್ತವಾದ ಸಕಲ ಸೌಭಾಗ್ಯವನ್ನು ವಿಧಿಯ ಕೈಯ್ಯಲ್ಲಿ ಅಡವಿಟ್ಟುಕೊಂಡೇ ರಾಜ್ಯಸೂತ್ರಗಳನ್ನು ಯಥಾಪ್ರಕಾರ ನಿರ್ವಹಿಸಿದ್ದ. ಆ ಎಲ್ಲವನ್ನೂ ಕಿರಿಯರಾಣಿ ಒಂದೇಗಳಿಗೆಯೊಳಗಾಗಿ ನಿರ್ದಾಕ್ಷಿಣ್ಯದಿಂದ ಗಾಳಿಯಲ್ಲಿ ತೂರಿಬಿಟ್ಟಳು.

ಆ ದುರ್ಮುಹೂರ್ತದಲ್ಲಿ ರಾಣಿಯನ್ನು ತಡೆಯಲಾಗಲೀ, ಮಗುವನ್ನು ಸಂತೈಸಲಾಗಲೀ, ಸಾಧ್ಯವಾಗಲಿಲ್ಲ, ನಿಜ. ಏಕೆಂದರೆ ಒಡ್ಡೋಲಗದಲ್ಲಿ ಸ್ವಪ್ರತಿಷ್ಠೆಯನ್ನು ಕಾಪಾಡಿಕೊಳ್ಳಬಹುದಾಗಿದ್ದರೆ ಅದು ರಾಣಿಯ ತೇಜೋವಧೆಯಿಂದ ಮಾತ್ರ ಸಾಧ್ಯ. ಅದಕ್ಕಿಂತಲೂ ತನಗಾದ ಅಪಮಾನವನ್ನೇ ಭರಿಸಿ ರಾಜಗಾಂಭೀರ್ಯವನ್ನು ಕಾಪಾಡಿಕೊಳ್ಳುವುದು ಸರ್ವೋತ್ತಮ ಮತ್ತು ಸರ್ವಪ್ರಿಯ. ಅದನ್ನಂತೂ ಅಮೂಲ್ಯವಾದ ತಾಳ್ಮೆಯಿಂದ ಸಾಧಿಸಿದ್ದಾಯ್ತು. ಆದರೇನು? ಚಿಂತೆ ಸಂಕಟಗಳು ಮನಃಪ್ರಾಣಗಳನ್ನು ಚಿತಾಗ್ನಿಯಂತೆ ಸುಡುತ್ತಿವೆ. ಎಲ್ಲಿ ನಿಂತರೂ ಬಿಡದು. ಎಲ್ಲಿ ಕುಳಿತರೂ ಬಿಡದು. ಆತ್ಮಶುದ್ಧಿಗಾಗಿ, ಮನಶ್ಶಾಂತಿಗಾಗಿ ಏಕಾಂತ ವಾಸವನ್ನು ಬಯಸಿತು ಚಿಚ್ಛಕ್ತಿ. ತದೇಕ ಚಿಂತಾಬ್ಧಿಯಲ್ಲಿ ಮುಳುಗಿ ತೇಲಾಡತೊಡಗಿದ.

ಅಂತಃಪುರದಲ್ಲಿದ್ದ ಸುರುಚಿದೇವಿಗೆ ಸಭೆಯು ವಿಸರ್ಜನೆಯಾದ ಸುದ್ದಿ ಮರುಗಳಿಗೆಯಲ್ಲೇ ಮುಟ್ಟಿತು. ಪತಿಯ ಪ್ರತೀಕ್ಷೆಯಲ್ಲಿ ಸ್ವಲ್ಪಹೊತ್ತು ನಿರಾತಂಕವಾಗಿ ಉರುಳಿತು.

ಆದರೂ ಅರಸನ ಸುಳಿವಿಲ್ಲ. ತನ್ನ ಕೋಪತಾಪಗಳನ್ನು ಒನ್ಮ್ಮೆಗೇ ತೀರಿಸಿಕೊಳ್ಳುವ ರೊಚ್ಚು ಮನವನ್ನು ಹುಚ್ಚಾಗಿಸಿತ್ತು. ಉರುಳುವ ಕ್ಷಣಕ್ಷಣಗಳೂ ಅಸಹನೀಯವಾಗಿ ತೋರಿದುವು. ಆದರೆ ಎಷ್ಟೊತ್ತಾದರೂ ಅವನು ಬರಲೇ ಇಲ್ಲ. ಹೊತ್ತು ಕಳೆದಂತೆಲ್ಲಾ ಕೋಪದ ತಾಪ ಆರಿ ಪತಿಯದರ್ಶನಕ್ಕೆ ಪರಿತಪಿಸ ತೊಡಗಿತು ಹೃದಯದ ಹಕ್ಕಿ. ಅವಳು ಅಂತಃಪುರವನ್ನು ಬಿಟ್ಟು ಏಕಾಂತ ಮಂದಿರದತ್ತ ನಡೆದಳು. ಅದನ್ನು ರಾಜನು ಗುಪ್ತಾಲೋಚನೆಗಾಗಿ ಉಪಯೋಗಿಸುವುದು ವಾಡಿಕೆ. ಸಮಸ್ಯೆಗೆ ಸಂಬಂಧಿಸಿದ ಅಧಿಕಾರಿಗಳನ್ನೂ, ಅಮಾತ್ಯರನ್ನೂ ಅಲ್ಲಿಗೆ ಬರಮಾಡಿಕೊಂಡು ಚರ್ಚಿಸುತಿದ್ದ. ಅಂದು ಅಂತಹ ಪ್ರಸಂಗ ಬಂದಿರಲಿಲ್ಲವಾದುದರಿಂದ ಎಳ್ಳು ಬೀರಿದರೂ ಕೇಳಿಸುವಂತಹ ಗಂಭೀರ ನಿಶ್ಶಬ್ಧ ; ಶಾಂತ ಸಮೃದ್ಧ ವಾತಾವರಣ. ಅವಳು ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುತ್ತಲೇ ಬಾಗಿಲನ್ನು ತಳ್ಳಿ ಒಳಹೆಜ್ಜೆ ಇಟ್ಟಳು. ಪ್ರಪ್ರಥಮವಾಗಿ ದೃಷ್ಟಿಗೆ ಬಿದ್ದುದು ಪ್ರಿಯತಮನ ಮುಖಮಂಡಲದಲ್ಲಿ ಮಿನುಮಿನುಗುವ ಅಶ್ರುಲಿಪ್ತ ಲೋಚನಗಳು. ಪರಸ್ಪರ ದರ್ಶನವಾದಾಗ ಅವನ ತುಟಿಗಳು ಎಂದಿನಂತೆ ಬಿರಿಯಲಿಲ್ಲ ; ಮನಸ್ಸು ಅರಳಲಿಲ್ಲ. ಆಗ ಅವಳು ಏನೂ ಅರಿಯದವಳಂತೆ ಎಂದಿನ ಎಳೆಮುಗುಳು ಚೆಲ್ಲಿ, ನಾಟಕೀಯವಾಗಿ ಸಮೀಪಕ್ಕೈತಂದಳು)

ಸುರುಚಿದೇವಿ— ಇದೇನು ಪ್ರಭುಗಳೇ, ನಿಮ್ಮ ಏಕಾಂತ ಚಿಂತನೆ ಮುಗಿಯಲಿಲ್ಲವೇ ?

ಉತ್ತಾನಪಾದರಾಯ—(ದೀರ್ಘವಾದ ನಿಟ್ಟುಸಿರು ಬಿಟ್ಟು)ಅಷ್ಟಕ್ಕೆ ಅವಕಾಶ ಕಲ್ಪಿಸಿದವಳು ನೀನೇ ಅಲ್ಲವೇ ?

ಸುರುಚಿದೇವಿ— ನೀವು ಮೊದಲೇ ಯುಕ್ತಾಯುಕ್ತಗಳನ್ನು ಗಮನಿಸಿದ್ದರೆ ಒಳ್ಳೆಯದಿತ್ತು.

ಉತ್ತಾನಪಾದರಾಯ—ನೀನು ತಪ್ಪು ಹೆಜ್ಜೆ ಇಟ್ಟಿದ್ದೇ ಅಲ್ಲಿ ! ತುಂಬಿದ ಸಭೆಯಲ್ಲಿ ನೀನು ಕಳೆದದ್ದು ಕೇವಲ ಮಗುವಿನ ಮಾನವನ್ನಲ್ಲ, ಉಚ್ಚವಂಶದ ರಾಜದಂಪತಿಗಳ ಮಾನ! ಕೋಪ–ಮದ–ಮಾತ್ಸರ್ಯಗಳ ಭರದಲ್ಲಿ ಏನು ಮಾಡಿದ್ದಿ ಎಂಬುದನ್ನು ಈಗ ಪರ್ಯಾಲೋಚಿಸು.

ಸುರುಚಿದೇವಿ— (ಸ್ವಲ್ಪ ಹೊತ್ತು ವಿಭ್ರಮೆಯಿಂದ ಸುಮ್ಮನಿದ್ದು) ನಾನು ದುಡುಕಿದ್ದು ನಿಜ; ಆದರೆ....

ಉತ್ತಾನಪಾದರಾಯ—ಅರ್ಧ ಮಾತೇಕೆ ?

ಸುರುಚಿದೇವಿ— ಈ ಎಲ್ಲಕ್ಕೂ ಕಾರಣೀಭೂತರು ನೀ...ವೇ. ಅಲ್ಲವೇ?

ಉತ್ತಾನಪಾದರಾಯ—ಯೋಚಿಸು ; ಸರಿಯಾಗಿ, ಆಳವಾಗಿ ಯೋಚಿಸು. ನಿನ್ನ ಮನಸ್ಸು ಸ್ವಾರ್ಥದಿಂದ ತುಂಬಿ ಬುದ್ಧಿ ಶಕ್ತಿಯನ್ನೇ ಕಳೆದುಕೊಂಡಿದೆ !

(ಆ ಮಾತು ಕೇಳಿದ ಸುರುಚಿದೇವಿ ಮಂಕು ಕವಿದಂತೆ ಮೂರ್ತಿಮತ್ತಾಗಿ ನಿಂತುಬಿಟ್ಟಳು)

(ಪರದೆ ಬೀಳುವುದು)

ದೃಶ್ಯ

೪

[ಧ್ರುವಕುಮಾರನ ಪ್ರತೀಕ್ಷೆಯಲ್ಲಿದ್ದ ಸುನೀತಿದೇವಿಯು ಪಡಸಾಲೆಯಿಂದ ಒಳಹೋಗಿರಲಿಲ್ಲ. ಜೇಡನ ತಂತುಕೃತಿ ಪತಂಗವನ್ನು ಬಿಗಿದು ಬಂಧಿಸುವಂತೆ ಪ್ರೇಮಕಾತರಭಾವ ಅವಳನ್ನು ಬಿಗಿದು ಬಂಧಿಸಿತ್ತು. ಭಾವಪೂರ್ಣ ಮುಃಖಬಿಂಬದಲ್ಲಿ ಉಜ್ವಲಿಸುವ ಆಲೋಕ ಹರಿದಿದ್ದುದು ಪ್ರಾಚೀರದ ಆಚೆ ಹರಿದ ಹಾದಿಯ ಕಡೆಗೆ. ಅಜ್ಞಾತ ಆಶಂಕೆಯ ನೆರಳಲ್ಲೂ ಮಾನಸಿಕ ತರಲ ಹಾಸವು ತುಟಿಗಳಲ್ಲಿ ಪ್ರತಿಫಲಿಸುವುದು. ಅಂಗ–ಪ್ರತ್ಯಂಗಗಳಲ್ಲಿ ಹೊಮ್ಮುವ ಭಕ್ತಿಯಲಹರಿ, ಬೆಳಗುವ ಸಾತ್ವಿಕತೆಯ ಕಳೆ ಮಹಾ ತಪಸ್ವಿನಿಗೆ ಉಪಮಾನವಾಗುತ್ತವೆ.

ಅವಳು ಆವುದೋ ಏಕಾಂತ ಚಿಂತನೆಯಲ್ಲಿ ತೀವ್ರ ತನ್ಮಯಳಾಗಿರುವಾಗ ತಲೆಬಾಗಿಲ ಬಳಿ ಪಾದಸಪ್ಪಳ ಕೇಳಿ ಬಂದು ಗಮನ ಸಹಜವಾಗಿ ಅತ್ತ ಹೊರಳಿತು. ಮರುಗಳಿಗೆಯಲ್ಲಿ ಮಾತಂಗಿ ಮತ್ತು ಕಪಿಲರು ಪ್ರವೇಶಿಸಿ ನಮಸ್ಕರಿಸುವರು. ಆನಂದದಾಗರದಲ್ಲಿ ಮುಳುಗಿ]

ಸುನೀತಿದೇವಿ— ಇದೇನು, ಈಗ ಕೆಲಸದ ವೇಳೆಯಲ್ಲಿ ಈ ಕಡೆ ಬಂದಿದ್ದೀರಲ್ಲ? ಕಾವಲುಗಾರರು ನಿಮ್ಮನ್ನು ಸುಮ್ಮನೆ ಬಿಟ್ಟರೇ ? ಹೊಸ ಉತ್ಸುಕತೆ ಬೇರೆ ಕಾಣಿಸುತ್ತಿದೆ... ನಿಮ್ಮಲ್ಲಿ ?

ಮಾತಂಗಿ— ನಾವು ದಿಡ್ಡಿ ಬಾಗಿಲಿನಿಂದ ಹೊರ ಬಿದ್ದೆವು ; ನಿಮಗೊಂದು ವಿಶೇಷವನ್ನು ತಿಳಿಸುವುದಿತ್ತು ಅದಕ್ಕಾಗಿ.

ಸುನೀತಿದೇವಿ— ಏನದು ? ಬೇಗನೆ ಹೇಳು. ಧ್ರುವಕುಮಾರ ಅರಮನೆಯಲ್ಲಿದ್ದಾನಷ್ಟೆ ?

ಮಾತಂಗಿ— ಈವತ್ತು ಅದೇ ವಿಶೇಷ. ಅವರು ಪ್ರಭುಗಳೊಂದಿಗೆ ಒಡ್ಡೋಲಗದಲ್ಲಿ ಸಿಂಹಾಸನದ ಮೇಲೆ ಮಂಡಿಸಿದ್ದಾರೆ ! (ಆನಂದಾಮೃತವನ್ನು ಪೂಸಿಕೊಂಡ ಧ್ವನಿ ಎದೆಯಾಳದಿಂದ ಹೊರಬಿತ್ತು)

ಅಹಿಲ— ಪ್ರಭುಗಳು ಇಬ್ಬರು ಮಕ್ಕಳನ್ನೂ ಎಡಬಲಗಳಲ್ಲಿ ಕೂಡಿಸಿಕೊಂಡಿದ್ದಾರೆಂದು ನನಗೆ ಮಾತಂಗಿ ಹೇಳಿದ್ದೇ ಸಾಕಾಯ್ತು ಕೆಲಸಕ್ಕೆ ಹೋಗಲೂ ಇಲ್ಲ. ನಿಮಗೆ ಹೇಳಿ ಹೋಗೋಣವೆಂದು ಹೀಗೆಯೇ ಬಂದೆ.

ಸುನೀತಿದೇವಿ— ನಿಜವಾಗಿ....?

ಮಾತಂಗಿ— ಹೌದು ತಾಯಿ !

ಸುನೀತಿದೇವಿ— ದೇವರು ದೊಡ್ಡವನು!(ಎರಡೂ ಕೈಗಳನ್ನು ಗಗನ ಭಿತ್ತಿಯೆಡೆಗೆ ಆನಂದ ಭಕ್ತಿಗಳ ಒಕ್ಕೂಟವಾಗಿ ಜೋಡಿಸುವಳು. ಹೃದಯ ಕರಂಡ ಉಕ್ಕೇರಿ ಕಪೋಲಪಾಲಿಗಳು ವಿಕಸನಗೊಂಡುವು)

ಅಹಿಲ— ನಾನು ದಾರಿಯಲ್ಲಿ ಧ್ರುವಕುಮಾರರನ್ನು ಕಂಡಿದ್ದೆ. ಈ ದಿನ ಕೆಲಸಕ್ಕೆ ಹೋಗುವುದು ತಡವಾಗಿದ್ದುದರಿಂದ ಅವರಿಗೆ ಕೈಮುಗಿದು ನೀವು ಒಳಗೆ ಹೋದೊಡನೆಯೇ ದಿಡ್ಡಿ ಬಾಗಿಲಿನ ಚಿಲಕ ತೆಗೆದಿಟ್ಟು ಬಿಡಿ ಒಡೆಯಾ ಅಂದಿದ್ದೆ. ಆದರೆ ಅವರು ಪ್ರಾಂಗಣಕ್ಕೆ ಹೋಗದೆ ಒಡ್ಡೋಲಗಕ್ಕೆ ಹೋದರಂತೆ. ನಾನು ಅವರಿಗಾಗಿ ಅಲ್ಲಿಯೇ ಕಾದಿದ್ದೆ. ಅಷ್ಟರಲ್ಲಿ ಇವಳೇ ಅಲ್ಲಿಗೆ ಬಂದಳು. ಈ ಶುಭ ಸಮಾಚಾರವನ್ನು ನಿಮಗೆ ತಿಳಿಸಲಿಕ್ಕಾಗಿ. ಒಡನೆ ನಾನು ಒಳಹೋಗಿ ಒಂದಿಷ್ಟು ಹಣಿಕಿ ನೋಡಿದೆ. ಒಡಲು ತನಿಪಾಲು ಕುಡಿದಷ್ಟು ತಣ್ಣಗಾಯಿತು. ಇಬ್ಬರೂ ನಿಮಗಿಷ್ಟು ಹೇಳಿ ಹೋಗೋಣವೆಂದು ಇತ್ತ

ಓಡಿ ಬಂದೆವು. ಅಂತೂ, ಈ ದಿನ ಬಹಳ ಶುಭದಿನ.
(ಎಳೆ ನಗೆಯೊಡನೆ ಸಂತಸವನ್ನು ಸೂಸುವನು)

ಮಾತಂಗಿ— ನಾನು ದಿಡ್ಡಿ ಬಾಗಿಲ ಮೂಲಕ ನಿಮ್ಮ ಕಡೆಗೆ ಬರೋಣ. ವೆಂದು ಬಾಗಿಲು ತೆಗೆದರೆ ಇವನು ಅಲ್ಲಿ ಕಾದಿದ್ದಾನೆ ! ಏನಪ್ಪಾ, ಎಂದೆ. ಧ್ರುವಕುಮಾರ ಚಿಲಕ ತೆಗೆಯುವೆ ಅಂದಿದ್ದರು ಎಂದ. ನಾನು ಓ ಹಾಗೋ? ಒಡ್ಡೋಲಗಕ್ಕೆ ಹೋಗಿ ನೋಡು ಎಂದೆ. ಅವನಿಗೆ ಆಶ್ಚರ್ಯವೋ ಆಶ್ಚರ್ಯ ಅವನಿಗೇಕೆ ? ನನಗೂ ಆಶ್ಚರ್ಯವೇ ಅಂತೂ, ದೇವರು ದಯೆದೋರಿದ.

ಸುನೀತಿದೇವಿ— ನೀವು ಎಷ್ಟು ಒಳ್ಳೆಯ ಸುದ್ದಿ ತಂದಿದ್ದೀರಿ, ಏನು ಬಹುಮಾನ ಕೊಡಲಿ ನಿಮಗೆ ?

ಮಾತಂಗಿ— ಅಯ್ಯೋ, ನಮಗೆ ಬಹುಮಾನವೇ ತಾಯಿ ? ನೀವೊಮ್ಮೆ ಅರಮನೆಗೆ ಬರುವಂತಾಗಲಿ, ಅದಕ್ಕಿಂತ ದೊಡ್ಡ ಬಹುಮಾನ ನಮಗೆ ಬೇಡವೇ ಬೇಡ. (ಮೆಲ್ಲನೆ ತಲೆಯಾಡಿಸುವಳು)

ಅಹಿಲ— ಹೌದವ್ವಾ, ನಿಮ್ಮ ಪಾದದ ಬಳಿ ನಾವು ಹಾಯಾಗಿ ಉಸಿರಾಡಬಹುದು ಅನಂತರ.

ಸುನೀತಿದೇವಿ— ದೇವರಿದ್ದಾನೆ.

ಮಾತಂಗಿ— ನಾವು ಹಗಲಿರುಳು ಬೇಡುವುದು ಅದೊಂದನ್ನೆ.

ಸುನೀತಿದೇವಿ— (ಆನಂದಭಾವದಿಂದ) ನಿಮ್ಮ ನಿಷ್ಠೆ ಹಿರಿತನವನ್ನು ತೋರಿಸುತ್ತೆ.

ಅಹಿಲ— ನಮಗಲ್ಲಿ ಕೆಲಸವೂ ಬೇಸರವಾಗಿದೆ. ಹಿಡಿದಿದ್ದೊಂದೂ ಕೊನೆಗಾಣುವಂತಿಲ್ಲ. ನೀವಿಲ್ಲದೆ ಎಲ್ಲಾ ಹದ ಗೆಟ್ಟಂತೆಯೆ ! (ದನಿಯಲ್ಲಿ ಜುಗುಪ್ಸೆ ಹರಿದು ಬಂತು)

ಮಾತಂಗಿ— ಹೌದು ತಾಯಿ. ಮೊದಲೇನೋ ಅರಮನೆ ಕೆಲಸವೆಂದರೆ ಹೆಮ್ಮೆ ನಮಗೆ. ಈಗ ಅದಾದರೂ ಯಾರಿಗೆ ಬೇಕು ?

ನೀತಿ ನಿಯಮಗಳೊಂದೂ ಇಲ್ಲ. ಆಚಾರ-ವ್ಯವಹಾರಗಳು ದಿನದಿನಕ್ಕೂ ಹದಗೆಡುತ್ತಿವೆ.

ಸುನೀತಿದೇವಿ— ಹೌದಮ್ಮಾ, ಆಗ ನಾನೇ ಸ್ವಂತ ಕಣ್ಣುಗಳಿಂದ ನೋಡಿ ಸಂಕಟ ಪಡುತಿದ್ದೆ. ಈಗ ಅದನ್ನು ಯೋಚಿಸಿದರೆ, ಹೀಗೆ ದೂರ ಇರುವುದು ಲೇಸು ಎನಿಸುತ್ತೆ.

ಅಹಿಲ— ಹಾಗೆಂದರೆ ಪ್ರಜೆಗಳ ಹಿತವನ್ನು ಮರೆತಂತಾಗಲಿಲ್ಲವೇ? ಏನೇ ಬರಲಿ, ಪ್ರಜೆಗಳಿಗಾಗಿ ಸಹಿಸಿಕೊಳ್ಳಿ. ನಾವು ನಂಬಿರುವುದು ನಿಮ್ಮನ್ನೇ.

ಸುನೀತಿದೇವಿ— ಅದು ಸರಿಯೆ. ಆದರೆ, ನನ್ನ ಕೈಯಲ್ಲಿ ಏನೂ ಇಲ್ಲವಲ್ಲ. ನಾನು ಏನು ಮಾಡಬಲ್ಲೆ ?

ಮಾತಂಗಿ— ನಿಮ್ಮ ಕೈಯಲ್ಲಿ ಯಾವ ಅಧಿಕಾರವೂ ಇಲ್ಲ ನಿಜ ; ಪ್ರಭುಗಳಿಗೆ ಏನಾದರೂ ಹೇಳಬಹುದಲ್ಲ ಅವ್ವಾ.

ಸುನೀತಿದೇವಿ— ಅಷ್ಟು ಮಾಡಬಹುದು. (ಸ್ವಗತ) ಹೇಳಿದರೂ ಪ್ರಭುಗಳು ಕಿವಿಯಮೇಲೆ ಹಾಕಿಕೊಳ್ಳಬೇಕಲ್ಲ ; ಹಾಗೆಂದು ಬಾಯಿ ಬಿಟ್ಟರೆ ಬಣ್ಣಗೇಡು.

(ಮುಖಬಿಂಬ ಖಿನ್ನವಾಗುವುದು)

ಮಾತಂಗಿ— ಈಗ ರಾಣಿಯನ್ನು ಮೆಚ್ಚಿಸಿಕೊಳ್ಳುವುದೇ ಒಂದು ಉದ್ದೇಶ ಅನೇಕ ಕೆಲಸಗಾರರಿಗೆ. ನಾ ಮುಂದು ತಾ ಮುಂದು ಎಂದು ನುಗ್ಗುವುದರಲ್ಲಿ ರೀತಿ ನೀತಿಗಳನ್ನೂ ಮರೆತು ಬಿಡುತ್ತಾರೆ. ಅಂತಹವರೊಂದಿಗೆ ಬೆರೆಯುವುದೆಂದರೆ ಮನಸ್ಸಿಗೆ ಜುಗುಪ್ಸೆ. ಅಂತಃಪುರದಲ್ಲಿ ಚಿನ್ನಂಗಿ-ಕುರಂಗಿಯರದೇ ಆಡಳಿತ. ರಾಣಿಯವರಿಗೆ ಅವರಿಬ್ಬರೂ ಮಾರ್ಗದರ್ಶಕರು. ಅವರಿಂದ ಇತರೆಯವರಿಗೆ ಒಂದಲ್ಲ ಒಂದು ಕಿರುಕುಳ....ಹಿಂಸೆ

ಅಹಿಲ— ಹೌದವ್ವಾ, ಬಹಳ ಕಷ್ಟ. ಅವರಿಗೆ ಸರಿಯಾಗಿ ನಡೆಯದಿದ್ದರೆ ನಮಗೆ ಉಳಿಗಾಲವೇ ಇಲ್ಲ. ಧ್ರುವಕುಮಾರ ಬಂದಾಗಲೆಲ್ಲಾ ಬೇಗನೆ ಕಳುಹಿಸಿ ಬಿಡಿ ಎಂದು ರಾಣಿಯ

ಅಪ್ಪಣೆ. ಅದಕ್ಕೆ ಉತ್ತಮಕುಮಾರ ಒಪ್ಪುವುದೇ ಇಲ್ಲ. ನಾವು ಇಬ್ಬರ ಅಪ್ಪಣೆಯನ್ನೂ ಪಾಲಿಸಬೇಕು.

ಮಾತಂಗಿ— ಉತ್ತಮಕುಮಾರ ದಿನವೂ ಅಣ್ಣನ ಹಾದಿ ಕಾಯುತ್ತಲೇ ಇರುತ್ತಾರೆ.

ಸುನೀತಿದೇವಿ— ಇಬ್ಬರೂ ಒಂದುಗೂಡಿ ಬೆಳೆದವರು. ಇಬ್ಬರಿಗೂ ಆಟಪಾಠಗಳಿಗೆ ಜೊತೆ ಬೇಕೇ ಬೇಕು. ಅದರಿಂದ ಸ್ನೇಹಸಂಬಂಧ ಬಾಡದಿದೆ.

ಅಖಿಲ— ಅದು ಸರಿಯವ್ವಾ, ನಮಗೆ ಪ್ರಾಣಸಂಕಟ. ಧ್ರುವಕುಮಾರ ಬಂದರೆ ನಾವು 'ಹೋಗಿ ಹೋಗಿ' ಅಂತಲೇ ಇರಬೇಕು; ಇವರು ಹೋಗುವಂತಿಲ್ಲ; ನಾವು ಬಿಡುವಂತಿಲ್ಲ; ಈ ಗೋಳು ನಮಗೆ.

ಮಾತಂಗಿ— ಇದೆಲ್ಲಾ ಯಾವಾಗ ಸರಿಹೋಗುತ್ತೋ. (ನಿಟ್ಟುಸಿರು ಬಿಡುವಳು)

ಅಖಿಲ— ಈ ಎಲ್ಲಿಕ್ಕಿಂತ ನಮ್ಮ ಹೊಲದಲ್ಲಿ ನಾವು ದುಡಿದುಕೊಂಡು ಹಾಯಾಗಿರಬಹುದು ಅನ್ನಿಸುತ್ತೆ. ಸಿರಿತನವೋ ಬಡತನವೋ, ಅದೇ ಸಾಕು ನಮಗೆ.

ಮಾತಂಗಿ— ನಿನ್ನ ಹೊಲದಲ್ಲಿ ದುಡಿಯುವುದಕ್ಕೆ ನಿನ್ನ ಅಣ್ಣತಮ್ಮಂದಿರು ಇದ್ದಾರಲ್ಲ. ನೀನು ಏನು ದುಡಿಯಬಲ್ಲೆ ಅಲ್ಲಿ? ಎಲ್ಲಿ ಸೇವೆಗೆ ಒಂದಿಷ್ಟು ಅವಕಾಶವೋ, ಅಲ್ಲಿ ಸೇವೆ ಸಲ್ಲಿಸುವುದು ನಮ್ಮ ನೀತಿ. ಅದನ್ನೇಕೆ ಕೈ ಬಿಡಬೇಕು?

ಅಖಿಲ— ಹಾಗೆಂದರೂ ಕಷ್ಟ, ಹೀಗೆಂದರೂ ಕಷ್ಟ.

ಸುನೀತಿದೇವಿ— ಈ ಬದುಕು ನೀಡುವುದೇ ಅಷ್ಟು. ನಾವು ಸುಖ ಬಯಸಿ ದುಃಖ ಪಡೆಯುತ್ತೇವೆ.

ಮಾತಂಗಿ— ಇನ್ನು ಹೊತ್ತಾಯಿತು. ನಾವು ಹೊರಡಬೇಕು....ರಾಣಿಗೆ ತಿಳಿದರೆ ಮತ್ತೊಂದು ರಾದ್ಧಾಂತ.

ಅಖಿಲ— ಇನ್ನು ಅಪ್ಪಣೆ ಕೊಡಿ ತಾಯಿ.

ಸುನೀತಿದೇವಿ— ಆಗಬಹುದು.

(ಅವರಿಬ್ಬರೂ ಅಲ್ಲಿಂದ ನಿಷ್ಕ್ರಮಿಸಿದರು. ಸುನೀತಿ ದೇವಿಗೆ ಹೊಟ್ಟೆ ಹಿಡಿಸಲಾರದಷ್ಟು ಸಂತೋಷ. ಶುಭ ಸಮಾಚಾರವನ್ನು ವರದಿ ಮಾಡಿಹೋದ ಅಹಿಲ ಮತ್ತು ಮಾತಂಗಿಯರಿಗೆ ಯಾವ ಉಪಚಾರವನ್ನೂ ಮಾಡಲಿಲ್ಲ ವಲ್ಲಾ ಎಂಬ ಯೋಚನೆ ಒಂದು ಕಡೆ ; ಧ್ರುವಕುಮಾರ ನಿಂದಲೇ ವಿವರವನ್ನು ತಿಳಿದುಕೊಳ್ಳಬೇಕು ಎಂಬ ಮಹ ದಾಸೆ ಇನ್ನೊಂದು ಕಡೆ. ಆ ಯೋಚನೆಯುಬ್ಬರ ಇಳಿ ಮುಖವಾಗುವುದರೊಳಗಾಗಿ ಧ್ರುವಕುಮಾರ ತಲೆ ಬಾಗಿಲಲ್ಲಿ ಕಾಣಿಸಿಕೊಂಡ. ಆದರೆ ಇದೇನಾಶ್ಚರ್ಯ ? ಅವರಿಬ್ಬರೂ ಹೇಳಿದ್ದೇನು ? ಇವನ ಸ್ಥಿತಿಯೇನು ? ಒಂದೆರಡು ಕ್ಷಣ ತನ್ನ ಕಣ್ಣುಗಳನ್ನು ತಾನು ನಂಬು ವುದೂ ಕಷ್ಟವಾಯಿತು ಸುನೀತಿದೇವಿಗೆ. ಅತ್ಯಂತ ಉತ್ಸಾಹ ದಿಂದ ಹೋಗಿದ್ದ ಬಾಲಕ ಕಣ್ಣುತುಂಬ ನೀರು ತುಂಬಿ ಕೊಂಡು ದುಃಖಗರ್ಭಿತನಾಗಿ ಬಂದಿದ್ದಾನೆ! 'ಹಾ !' ಎಂದು ಎದ್ದೇಳುವುದರೊಳಗಾಗಿ ಅವನೇ ಓಡಿ ಬಂದು ತೊಡೆಯ ಮೇಲೆ ಬಿದ್ದ ಬಗೆ ಕರುಣಾಜನಕವಾಗಿತ್ತು. ಒಡನೆ ಅವನನ್ನು ಗಾಢಾಲಿಂಗನ ಮಾಡಿಕೊಂಡು ಮೈ ದಡವಿ ಮುದ್ದಾಡಿ ಪ್ರತಿಗಂಬನಿಗಳನ್ನು ಸೂಸಿ, ಅತ್ಯಂತ ಮನೋವೇಗದಿಂದ....)

ಸುನೀತಿದೇವಿ— ಏನಾಯಿತು ಮಗು? ಏಕೆ ಅಳುತ್ತಿ!ಏಕೆ ಹೀಗಾದ್ದಿ ?

ಧ್ರುವಕುಮಾರ— ಅಮ್ಮಾ....ಅಮ್ಮಾ !

ಸುನೀತಿದೇವಿ— ನಿನಗೆ ಯಾರೇನಂದರು ? ಬೈದರೆ....? ಹೊಡೆದರೆ....?

ಧ್ರುವಕುಮಾರ— ಅಮ್ಮಾ....ಊ....ಊ....

ಸುನೀತಿದೇವಿ— ಹೇಳು ಮಗೂ, ಏನಾಯಿತು? ಎಲ್ಲಾದರೂ ಬಿದ್ದೆಯಾ? ಕಾಲಿಗೆ ಪೆಟ್ಟಾಯಿತೇ ?

ುವಕುಮಾರ— ಅಮ್ಮಾ, ಅರಮನೆಯಲ್ಲಿ.... (ಮುಂದೆ ಮಾತು ಹೊರಡಲಿಲ್ಲ. ಕಣ್ಣುಗಳಲ್ಲಿ ಕಂಬನಿಯು ಧಾರಾಕಾರವಾಗಿ ಸುರಿಯುವುದು)

ನೀತಿದೇವಿ— ನೀನು ಪ್ರಭುಗಳೊಂದಿಗೆ ಸಿಂಹಾಸನದಲ್ಲಿ ಕುಳಿತಿದ್ದೆ ಎಂದು ಈಗಷ್ಟೆ ಕೇಳಿದೆನಲ್ಲಾ, ಅಷ್ಟರೊಳಗಾಗಿ ನಿನಗೆ ಏನಾಯಿತು? ನೀನು ಒಡ್ಡೋಲಗಕ್ಕೆ ಹೋಗಿರಲಿಲ್ಲವೇ?

(ಸೆರಗಿನಿಂದ ಮಗುವಿನ ಕಂಬನಿಯನ್ನು ತೀಡಿ ಮುದ್ದುಗೈದು ಮೈದಡವುತ್ತ ತಾನೂ ಕಂಬನಿ ಸೂಸುವಳು)

ುವಕುಮಾರ— ನಾನು ಒಡ್ಡೋಲಗಕ್ಕೆ ಹೋಗಿದ್ದು ಹೌದು. ಅಪ್ಪಾಜಿ ನನ್ನನ್ನು ಸಿಂಹಾಸನದ ಮೇಲೆ ಕೂಡಿಸಿಕೊಂಡರು. ಸ್ವಲ್ಪ ಹೊತ್ತಿನೊಳಗಾಗಿ ಚಿಕ್ಕಮ್ಮ ಬಂದು ನನ್ನನ್ನು ಸಿಂಹಾಸನದಿಂದ ತಳ್ಳಿ-ಬೈದು ಹೊರ ಹಾಕಿಸಿದಳು.

(ಅವನು ಮೆಲ್ಲನೆ ಮುಸು ಮುಸು ಅಳುವನು)

ನೀತಿದೇವಿ— ಅಯ್ಯೋ, ದೇವರೇ! (ತಲೆಯಮೇಲೆ ಕೈಹೊತ್ತು ಕಂಬನಿಗರೆಯುತ್ತ) ನನ್ನ ಹೂವಿನಂತಹ ಮಗುವನ್ನು ಹೊರ ಹಾಕುವಷ್ಟು ನಿರ್ದಯಳಾದಳೇ ಅವಳು ? ನನ್ನ ಮರಿಯಾನೆಯ ಮನಸ್ಸಿಗೆ ಇಂತು ಘಾಸಿ ಮಾಡಿದಳೇ ? ಎಂತು ಈ ಸಂಕಟ-ಅವಮಾನಗಳನ್ನು ಹೇಗೆ ಸಹಿಸಲಿ ?

ದುಃಖರುದ್ಧ ಕಂಠದಿಂದ ಮಾತುಗಳು ಹೊರಬಿದ್ದಾಗ ಧಾರಾಕಾರವಾಗಿ ಹರಿದ ಕಂಬನಿಯು ಧ್ರುವಕುಮಾರನ ತಲೆಯಮೇಲೆ ತಟತಟನೆ ತೊಟ್ಟಿಕ್ಕಿದುವು. ಆಗ ಧ್ರುವಕುಮಾರ ತನ್ನ ತಾಯಿಯ ಮನಸ್ಥಿತಿಯನ್ನು ಅರಿತುಕೊಂಡು ದುಃಖ-ದುಗುಡಗಳನ್ನು ಬದಿಗೊತ್ತಿ ಸ್ವಲ್ಪ ಹೊತ್ತು ಗಂಭೀರಭಾವದಿಂದ ಯೋಚಿಸಿದ ನಂತರ ತಾಯಿಯನ್ನು ಕುರಿತು....)

ುವಕುಮಾರ— ಆದದ್ದು ಆಗಿ ಹೋಯಿತು. ಇನ್ನು ದುಃಖಿಸುವುದಕ್ಕಿಂತ ಮರೆತುಬಿಡುವುದು ಲೇಸು.

ಸುನೀತಿದೇವಿ— ಅದು ಸರಿಯೆ. ಆದರೆ, ಅವಳು ರಾಜಸಭೆಯಲ್ಲಿ ನಿನಗೆ ಮಾಡಿದ ಅವಮಾನ ಸಾಮಾನ್ಯವೇ ? ಸಭಾಸದರು ಏನೆಂದಾರು ಎಂಬ ಕಾಲಜ್ಞಾನವೂ ಅವಳಿಗೆ ಇಲ್ಲದೆ ಹೋಯಿತೆ ? ನನ್ನ ಪ್ರಭು ಇಂಥ ಘೋರ ಅಪರಾಧ ವನ್ನು ಹೇಗೆ ಸಹಿಸಿಕೊಂಡರು? ಪಂಡಿತ ಮಂಡಲಿ ಹೇಗೆ ಸುಮ್ಮನಿತ್ತು ? ನನ್ನ ಮಗು ಯಾವ ತಪ್ಪು ಮಾಡಿತ್ತು ಎಂದು ಈ ಶಿಕ್ಷೆ ? ಇದನ್ನೆಲ್ಲಾ ಹೇಗೆ ಸಹಿಸಲಿ ಮಗೂ? ನನ್ನ ಒಡಲು ಸಂಕಟಾಗ್ನಿಯಿಂದ ದಹಿಸಿ ದಗ್ಧ ವಾಗುತ್ತಿದೆ. (ನುಡಿ ಆರ್ತಕಂಠದಿಂದ ಹೊರಬಿತ್ತು)

ಧ್ರುವಕುಮಾರ— ಇದುವರೆಗೆ ಚಿಂತಿಸಿದ್ದಾಯ್ತು ; ಇನ್ನು ಬೇಡ.

ಸುನೀತಿದೇವಿ— ನಿನಗಾಗಿ, ನಿನ್ನ ಒಳ್ಳಿತಕ್ಕಾಗಿ ಈ ಜೀವನ. ಅದೇ ನಿನಗೆ ಇಲ್ಲವಾದ ಮೇಲೆ ನನಗೆ ಈ ಬದುಕಾದರೂ ಏಕೆ ಬೇಕು?

ಧ್ರುವಕುಮಾರ— (ಚಿಂತೆಯಿಂದ ಬಿಡುಗಡೆ ಹೊಂದಿ ಸಮಾಧಾನದಿಂದ) ಅಮ್ಮಾ, ಅಷ್ಟೊಂದು ಯೋಚನೆಯೇಕೆ? ಆದರಿಂದೇನು ಫಲ ?

(ಆ ವೇಳೆಗೆ ದಾಸಿ ಅಲ್ಲಿಗೆ ಬಂದಳು)

ದಾಸಿ— ಏಕೆ ಹೀಗಿದ್ದೀರಮ್ಮಾ ? ಏನಾಯ್ತು ಮಗುವಿಗೆ? ನೀವು ಹೊತ್ತಿಗೆ ಮುಂಚೆ ಕಳುಹಿಸಿದಾಗಲೇ ನನಗೆ ಏನೋ ಒಂದು ಬಗೆಯೆನಿಸಿತ್ತು. ಈಗ ನೋಡಿದರೆ ನನ್ನ ಊಹೆ ಸರಿಯಾಗಿದೆ. ಎಂತಹ ಕಟುಕ ಮಂದಿಯೋ !

ಸುನೀತಿದೇವಿ— ನನ್ನ ಕಂದನನ್ನು ಹೊರಗೆ ನೂಕಿಸಿದಳಂತೆ ಸುರುಚಿ ! ಹೇಗೆ ಮನಸ್ಸು ಬಂತು ಅವಳಿಗೆ ?

(ಧ್ರುವಕುಮಾರ ಅರಮನೆಯಲ್ಲಿ ನಡೆದುದೆಲ್ಲವನ್ನೂ ಸವಿಸ್ತಾರವಾಗಿ ವಿವರಿಸಿದ. ಆ ಒಂದೊಂದು ಮಾತೂಮಾತೃಹೃದಯಕ್ಕೆ ಶೂಲವನ್ನು ನೆಡುವಂತಿತ್ತು. ಉಕ್ಕಿಬಂದ ದುಃಖವನ್ನು ತಡೆದುಕೊಳುವುದರಲ್ಲಿ

ಉದ್ಯುಕ್ತಳಾದ ತಾಯಿಯ ಬಾಯಿಯಲ್ಲಿ ಆವ ಮಾತೂ ಹೊರಡಲಿಲ್ಲ)

ಧ್ರುವಕುಮಾರ— ಅಮ್ಮಾ, ನಾನು ಚಿಕ್ಕಮ್ಮನ ಒಡಲಲ್ಲಿ ಜನ್ಮವೆತ್ತಿದರೆ ಮಾತ್ರ ಸಿಂಹಾಸನವನ್ನು ಏರಬಹುದು ಎಂದಳಲ್ಲಾ, ಅದೇಕೆ? (ನಯನದ್ವಯಗಳಲ್ಲಿ ಆಶ್ಚರ್ಯದ ಮಿಂಚು ಮಿಂಚಿತು)

ಸುನೀತಿದೇವಿ— ಅವಳು ಪಟ್ಟದರಾಣಿ....ಅದಕ್ಕೇ ಹಾಗೆಂದಿದ್ದಾಳೆ.

ಧ್ರುವಕುಮಾರ— ಹಾಗಾದರೆ ನಾನು ಸಿಂಹಾಸನದಮೇಲೆ ಕೂಡಬಾರದಿತ್ತೆ ?

ಸುನೀತಿದೇವಿ— ಪ್ರಭುಗಳೇ ನಿನ್ನನ್ನು ಕೂಡಿಸಿಕೊಂಡಿರುವಾಗ ನಿನ್ನ ತಪ್ಪೆಲ್ಲಿಯದು ಕಂದಾ ? ಅವಳ ಅಪಾರವಾದ ಮತ್ಸರ ಇಷ್ಟಕ್ಕೆ ದಾರಿ ಮಾಡಿತು, ಅಷ್ಟೆ, ನೀನೇ ಪ್ರಭುಗಳಿಗೆ ಔರಸಪುತ್ರ !

ಧ್ರುವಕುಮಾರ— ಮತ್ಸರ ಅಂದರೇನು ? ಚಿಕ್ಕಮ್ಮನಿಗೆ ನನ್ನ ಮೇಲೇಕೆ ಅಷ್ಟು ಕೋಪ !

ಸುನೀತಿದೇವಿ— ಇನ್ನೂ ಹಸುಳೆಯಾದ ನಿನಗೆ ಇದೆಲ್ಲಾ ಅರ್ಥವಾಗದು ಮಗುವೇ! ಏನೇ ಇರಲಿ, ಆ ವಿಚಾರವನ್ನಂತೂ ತಲೆಗೆ ಹಚ್ಚಿಕೊಳ್ಳಬೇಡ, ಆದುದು ಆಗಿಹೋಯಿತು. ನೀನು ಹೀಗೇ ಸುಖವಾಗಿದ್ದರೆ ಸಾಕು.

(ಸುನೀತಿದೇವಿಯು ಒಡಲ ಸಂಕಟವನ್ನು ಅದುಮಿ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಂಡು ಮಗನಿಗೆ ಸಮಾಧಾನ ಹೇಳುವಳು)

ಧ್ರುವಕುಮಾರ— ಅಪ್ಪಾಜಿಗೆ ಉತ್ತಮಕುಮಾರನ ಮೇಲಿರುವಷ್ಟು ಪ್ರೀತಿ ನನ್ನ ಮೇಲೇಕಿಲ್ಲಮ್ಮಾ ?

(ಅತ್ಯಂತ ಕಾತರ ಕಂಠದಿಂದ ನುಡಿ ಹೊರಬಿತ್ತು)

ಸುನೀತಿದೇವಿ— ಪ್ರೀತಿ ಅವರಲ್ಲಿ ಖಂಡಿತವಾಗಿಯೂ ಇದೆ. ಕಿರಿಯರಾಣಿಯಿಂದಾಗಿ ಅವರು ಸುಮ್ಮನಿರುತ್ತಾರೆ. ಏನು ಮಾಡುವುದು ನೀನು ಪುಣ್ಯವಂತನಾಗಿ ಜನಿಸಲಿಲ್ಲ.

ಧ್ರುವಕುಮಾರ— ಅಂದರೆ....? (ಸತೃಷ್ಣನಯನಗಳಲ್ಲಿ ಭಾವಕಾಂತಿಯು ಚಿಮ್ಮಿಬಂತು)

ಸುನೀತಿದೇವಿ— ಭಗವಂತನ ಅನುಗ್ರಹವಿದ್ದಿದ್ದರೆ ಹೀಗಾಗುತ್ತಿರಲಿಲ್ಲ ಅಥವಾ ನೀನು ಸುರುಚಿಯ ಹೊಟ್ಟೆಯಲ್ಲಿ ಜನ್ಮವೆತ್ತಿರಬೇಕಿತ್ತು (ಕಣ್ಣುಗಳು ಅಶ್ರುಲಿಪ್ತವಾದರೂ ಕಂಠಸ್ವನ ಸಮಾಧಾನದಿಂದ ಹರಿಯಿತು)

ಧ್ರುವಕುಮಾರ— ಸಿಂಹಾಸನಕ್ಕೋಸ್ಕರ ಚಿಕ್ಕಮ್ಮನ ಹೊಟ್ಟೆಯಲ್ಲಿ ಜನಿಸಬೇಕೆ ? ಛೀ ! ನನಗದು ಬೇಡವೇ ಬೇಡ. (ತಾಯಿಯನ್ನು ಆಲಂಗಿಸಿಕೊಂಡು) ನನಗೆ ನೀನೇ ಸರಿಯಾದ ತಾಯಿ !

(ಆ ಮಾತಿನಿಂದ ಮಾತೃಹೃದಯ ಬಿಸಿಲಟ್ಟಿದ ಮಂಜಿನಂತಾಯಿತು. ಮಗನನ್ನು ಅಪ್ಪಿ ಪ್ರೀತ್ಯಾದರದಿಂದ ಹಣೆ ಕೆನ್ನೆಗಳಿಗೆ ಮುದ್ದಿಟ್ಟುಕೊಂಡಳು. ಕಣ್ಣುಗಳಲ್ಲಿ ಮತ್ತೆ ಸಣ್ಣಗೆ ಹನಿಯೂಡಿತು)

ಸುನೀತಿದೇವಿ— ನನ್ನ ಹೊಟ್ಟೆಯಲ್ಲಿ ಹುಟ್ಟಿ ನೀನು ಪಡೆದುಕೊಂಡ ಸುಖ ಯಾರಿಗೆ ಬೇಕು ಹೇಳು ?

ಧ್ರುವಕುಮಾರ— ಇರಲಿ ಅಮ್ಮಾ, ಚಿಂತೆಯಿಲ್ಲ. ಹೀಗೇ ಇರೋಣ.

(ತಾಯಿ ಮಗನ ಸಂಭಾಷಣೆಯನ್ನು ಮೂಕಮೌನತೆಯಿಂದ ಕೇಳುತಿದ್ದ ದಾಸಿ ಉಕ್ಕಿ ಬಂದ ಕಂಬನಿಯನ್ನು ಸೆರಗಿನಿಂದ ತೀಡಿಕೊಳ್ಳುವಳು)

ಸುನೀತಿದೇವಿ— ನಿನ್ನನ್ನು ಪಡೆದ ನನ್ನ ಒಡಲು ಧನ್ಯ ಮಗೂ ! ದೇವರು ನಿನಗೆ ಪೂರ್ಣಾಯುಸ್ಸು ಕೊಡಲಿ. ನನಗಿನ್ನೇನೂ ಬೇಡ.

ದಾಸಿ— ಸತ್ಯಸಂಧರಿಗೆ ಭಗವಂತ ಖಂಡಿತ ನೆರವು ನೀಡುತ್ತಾನೆ. ಎಂದಾದರೂ ಈ ಸಂಕಟ ಪರಿಹಾರವಾಗಲೇಬೇಕು. ದೇವರು ಅಷ್ಟೇನೂ ನಿರ್ದಯನಲ್ಲ.

(ದಾಸಿಯ ವ್ಯಾಖ್ಯಾನ ಮನದಾಳಕ್ಕಿಳಿಯಿತು)

ಸುನೀತಿದೇವಿ— (ನೀಳವಾದ ನಿಟ್ಟುಸಿರು ಬಿಟ್ಟು) ಈ ಬದುಕಿನಲ್ಲಿ ನಮಗೆ ಅಷ್ಟಾದರೆ ಸಾಕು.

ಧ್ರುವಕುಮಾರ— ಅಮ್ಮಾ ! ನನ್ನ ಮನಸ್ಸಿನಲ್ಲಿ ಒಂದು ಅನುಮಾನವಿದೆ.

ಸುನೀತಿದೇವಿ— (ಕರುಣ ಕಾತರತೆಯಿಂದ) ಏನದು, ಹೇಳು ಮಗೂ !

ಧ್ರುವಕುಮಾರ— ಅಮ್ಮಾ, ಚಿಕ್ಕಮ್ಮನ ಹೊಟ್ಟೆಯಲ್ಲಿ ನಾನು ಮರು ಜನ್ಮ ಪಡೆಯದೆ ಸಿಂಹಾಸನವನ್ನು ಏರುವಂತಿಲ್ಲವೇ ?

(ಆಶ್ಚರ್ಯ–ಕುತೂಹಲ ವಿಸ್ತೃತನಯನಗಳಲ್ಲಿ ಸೆಳೆ ಮಿಂಚು ಸುಳಿದಾಡಿತು)

ಸುನೀತಿದೇವಿ— ದೈವಕೃಪೆ ಇದ್ದರೆ ಎಲ್ಲವೂ ನಡೆಯುತ್ತೆ ಮಗೂ.

ಧ್ರುವಕುಮಾರ— ಅಂದರೆ...?

ಸುನೀತಿದೇವಿ— ಅವನ ಅನುಗ್ರಹವೊಂದಿದ್ದರೆ ಯಾವುದು ಆಗುವುದಿಲ್ಲ? ಎಲ್ಲಾ ತಾನಾಗಿಯೇ ಕೈಗೂಡುತ್ತೆ. ನಾವೆಲ್ಲಾ ಕೇವಲ ನಿಮಿತ್ತ ಮಾತ್ರರು. ಅವನೇ ಜಗನಿರ್ಮಾಪಕ, ಅವನೇ ಕಾರಣಕರ್ತ ; ಅವನೇ ಲಯಕರ್ತನೂ ಹೌದು ; ಅವನಿಂದ ಈ ಜಗತ್ತು ; ಅವನಿಂದ ನಾವು ; ಅವನಿಂದ ಸಾವು, ನೋವು, ಬದುಕು ಎಲ್ಲಾ.

ಧ್ರುವಕುಮಾರ— ಆ ಭಗವಂತ ಎಲ್ಲಿದ್ದಾನಮ್ಮಾ? ಹೇಗೆ ಅವನ ಅನುಗ್ರಹ ಪಡೆಯುವುದು ?

ಸುನೀತಿದೇವಿ— ಅವನು ಎಲ್ಲೆಲ್ಲೂ ಇದ್ದಾನೆ ಮಗೂ, ಅವನು ವಿರಾಟ್ ಪುರುಷನು ಮಾತ್ರವಲ್ಲ ; ಅತ್ಯಂತ ಸೂಕ್ಷ್ಮನೂ ಲೋಕೋತ್ತರನೂ ಹೌದು. ಮನಃಪೂರ್ವಕವಾಗಿ ಆರಾಧಿಸುವವರಿಗೆ ಅವನು ಸುಲಭನು.

ಧ್ರುವಕುಮಾರ— ಹಾಗಾದರೆ ಅವನಿಲ್ಲಿದ್ದು ನಮ್ಮ ವ್ಯವಹಾರವನ್ನೆಲ್ಲಾ ಕಂಡುಕೊಂಡಿದ್ದಾನೆಯೇ ? ಅವನು ಅಷ್ಟೊಂದು ಸೂಕ್ಷ್ಮನೇ ?

ಸುನೀತಿದೇವಿ— ಹೌದು ಮಗೂ, ಅವನ ಅಂತಃಪ್ರಜ್ಞೆ ಎಲ್ಲವನ್ನೂ ಗ್ರಹಿಸುತ್ತದೆ.

ಧ್ರುವಕುಮಾರ— ಹಾಗಾದರೆ ಅವನು ನಮ್ಮ ಕಣ್ಣಿಗೇಕೆ ಕಾಣಿಸುವುದಿಲ್ಲ ? (ಅತ್ಯಂತ ಆಸಕ್ತಿಯಿಂದ ಕೇಳುವನು)

ಸುನೀತಿದೇವಿ— ಅವನು ಸುಮ್ಮ ಸುಮ್ಮನೆ ಕಾಣಲಾರ. ಅಪಾರವಾದ ಭಕ್ತಿಯಿಂದ ಅವನಲ್ಲೇ ಲೀನವಾಗಿ ತಪಸ್ಸು ಮಾಡಬೇಕು. (ಮಿಂಚಿನ ದೃಷ್ಟಿಯಿಂದ ನೋಡುತ್ತ ಭಾವಶಾಂತಿಯನ್ನು ಸ್ಫುರಿಸಿದಳು ತಾಯಿ)

ಧ್ರುವಕುಮಾರ— ತಪಸ್ಸು ಎಂದರೇನು ?

ಸುನೀತಿದೇವಿ— ನಿನಗೆ ಅನೇಕ ಋಷಿವರ್ಯರ ಕತೆಗಳನ್ನು ತಿಳಿಸಿಕೊಟ್ಟಿದ್ದೇನಷ್ಟೆ ? ಅವರೆಲ್ಲಾ ಆರಣ್ಯದಲ್ಲಿ ಏಕಾಂತ ನಿಷ್ಠೆಯಿಂದ ಭಗವಂತನನ್ನು ಪ್ರಾರ್ಥನೆಮಾಡಿ ಆತನ ಅನುಗ್ರಹವನ್ನು ಪಡೆದು ಮಹಾಜ್ಞಾನಿಗಳಾದವರು. ಆದ್ದರಿಂದಲೇ ಎಲ್ಲರೂ ಅವರನ್ನು ಮಹರ್ಷಿಗಳೆಂದು ಕರೆಯುತ್ತಾರೆ.

ಧ್ರುವಕುಮಾರ— ಭಗವಂತ ಹೇಗಿರುತ್ತಾನೆ ? ಅವನ ರೂಪವನ್ನೆಂತು ಸ್ಮರಿಸಬೇಕು ?

ಸುನೀತಿದೇವಿ— ನಾವು ಯಾವ ರೂಪದಲ್ಲಿ ಅವನನ್ನು ಸ್ಮರಿಸಿಕೊಂಡರೆ ಆ ರೂಪಿನಿಂದಲೇ ನಮಗೆ ಒಲಿಯುತ್ತಾನೆ. ಅವನಿಗೆ ನಾನಾ ರೂಪುಗಳೆಂತೋ ಅಂತೆಯೇ ನಾನಾ ಹೆಸರುಗಳೂ ಇವೆ.

ಧ್ರುವಕುಮಾರ— ಹಾಗಾದರೆ ನನಗೆ ಯಾವುದಾದರೊಂದು ರೂಪವನ್ನು ವರ್ಣಿಸಿ ಹೇಳಮ್ಮಾ, ನಾನು ಆ ರೂಪವನ್ನೇ ಕುರಿತು ಧ್ಯಾನಿಸುವೆ.(ಭಕ್ತಿಭರಿತವಾಗಿತ್ತು ಮುಗ್ಧ ದುಗ್ಧ ಪ್ರಶ್ನೆ)

ಸುನೀತಿದೇವಿ— ಅವನಿಗೆ 'ಶ್ರೀಮನ್ನಾರಾಯಣ' ಎಂಬ ಹೆಸರುಂಟು. ಆ ನಾರಾಯಣನಿಗೆ ತಲೆಯಲ್ಲಿ ರತ್ನ ಖಚಿತವಾದ ಕಿರೀಟ,

ಕೊರಳಲ್ಲಿ ತುಳಸೀ ವನಮಾಲೆ, ಸುಂದರವಾದ ಮುಖ ಮಂಡಲ, ಶಂಖ ಚಕ್ರ ಗದಾ ಪದ್ಮಗಳ ಸಹಿತ ನಾಲ್ಕು ಕೈಗಳು ಮತ್ತು ಪೀತಾಂಬರಧಾರಿ ಎಂಬ ವರ್ಣನೆ ಯುಂಟು ಪುರಾಣ ಗ್ರಂಥಗಳಲ್ಲಿ. ಅವನು ಬಹಳ ಕರುಣಾಶಾಲಿಯಾಗಿದ್ದು, ತನ್ನ ಭಕ್ತರು ಸ್ಮರಿಸಿದೊಡ ನೆಯೇ ಓಡಿ ಬರುತ್ತಾನಂತೆ! ಅಂದರೆ ಸ್ಮರಿಸುವವರ ಭಕ್ತಿಯು ಅಷ್ಟು ಘನವಾಗಿರಬೇಕು!

(ಇಬ್ಬರೂ ಆ ನೆನವರಿಕೆಯಿಂದ ಆನಂದದ ಅರಳು ಮಲ್ಲಿಗೆಯಾಗುವರು)

ಧ್ರುವಕುಮಾರ— ಹಾಗಾದರೆ ಅವನು ಎಷ್ಟು ಒಳ್ಳೆಯವನು?

ಸುನೀತಿದೇವಿ— ಹೌದು ಮಗೂ, ಅವನು ಭಕ್ತಪರಾಧೀನ. ಭಕ್ತರಿಗಾಗಿ ಏನು ಮಾಡಲೂ ಸಿದ್ಧ!

(ಆ ಮಾತು ಕೇಳಿ ಬಾಲಕ ಸರ್ವಾಂಗ ಪುಳಕಿತನಾದ. ಮೈನವಿರು ನಿಮಿರಿ ನರನಾಡಿಗಳಲ್ಲಿ ನೆತ್ತರಿನ ಝುರಿ ಝಿಲ್ಲನೆ ಹರಿದಾಡಿತು)

ಧ್ರುವಕುಮಾರ— ಋಷಿಗಳೆಲ್ಲಾ ಅರಣ್ಯದಲ್ಲಿ ತಪಸ್ಸು ಮಾಡುತ್ತಾರೆ ಅಲ್ಲವೇ?

ಸುನೀತಿದೇವಿ— ಹೌದು, ಅರಣ್ಯ ಅವರ ಏಕಾಂತ ನಿಷ್ಠೆಗೆ ಅನುಕೂಲ. ತಪಸ್ಸು ಅಲ್ಲಿ ಸುಗಮವಾಗಿ ಸಾಗುತ್ತದೆ ಅದಕ್ಕೇ ಋಷಿ ಗಳು ಅರಣ್ಯದಲ್ಲಿ ವಾಸಿಸುತ್ತಾರೆ.

ಧ್ರುವಕುಮಾರ— ಹಾಗಾದರೆ ನಾನೂ ಕಾಡಿನಲ್ಲೇ ತಪಸ್ಸು ಮಾಡುವೆ ಅಮ್ಮಾ!

(ನೂರ್ಮಡಿಯ ಉತ್ಸಾಹದಿಂದ ತಟ್ಟನೆ ಎದ್ದುನಿಂತ. ಕಣ್ಣುಗಳಲ್ಲಿ ಅಂತಃಸ್ಫೂರ್ತಿಯ ಕಳೆ ಮಿನುಗಿತು)

ಸುನೀತಿದೇವಿ— ಮಗೂ, ನೀನಿನ್ನೂ ಹಸುಳೆ....! ಈಗ ನಿನ್ನಿಂದ ಅದು ಸಾಧ್ಯವಾಗದು.

(ಹೃದಯ ತಟ್ಟನೆ ಹೌಹಾರಿ ಬಿಗಿದಪ್ಪಿಕೊಳ್ಳುವಳ
ಸುನೀತಿದೇವಿ)

ಧ್ರುವಕುಮಾರ— ಸ್ಮರಿಸಿದೊಡನೆ ಓಡಿ ಬರುತ್ತಾನೆಂದು ನೀನು ಆಗಲೀ
ಹೇಳಲಿಲ್ಲವೇ ?

ಸುನೀತಿದೇವಿ— ಹೇಳಿದ್ದು ಹೌದು. ಋಷಿಗಳಿಗೆ ಮನಸ್ಸು ಪರಿಪಕ್ವ
ವಾಗಿದ್ದು, ತಪಃಶಕ್ತಿಯನ್ನು ಕರಗತ ಮಾಡಿಕೊಳ್ಳ
ಬಲ್ಲರು. ನಮಗೆ ಅದು ಅಷ್ಟು ಸುಲಭವಲ್ಲ ಮಗೂ.
ಈಗಲೇ ಅವಸರ ಬೇಡ, ಕಾಲಕ್ರಮದಲ್ಲಿ ನೀನು ಆ
ಶಕ್ತಿಯನ್ನು ಪಡೆದುಕೊಳ್ಳಬಲ್ಲೆ. ಆಗ ಉಗ್ರ ತಪಸ್ಸ
ಕೈಕೊಳ್ಳಬಹುದು ; ಈಗೇಕೆ ಆತುರ ?

ಧ್ರುವಕುಮಾರ— ನಾನು ಹೆಚ್ಚು ಕಾಲ ಕಾಯಲಾರೆ ಅಮ್ಮಾ! ನನಗೀಗಲೇ
ಸಿದ್ಧಿ ಲಭಿಸಬೇಕು; ಖಂಡಿತ ಅದಕ್ಕಾಗಿ ಪ್ರಯತ್ನಿಸಿಯೇ
ತೀರುವೆ. ನಾನು ಭಕ್ತಿಯಿಂದ ಕರೆದರೆ ಅವನು ಬರುತ್ತಾ
ನೆಂಬ ನಂಬುಗೆ ನನಗುಂಟು. ನೀನು ನನ್ನನ್ನು ಆಶೀರ್ವ
ದಿಸಿ ಕಳುಹಿಸಮ್ಮಾ !

ಸುನೀತಿದೇವಿ— ನೀನು ಬಹಳ ಚಿಕ್ಕವನು. ಈಗಲೇ ಆ ಯೋಚನೆ ಮಾಡ
ಬೇಡ ಮಗೂ !

ಧ್ರುವಕುಮಾರ— ಇಲ್ಲ ಇಲ್ಲ ; ನನ್ನ ಮೇಲೆ ಒತ್ತಾಯ ಹೇರಬೇಡಿ. ನನ
ಆ ಹಠ ಬಂದಿದೆ !

(ಆ ಸಂದರ್ಭದಲ್ಲಿ ಸುನೀತಿದೇವಿಯು ಇಕ್ಕಟ್ಟಿಗೆ ಸಿಕ್ಕಿ
ದಳು. ಸಣ್ಣ ಹಸುಳೆಯಿಂದ ಆ ಗುರುತರ ತಪಸ್ಸು
ಸಾಧ್ಯವಾಗದು. ಎಲ್ಲಿ ವನ್ಯಮೃಗಗಳ ಪಾಲಾಗಿ ಬಿಡು
ವನೋ ಎಂಬ ಭಯ ಮನವನ್ನು ಆವರಿಸಿತು. ಹಸಿವು
ಬಾಯಾರಿಕೆಗಳನ್ನು ತಡೆಯುವುದೆಂತು ? ಗೊಂಡಾರಣ್ಯ
ದಲ್ಲಿ ಹಾಲು ಹಸುಳೆ ಏಕಾಂಗಿಯಾಗಿ ಇರುವುದಾದರೂ
ಹೇಗೆ ? ತಾನು ಲೋಕಾಭಿರಾಮವಾಗಿ ಹೇಳಿದ ವಿಚಾ

ವನ್ನು ಅವನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಂಡುದುದು ವಿಶೇಷವೇ ! ಎನಿಸಿ ಬೆಕ್ಕಸಬೆರಗಾದಳು)

ಸುನೀತಿದೇವಿ— ವಿಚಾರ ಮಾಡು ಮಗೂ, ಈಗ ನಿನ್ನಿಂದ ಖಂಡಿತ ಅದು ಸಾಧ್ಯವಿಲ್ಲ.

ದಾಸಿ— ಋಷಿಗಳಿಗೇ ತಪಸ್ಸು ಕಠಿಣ. ನೀನು ಹಠ ಮಾಡಿದರೆ ಹೇಗೆ ಮಗೂ ?

ಧ್ರುವಕುಮಾರ— ಅದಿರಲಿ, ನೀನು ಅಮ್ಮನನ್ನು ಸರಿಯಾಗಿ ನೋಡಿಕೊಂಡು ನಾನು ಹಿಂದಿರುಗುವವರೆಗೂ ಕಾಪಾಡಬೇಕು. ದಾಸೀಮಣಿ. ಈಗ ನನ್ನನ್ನು ತಡೆಯುವ ಗೋಜಿಗೆ ಬರಲೇಬೇಡ.

ಸುನೀತಿದೇವಿ— ಹಾಗಾದರೆ ನೀನು ಹೊರಡುವುದು ಖಚಿತವೇ ?

ಧ್ರುವಕುಮಾರ— ನಾನು ಕೈಮುಗಿದು ವಂದನಾಪೂರ್ವಕವಾಗಿ ಕೇಳಿಕೊಳ್ಳುವೆ. ನನಗೆ ಅಪ್ಪಣೆ ಕೊಡು. ಇದರಲ್ಲಿ ಯೋಚಿಸುವಂತಾದ್ದೇನೂ ಇಲ್ಲ ಅಮ್ಮಾ !

ದಾಸಿ— (ಆತಂಕಪೂರ್ಣವಾಣಿಯಲ್ಲಿ) ಮಗೂ, ನಿನಗೆ ಕಾಡು ಎಂದರೇನೆಂಬುದೇ ತಿಳಿಯದು. ದುಷ್ಟ ಮೃಗಗಳಿರುವ ತಾಣ. ಅಲ್ಲಿ ಮನುಷ್ಯರ ವಾಸವಿಲ್ಲ. ಅಂದಮೇಲೆ ಯೋಚಿಸಿ ನೋಡು, ನಿನಗೆ ತುಂಬ ಭಯವಾಗಬಹುದು ಹಿಂದುಮುಂದು ಆಲೋಚಿಸದೆ ಕ್ರಮಕೈಕೊಳ್ಳಬಾರದು.

ಧ್ರುವಕುಮಾರ— ಅಷ್ಟೊಂದು ಚಿಂತಿಸುವ ಕಾರಣವಿಲ್ಲ. ಊರಿನಲ್ಲಿದ್ದರೂ, ಕಾಡಿನಲ್ಲಿದ್ದರೂ ಕಾಪಿಡುವವ ಒಬ್ಬನೇ. ಮತ್ತೇಕೆ ಭಯ ? ನಮ್ಮ ಭವಿಷ್ಯ ಹೇಗಿದ್ದರೂ ಅವನ ಕೈಯ್ಯಲ್ಲಿ.

ಸುನೀತಿದೇವಿ— ಮಗೂ, ನೀನೇ ನನ್ನ ಕಣ್ಬೆಳಕು. ನೀನೇ ನನ್ನ ಸರ್ವಸ್ವ. ಖಂಡಿತ ದುಡುಕಬೇಡ.

ಧ್ರುವಕುಮಾರ— ಏಕಷ್ಟು ಚಿಂತೆ ? ಈಗ ಎಷ್ಟು ಮಂದಿ ತಪಸ್ಸು ಮಾಡಲಿಲ್ಲ ? ಅದರಿಂದೇನು ಬಾಧಕ ? ತಪಸ್ಸು ಮುಗಿದ ಕೂಡಲೆ ಹಿಂದಿರುಗುವೆ. ಅದಕ್ಕೇಕೆ ಅಷ್ಟೊಂದು

ಯೋಚನೆ ? ಕ್ಷತ್ರಿಯರಾದ ನಾವು ಇಷ್ಟು ಸಣ್ಣ ವಿಚಾರಕ್ಕೆ ಅಂಜಿದರೆ ಹೆಂಬೇಡಿಗಳಾದೇವು ! ಖಂಡಿತ ಯೋಚಿಸಬೇಡಪ್ಪ. ನಾನು ಭಗವಂತನನ್ನು ಒಲಿಸಿ ಕೊಂಡು ಸಿಂಹಾಸನ ಹತ್ತುವುದನ್ನು ನೀನು ಕಣ್ತುಂಬ ನೋಡಬಹುದು.

ಸುನೀತಿದೇವಿ— ಕುಮಾರ, ನನ್ನ ಮಾತು ಕೇಳಪ್ಪಾ, ನನ್ನನ್ನು ಇನ್ನೂ ನೋಯಿಸಬೇಡ.

(ತಾಯಿಯನ್ನು ಬಿಗಿಯಾಗಿ ಅಪ್ಪಿಕೊಂಡು ಸಾಂತ್ವನ ಗೈಯ್ಯುವ ನುಡಿಯಲ್ಲಿ....)

ಧ್ರುವಕುಮಾರ— ನಿನ್ನ ಮಾತು ಕೇಳಿಯೇ ಹೊರಟಿರುವೆ. ನಾನು ಎಂದೂ ಅವಿಧೇಯನಲ್ಲ; ಅಮ್ಮಾ, ಸಮಾಧಾನ ಹೊಂದು. ನೀನು ಆಗಲೇ ಹೇಳಿದ್ದಿ, ದೇವರು ಎಲ್ಲೆಲ್ಲಿಯೂ ಇದ್ದಾನೆ ಎಂದು' ಮತ್ತೇಕೆ ಭಯ ?

ಸುನೀತಿದೇವಿ— ಮಗೂ, ಧ್ರುವಕುಮಾರ! ನಾನು ಹೇಳಿದ್ದು ಇದೀಗಲೇ ಹೋಗುವುದಕ್ಕಲ್ಲ ; ನೀನು ಪ್ರವರ್ಧಮಾನಕ್ಕೆ ಬಂದು, ನಿನ್ನನ್ನು ನೀನು ಸಂರಕ್ಷಿಸಿಕೊಳ್ಳುವ ಪ್ರಾಬಲ್ಯತೆ ಪಡೆದ ಮೇಲೆ. ಈಗ ನೀನಿನ್ನೂ ಹಸುಗೂಸು ; ದುಡುಕಬೇಡ ನನ್ನ ಮಾತು ಕೇಳು.

ಧ್ರುವಕುಮಾರ— ಅಮ್ಮಾ, ನಿನ್ನ ಆಶೀರ್ವಾದದ ಬಲವೊಂದಿದ್ದರೆ ನಾನು ತೀರ ದುಸ್ಸಹವಾದುದನ್ನೂ ಸಾಧಿಸಬಲ್ಲೆ. ಆ ಧೈರ್ಯ ನನಗಿದೆ. ಇದು ಹುಡುಗಾಟ ಖಂಡಿತ ಅಲ್ಲ. ದಯವಿಟ್ಟು ನನ್ನನ್ನು ಹರಸಿ ಕಳುಹಿಸಮ್ಮಾ. ನಾನು ನಿನ್ನನ್ನು ಬೇಡಿಕೊಳ್ಳುವೆ.

(ನಮಸ್ಕರಿಸುವನು)

ಸುನೀತಿದೇವಿ— ನಿನ್ನ ಕೋರಿಕೆ–ಬೇಡಿಕೆಗಳಿಗೆ ನಾನು ಇಲ್ಲವೆನ್ನಲಾರೆ. ಆದರೆ ನನ್ನ ಹೃದಯ ಸಂಕಟದ ಕಾಳ್ಗಿಚ್ಚಿನಿಂದ ಧಗಧಗ

ದಹಿಸುತ್ತಿದೆ. ಕುಮಾರಾ! ನಾನು ಹೇಗೆ ಸಹಿಸಿ ಕೊಳ್ಳಲಿ ?
ಅವನನ್ನು ಗಾಢಾಲಿಂಗನೆ ಮಾಡಿಕೊಂಡು ಕಂಬನಿ ಸೂಸುವಳು)

ಧ್ರುವಕುಮಾರ— ಅಮ್ಮಾ, ಖಂಡಿತ ಚಿಂತಿಸಬೇಡ. ದೇವರಿಗಾಗಿ, ನಿನ್ನ ಏಕ ಮಾತ್ರ ಪುತ್ರನಿಗಾಗಿ ಕೆಲವು ಸಮಯ ಸಹಿಸಿಕೊ. ಅನಂತರ ನಾನು ಬಂದು ಬಿಡುವೆ.
(ಧ್ರುವಕುಮಾರನ ಮಹೋದ್ದೇಶಪೂರಿತ ಬೇಡಿಕೆ ಅವಳನ್ನು ಮಂತ್ರಮುಗ್ಧಳಾಗಿ ಮಾಡಿತು. ಅವಳು ಮನದಲ್ಲಿ ಭಗವಧ್ಯಾನ ಮಾಡಿ ಸ್ಥಿರಗಂಭೀರಳಾಗಿ ಆಶೀರ್ವದಿಸುವಳು)

ಸುನೀತಿದೇವಿ— ಮಗನೇ, ನಿನ್ನನ್ನು ದೇವರು ಅನುಗ್ರಹಿಸಲಿ.
(ಆ ಕ್ಷಣವೇ ಅವನು ಅಲ್ಲಿಂದ ಹೊರಟ)

ಸುನೀತಿದೇವಿ— ಮಗೂ, ಧ್ರುವಕುಮಾರ....
(ಕರೆ ಕಿವಿಯನ್ನು ಮುಟ್ಟುವುದರೊಳಗಾಗಿ ಅವನು ಪ್ರಾಂಗಣದ ಪ್ರಾಚೀರವನ್ನು ದಾಟಿಯಾಗಿತ್ತು. ಅವಳ ದುಃಖಪೂರ್ಣ ಕರೆಯನ್ನು ಕೇಳಿ ದಾಸೀಮಣಿ ಹಿಂದೆಯೇ ಓಡಿದಳು)

ದಾಸಿ— ಧ್ರುವಕುಮಾರಾ, ಈಗಲೇ ಹೋಗಬೇಡಪ್ಪಾ. ರಾಣಿಯ ವರನ್ನು ಕಣ್ಣೀರು ಕರೆಸಬಾರದು. ಒಮ್ಮೆ ಹಿಂದಿರುಗಿ ಬಂದು ಸಮಾಧಾನಪಡಿಸಿ ಹೋಗು.

ಧ್ರುವಕುಮಾರ— ನೀನು ಅಮ್ಮನನ್ನು ನೋಡಿಕೊ; ನಾನು ಹೆಚ್ಚುಕಾಲ ತೆಗೆದುಕೊಳ್ಳುವುದಿಲ್ಲ. ಬೇಗನೆ ಬಂದುಬಿಡುವೆ.
(ಸುನೀತಿದೇವಿಯು ತಲೆಬಾಗಿಲಲ್ಲಿ ನಿಂತು ನೋಡು ತಿದ್ದಾಳೆ; ಕಣ್ಣುಗಳಲ್ಲಿ ಗಂಗೆಯಮುನೆಯರ ಪ್ರವಾಹ ಅವಿರಳವಾಗಿ ಪ್ರವಹಿಸುತ್ತಿದೆ)

ದಾಸಿ— ಧ್ರುವಕುಮಾರಾ ! ಬಾಪ್ಪಾ....ನಿನ್ನ ದಮ್ಮಯ್ಯ
ಬಾಪ್ಪಾ ! ನೀನಿಲ್ಲದೆ ಅಮ್ಮ ಪ್ರಾಣಬಿಟ್ಟಾರು !

(ಧ್ರುವಕುಮಾರ ದಾಸಿಯ ಹಿಂಬಾಲಿಕೆಯನ್ನೂ ಆಕೆಯ ಮೊರೆಯನ್ನೂ ಕಂಡರೂ ಕಾಣದಂತೆ ಕೇಳಿದರೂ ಕೇಳದಂತೆ ಕಾಲುಗಳಿಗೆ ಹುರುಪು ನೀಡಿದ)

ದಾಸಿ— (ಓಡಿ ಬರುತ್ತಲೆ) ಮಗೂ, ನಿಲ್ಲು ಓಡಬೇಡ. ನಾನೂ ಬರುವೆ ನಿನ್ನೊಂದಿಗೆ !

(ಆ ಮಾತು ಕೇಳಿಯೋ ಏನೋ ಅವನು ಕಿಲಕಿಲ ನಗುತ್ತ ಓಡತೊಡಗಿದ. ಅವಳೂ ಓಡುತ್ತಲೇ ಹಿಂಬಾಲಿಸಿದಳು. ಆದರೆ ಅವನ ಓಟದಲ್ಲಿ ಅದೆಂತಹ ಮಿಂಚಿನ ಶಕ್ತಿ? ಅದೆಂತಹ ಉದ್ಧಟ ಉತ್ಸಾಹ? ಇನ್ಯಾವ ದೈವೀಕ ಅನುಭೂತಿ ಮೈಯ್ಯನ್ನೇರಿತ್ತು? ಅವಳು ಬೇಡಬೇಡ ವೆನ್ನುವುದರೊಳಗಾಗಿ ಅವನು ದೂರ ಪ್ರದೇಶವನ್ನು ಹೊಕ್ಕು ಕಣ್ಮರೆಯಾಗಿಯೇ ಬಿಟ್ಟ. ದಾಸಿ ಬೆನ್ನಟ್ಟಲಾರದೇ ಸೋತು ಹಿಂದಿರುಗಿ ನೀಲುಸಿರು ಬಿಡುತ್ತಾ ಕುಟೀರವನ್ನು ತಲ್ಪಿದಾಗ ಸುನೀತಿದೇವಿ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದು ಬಿಟ್ಟಿದ್ದಳು.

ಆ ಕರುಣಾಜನಕ ದೃಶ್ಯ ಅವಳ ಧೃತಿ ಗೆಡಿಸಿತು. ಏನು ಮಾಡಲೂ ತೋರದಷ್ಟು ಕಿಂಕುರ್ವಾಣತೆ ಮನದಲ್ಲಿ ಸಹದಾಸಿಯರೊಂದಿಗೆ ಕಂಬನಿಗರೆಯುತ್ತ ಬೀಸಣಿಗೆಯಿಂದ ಗಾಳಿ ಬೀಸಿ ಶೈತ್ಯೋಪಚಾರ ನಡೆಸಿದ ಮೇಲೂ ಅವಳಿಗೆ ಮೈಯ್ಯರಿವು ಮೂಡಲಿಲ್ಲ. ಆಗ ಸಹದಾಸಿಯಾದ ಚಂಪಕವಲ್ಲಿಯು ತಕ್ಷಣ ದಾಸೀಮಣಿಯನ್ನು ಕುರಿತು....)

ಚಂಪಕವಲ್ಲಿ— ನಮಗೆ ವೈದ್ಯೋಪಚಾರ ತಿಳಿಯದು. ನೀನು ಅರಮನೆಗೆ ಹೋಗಿ ಸುದ್ದಿ ಮುಟ್ಟಿಸುವುದು ಒಳ್ಳೆಯದು. ನಾವಿಲ್ಲಿ

ನೋಡಿಕೊಳ್ಳುತ್ತೇನೆ. ನೀನು ಈಗಲೇ ಅರಮನೆಗೆ ಹೋಗು.

(ಆ ಮಾತು ಕೇಳಿದಾಗ ಮನಃಚಕ್ಷು ತೆರೆಯಿತು)

ದಾಸಿ— ಓಹೊ...! ನಾನು ಮುಖ್ಯವಾದುದನ್ನೇ ಮರೆತು ಬಿಟ್ಟಿದ್ದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬುದ್ಧಿಯೂ ಓಡುವುದಿಲ್ಲ, ನೀನು ತಲೆಗೊಂದಿಷ್ಟು ತಣ್ಣೀರು ತಟ್ಟು; ಎಚ್ಚರಾಗಬಹುದು. ನಾನು ಅರಮನೆಗೆ ಹೋಗಿ ಸುದ್ದಿ ಮುಟ್ಟಿಸಿ ಬರುವೆ.

(ವಾಕ್ಸರಣಿ ಮುಗಿಯುವುದರೊಳಗಾಗಿ ಅವಳು ಹೊಸ್ತಿಲು ದಾಟಿದ್ದಳು. ಅವಳ ಪಯಣ ಪುಷ್ಪಗುಲ್ಮ ವೀಥಿಯಲ್ಲೇ ಸಾಗಿತು. ಮನಸ್ಸು ಸ್ಥಿಮಿತದಲ್ಲಿರಲಿಲ್ಲ. ಹೃದಯವು ಗಾರೆದ್ದು ಮಿಡಿಯುತಿತ್ತು. ಆದರೂ ಅವಳ ಕಾಲುಗಳಿಗೆ ಅದೆಲ್ಲಿಂದ ಬಂದಿತ್ತೋ ದೈತ್ಯಶಕ್ತಿ, ಕೆಲವೇ ಗಳಿಗೆಯಲ್ಲಿ ಅರಮನೆಯ ಹೆಬ್ಬಾಗಿಲಿಗೆ ಬಂದಿದ್ದಾಳೆ)

ೈರವ— ಏನಮ್ಮಾ, ಏನಾಯಿತು ? ಏಕೆ ಓಡೋಡಿ ಬಂದೆ ?

ದಾಸಿ— ಈಗಲೇ ಪ್ರಭುಗಳನ್ನು ನೋಡಬೇಕು.

ೈರವ— ಏಕೆ, ಏನಾಯಿತು ?

ದಾಸಿ— (ಉತ್ಕಂಠಿತಳಾಗಿ) ನಿಮಗೆ ಹೇಳಿಕೊಳ್ಳುವಷ್ಟು ಸಮಯ ನನಗಿಲ್ಲ. ನಾನು ಈಗಿಂದೀಗಲೇ ಪ್ರಭುಗಳನ್ನು ನೋಡ ಬೇಕು.

ಾಳಿಂಗ— ಅಲಲಲಲೇ ! ಅದೆಂತಹ ರಾಜಕಾರಣವೇ ನಿನ್ನದು ?

ಾಸಿ— ತಮಾಷೆಯೆಲ್ಲಾ ಆಮೇಲೆ. ಮೊದಲು ದಾರಿ ಬಿಡಿ.

ೈರವ— ಅದೇನು ಹೇಳಬಾರದೇ ?

ಾಸಿ— ಈಗ ಪ್ರಭುಗಳು ಎಲ್ಲಿದಾರೆ ತಿಳಿಸಿ.

ಾಳಿಂಗ— ಇಲ್ಲೇ ಇರು. ನಾನು ಮೊದಲು ಹೋಗಿ ಅವರಿಂದ ಅಪ್ಪಣೆ ಪಡೆದುಕೊಂಡು ಬರುವೆ. ಇಲ್ಲದಿದ್ದಲ್ಲಿ ಅವರು ಕೋಪಿಸಿಕೊಂಡಾರು.

ದಾಸಿ— ಹೊತ್ತು ಮಾಡಬೇಡಪ್ಪಾ. (ಅಂಗಲಾಚುವಳು)

ಭೈರವ— ಅದೇನು ಹೇಳಬಾರದೇ ? ಅಷ್ಟೊಂದು ಗುಟ್ಟಾದದ್
ಏನು ?

(ಅವಳು ಆ ಮಾತಿಗೆ ಉತ್ತರಿಸಲೂ ಇಲ್ಲ, ಅಲ್ಲಿ
ಕಾಯಲೂ ಇಲ್ಲ. ಕಾಳಿಂಗನ ಹಿಂದೆಯೇ ಒಳಗಡೆ
ಹೋಗಿಬಿಟ್ಟಳು)

ಭೈರವ— (ಅಲ್ಲಿಂದಲೇ ಕರೆಯುವನು) ಇಲ್ಲಿ ಸ್ವಲ್ಪಹೊತ್ತು
ಕೂಡು. ಅವನು ಕೇಳಿಕೊಂಡು ಬರಲಿ.

ಕಾಳಿಂಗ— (ಆಗ ತಟ್ಟನೆ ಹಿಂದಿರುಗಿ ನೋಡಿ) ಇದೆಂತಹ
ಅವಸರ ಹೆಣ್ಣೆ ?

ದಾಸಿ— ನೀನು ಸುಮ್ಮನೆ ನಡಿಯಪ್ಪಾ ಮುಂದೆ.

(ಆ ವೇಳೆಗೆ ಸರಿಯಾಗಿ ಮಂತ್ರಮಂಟಪದ ಕಡೆ
ಯಿಂದ ಬರುತಿದ್ದ ಉತ್ತಾನಪಾದರಾಯ ಪ್ರಾಂಗಣ
ದಲ್ಲೇ ಎದುರಾದ)

ದಾಸಿ— (ಕೈಮುಗಿದು) ಮಹಾಪ್ರಭೂ, ಅನಾಹುತ
ವಾಗಿದೆ ! ತ್ವರೆಮಾಡಿರಿ, ತ್ವರೆಮಾಡಿರಿ !

ಉತ್ತಾನಪಾದರಾಯ—ಏನು ಬೇಗ ಹೇಳು !

ದಾಸಿ— ಧ್ರುವಕುಮಾರ ಕಾಡಿಗೆ ಹೊರಟು ಹೋದರು.
ಅಮ್ಮನವ...... (ಮುಂದೆ ಮಾತು ಹೊರಡದೆ
ಬಿಕ್ಕುವಳು)

ಉತ್ತಾನಪಾದರಾಯ—ಹಾ ! ನಿಜವಾಗಿ....?

ದಾಸಿ— ಹೌದು. ಮಹಾ ಪ್ರಭೂ. ತ್ವರೆ ಮಾಡಿರಿ.

ಉತ್ತಾನಪಾದರಾಯ—(ಕಾಳಿಂಗನನ್ನು ಕುರಿತು)ಈಗಲೇ ಹೋಗಿ, ಅಮಾತ್ಯ
ರನ್ನೂ ದಳವಾಯಿಗಳನ್ನೂ ಶೀಘ್ರವಾಗಿ ಇಲ್ಲಿಗೆ ಬರ
ಮಾಡು.

ಕಾಳಿಂಗ— ಅಯಿತು, ಪ್ರಭುಗಳೇ.

(ಅವನು ಆಕ್ಷಣವೇ ಹಿಂದಿರುಗಿ ಹೋಗುವನು)

ುತ್ತಾನಪಾದರಾಯ—ಧ್ರುವಕುಮಾರ ಹೋದುದು ಯಾವಾಗ ?

ಾಸಿ— ಬೆಳಗ್ಗೆ ಇಲ್ಲಿಂದ ಬಂದವರೇ ನೇರವಾಗಿ ತಾಯಿಯ ಬಳಿಗೆ ಬಂದರು. ಅನಂತರ ಬಹಳ ಹೊತ್ತಿನ ಮೇಲೆ ಹೊರಟಿದ್ದಾರೆ. ನಾವು ಹೋಗಬೇಡವೆಂದು ಬೇಡಿ ಕೊಂಡರೂ ಅವರು ಕೇಳಲಿಲ್ಲ.

ುತ್ತಾನಪಾದರಾಯ—ಯಾವ ದಿಕ್ಕಿನಲ್ಲಿ ಹೋದ....?

ಾಸಿ— ನಾನು ಸ್ವಲ್ಪದೂರ ಹಿಂಬಾಲಿಸಿದೆ. ಅನಂತರ ಅವರ ರನ್ನು ನನ್ನಿಂದ ಬೆನ್ನಟ್ಟಲಾಗಲಿಲ್ಲ. ಅವರು ಹಿಡಿದ ದಿಕ್ಕು ನನಗೆ ತಿಳಿಯದು. (ಬಿಕ್ಕುವಳು)

(ಆ ವೇಳೆಗೆ ಅಮಾತ್ಯರೂ ದಳವಾಯಿಗಳೂ ಅಲ್ಲಿಗೆ ಕಾಳಿಂಗನೊಂದಿಗೆ ಆಗಮಿಸುವರು. ಮುಖಮುದ್ರೆ ಯಲ್ಲಿ ಕಾತರಭಾವ ಕಾಣಿಸುವುದು)

ುತ್ತಾನಪಾದರಾಯ—(ಭಾವೋದ್ವೇಗದಿಂದ ಉತ್ಕಂಠಿತನಾಗಿ) ಹಾ....! ನಾನಿಂದು ಬಹಳ ಸಂಕಷ್ಟಕ್ಕೆ ಸಿಕ್ಕಿದೆ. ಧ್ರುವ ಕುಮಾರ ಕಾಡಿಗೆ ಹೊರಟುಹೋದನಂತೆ ! ಸುನೀತಿ ದೇವಿ ಮೂರ್ಛೆ ಬಿದ್ದಿದ್ದಾಳಂತೆ ! ನಾನು ಹೇಗೆ ಈ ಸಂಕಷ್ಟವನ್ನು ಒಂದೇ ಬಾರಿಗೆ ಸಹಿಸಿಕೊಳ್ಳಲಿ

(ಹಣೆಯನ್ನು ಚಚ್ಚಿಕೊಂಡು ಕಂಬನಿ ಸೂಸುವನು)

ಳವಾಯಿ— ಮಹಾಪ್ರಭೂ, ನಾನು ಈಗಲೇ ಭಟರೊಡನೆ ಕಾಡಿಗೆ ತೆರಳಿ ಧ್ರುವಕುಮಾರರು ಎಲ್ಲಿದ್ದರೂ ಬಿಡದೆ ಹುಡುಕಿ ಕರೆತರುವೆ.

ುತ್ತಾನಪಾದರಾಯ—ಆಗಬಹುದು. ಈಗಲೇ ಹೊರಡಿ. ರಾಜಧಾನಿಯ ಪರಿಸರದ ಯಾವ ತಾಣವನ್ನೂ ಬಿಡಬಾರದು. ಎಲ್ಲಾ ಕಡೆಯೂ ಸರಿಯಾಗಿ ಹುಡುಕಿ ಕರೆತನ್ನಿರಿ.

(ತರುವಾಯ ಅಮಾತ್ಯರ ಕಡೆ ತಿರುಗಿ)

ಉತ್ತಾನಪಾದರಾಯ — ಅಮಾತ್ಯರೆ, ನಾನು ಸುನೀತಿದೇವಿಯ ಕುಟೀರಕ್ಕೆ ಈಗಲೇ ಹೋಗುವೆ. ನೀವೂ ಕೂಡ ರಾಜ್ಯವೈದ್ಯ ರೊಡನೆ ಅಲ್ಲಿಗೆ ತಕ್ಷಣಬನ್ನಿರಿ.

ಅಮಾತ್ಯ— ಅಪ್ಪಣೆ ಮಹಾಪ್ರಭೂ !

(ಪರದೆಯು ಬೀಳುವುದು)

ದೃಶ್ಯ

೫

[ಈ ಶೋಕವ್ಯಾಕುಲ ವಿಶ್ವವನ್ನೇ ದಾಟಿ ಹೋಗುವಂತೆ ಓಡಿ ಓಡಿ ಮೇಲುಸಿರು ಬಿಡುತ್ತ ನಗರ ಪ್ರದೇಶವನ್ನು ದಾಟಿದ ಧ್ರುವಕುಮಾರ ಕುರುಳು ಕುರುಳಾದ ಎಳೆಗುರುಳು ಕೆದರಿ ಹರಡಿ ಹಣೆ–ಕೆನ್ನೆಗಳನ್ನು ಮುದ್ದಿಡುವುದು ತಂಗಾಳಿಯ ಚಿನ್ನಾಟಕ್ಕೆ ಸಿಕ್ಕಿ. ಮೈಯ್ಯಲ್ಲಿ ತುಂತುರು ತುಂತುರಾಗಿ ಶ್ರಮಬಿಂದುಗಳು ಮೂಡಿ ಮಂಗಳಸ್ನಾನ ಮಾಡಿಸಿದ್ದುವು. ತಾಪಸ ಭಾವನೆಯ ಮೇಲೆ ಹೊಂಬಿಸಿಲ ಘುಡು ಮುದ್ರೆಯೊತ್ತಿ ಬಾಲ ಮಾರ್ತಾಂಡನಂತೆ ತೇಜೋಮಂಡಿತವಾದ ಮುಖಬಿಂಬ ಮಹತ್ವಾಕಾಂಕ್ಷೆಯ ಮದಧಾರೆಯಂತಹ ನವ ಸ್ಫೂರ್ತಿಯ ಮಿಂಚು ಬೊಗಸೆಗಂಗಳಲ್ಲಿ ಅವನನ್ನು ಯಾರೇ ಆಗಲಿ, ನೋಡಿದೊಡನೆಯೇ ಮುದ್ದಿಡಬಹುದಾದಂತಹ ಸುಂದರ ಬಾಲವ್ಯಕ್ತಿತ್ವ ಸಂಧ್ಯಾಕಾಲೀನ ಮೇಘಾಡಂಬರದಂತೆ ಸ್ವರ್ಗ ತುಲ್ಯ ಎನ್ನಬಹುದು.

ಅವನು ಆಗಾಗ ಹಿಂದಿರುಗಿ ನೋಡಿನೋಡಿ ಮುಂದುವರಿಯುವ.

ದಾಸೀಮಣಿ ಇನ್ನೂ ತನ್ನನ್ನು ಹಿಂಬಾಲಿಸಿ ಬರುತಿದ್ದಾಳೋ ಅಥವಾ ಪುರಜನರನ್ನು ಅಟ್ಟಿದ್ದಾಳೊ ಎಂಬ ಅತೀವ ಆಶಂಕೆ ಮನೋಮಂದಿರದಲ್ಲಿ ಕವಿದುದರಿಂದ ಓಟ ಅನಿವಾರ್ಯ ಅವನಿಗೆ. ನಗರ ಪ್ರದೇಶವನ್ನು ದಾಟಿ ಆ ಸಂಶಯ ನಿವಾರಣೆಯಾದನಂತರ ನಿಧಾನ ನಡಿಗೆಯಲ್ಲಿ ದೂರ ಬೆಟ್ಟದ ಸಾನು ಪ್ರದೇಶದ ಕಡೆಗೆ ಸಾಗಿತು ಪಯಣ. ಕಲ್ಲು–ಮುಳ್ಳುಗಳೊತ್ತಿ ಎಳೆಯ ಪಾದಗಳಲ್ಲಿ ನೆತ್ತರು ಸೂಸಿದರೂ ಅದರೆಡೆಗೆ ಅವನ ಲಕ್ಷ್ಯವು ಹರಿಯದು. ಮುಂದೆ ಮುಂದೆ ನಡೆದಷ್ಟೂ ತಣ್ಪು ಸೂಸುವ ಹಚ್ಚ ಹಸುರಾಂತ ಹಸು

ರ್ಗಾಡು. ಹಕ್ಕಿಗಳ ಚಿಲಿಪಿಲಿ. ದುಂಬಿಗಳ ಝೇಂಕಾರ, ಎಲೆಗಳ ಮರ್ಮರ ಕಗ್ಗಲ್ಲಿಗೂ ಭಾವ ಸ್ಫೂರ್ತಿಯನ್ನು ಮೂಡಿಸುವಷ್ಟು ಭಾವ ಬಂಧುರ. ಎಲ್ಲೋ ದೂರ ಪ್ರಾಂತದಲ್ಲಿನ ನದಿಯ ಮೊರೆತ ಅಂತಸ್ಥಲವನ್ನು ಮುಟ್ಟಿ ಪ್ರೈಮನ ಗಳನ್ನು ಪುಳಕಗೊಳಿಸುವುದು ; ಪ್ರಾಯಶಃ ತನ್ನ ಜಾಡು ಹಿಡಿದು ಮುಂದೆ ನಡೆಯಲಿ ಎಂದು. ಅಲ್ಲಲ್ಲಿ ಎಷ್ಟೋ ಬಗೆಯ, ಪರಿಪಕ್ವವಾಗಿ ಉದುರಿ ಕಂಪುಸೂಸುವ ಕಾಡು ಹಣ್ಣುಗಳು ದೃಷ್ಟಿಗೆ ಬಿದ್ದುವು. ಆದರೆ ತನ್ನನ್ನು ಶ್ರೀಮನ್ನಾರಾಯಣನ ಪದತಲದಲ್ಲಿ ನಿಶ್ಶೇಷಭಾವನೆಯಿಂದ ಅರ್ಪಿಸಿಕೊಂಡ ಅವನಿಗೆ ಒಮ್ಮೆ ಹೆಕ್ಕಿ ತಿನ್ನುವ ನೆನಪು ಮೂಡಿದರೆ ಇನ್ನೊಮ್ಮೆ ಇಲ್ಲ. ಕ್ಷುಧ್ಬಾಧೆಯು ಅಷ್ಟಿಷ್ಟರಿಂದಲೇ ತೀರುವುದು.

ವನವಲಯದ ತಣ್ಗಂಪು–ಮಣ್ಗಂಪು – ಹೂಗಂಪುಗಳೊಂದುಗೂಡಿ ಪ್ರೈಮನಗಳಿಗೆ ಕಾಯಕಲ್ಪಗೈಯ್ಯುತ್ತವೆ ; ಏನೇ ಬರಲಿ, ಶ್ರೀಮನ್ನಾರಾಯ ಣನ ಅನುಗ್ರಹ ಪಡೆಯದೆ ಹಿಂದಿರುಗಲಾರೆ ಎಂಬ ದೃಢಭಾವವನ್ನು ಬಲಿಸು ವಂತೆ. ತದೇಕ ಚಿಂತನೆಯ ಮಂಗಳ ಮಿಡಿತ ಹೃದಯ ನಾಡಿಯಲ್ಲಿ. ಅದ ರೇನು ? ಮನೋವಿಕಾರವು ಸಾಮಾನ್ಯವಾದುದೇನೂ ಅಲ್ಲ. ಅವನಿಗರಿಯ ದಂತೆಯೇ ತಾನೇ ತಾನಾಗಿ ಬಂದೇಳುವುದು]

ಅಶರೀರವಾಣಿ— (ತಾಯಿಯ ದನಿಯಲ್ಲಿ) ಮಗೂ, ಧ್ರುವಕುಮಾರಾ! ನನ್ನನ್ನು ಬಿಟ್ಟು ಹೋಗಬೇಡಪ್ಪಾ.

(ಧ್ರುವಕುಮಾರ ತಕ್ಷಣ ತಲೆಯೆತ್ತಿ ಸಂಭ್ರಾಂತಿಯಿಂದ ಸುತ್ತಮುತ್ತ ನಿಟ್ಟಿಸಿದ. ಎಲ್ಲಿಯೂ ಯಾರೂ ಇಲ್ಲ. ಒಂದೆರಡು ಕ್ಷಣ ಯೋಚಿಸಿ ನಿಜವೋ ಎಂಬಂತೆ ಭ್ರಮಿಸಿ ಉಚ್ಚಸ್ವರದಲ್ಲಿ....)

ಧ್ರುವಕುಮಾರ— ಯೋಚಿಸಬೇಡಮ್ಮಾ, ನಾರಾಯಣನ ಅನುಗ್ರಹವಾ ದೊಡನೆ ಬಂದುಬಿಡುವೆ.

ಅಶರೀರವಾಣಿ— (ದಾಸಿಯ ದನಿಯಲ್ಲಿ) ನಿನ್ನಂತಹ ಹಸುಳೆ ಅರಣ್ಯಕ್ಕೆ ಪಯಣಿಸುವುದುಂಟೇ ? ಮಗೂ, ಹಿಂದಕ್ಕೆ ಬಾಪ್ಪಾ, ನಿನ್ನನ್ನು ಬೇಡಿಕೊಳ್ಳುವೆ.

ಧ್ರುವಕುಮಾರ— (ನಸು ಚಂಚಿತನಂತೆ) ಬೇಗನೆ ಬರುವೆ. ಅಮ್ಮನನ್ನು ಸರಿಯಾಗಿ ನೋಡಿಕೊ.

ಅಂತರ್ವಾಣಿ— (ಸುರುಚಿಯ ದನಿಯಲ್ಲಿ) ನೀನು ಉಗ್ರ ತಪಸ್ಸುಮಾಡಿ ಭಗವಂತನ ಅನುಗ್ರಹ ಪಡೆದು ರಾಣಿಯ ಗರ್ಭದಲ್ಲಿ ಜನ್ಮ ಎತ್ತಿದರೆ ಮಾತ್ರ ಸಿಂಹಾಸನ ಏರುವ ಹಕ್ಕು !

ಧ್ರುವಕುಮಾರ— (ಸ್ವಗತ) ಓ, ಇದೀಗ ಸರಿ. ಸಮಯೋಚಿತವಾಗಿ ಅಂತರ್ವಾಣಿ ಎಂತಹ ಎಚ್ಚರಿಕೆ ನೀಡಿತು ? ನಾರಾಯಣ, ನನಗೆ ನೀನು ದಾರಿ ತೋರು.

ಧ್ರುವಕುಮಾರ— ನಾರಾಯಣ .. ನಾರಾಯಣ...

(ಅವನು ಪಥವರಿತು ನಡೆಯದಿದ್ದರೂ ಅದೃಷ್ಟವಶಾತ್ ಹಿಡಿದುದು ಪೂರ್ವದಿಕ್ಕಿನಸುಪಥವೇ. ನಸುದೂರದಲ್ಲಿ ಎದುರಿಗೆ ಮುಗಿಲ ಮುಟ್ಟುವಂತಹ ಹಿರಿಯ ಬೆಟ್ಟ. ವಿವಿಧ ವರ್ಣರಂಜಿತ ತಳಿರನ್ನು ಹೊತ್ತ ವೃಕ್ಷರಾಜಿಯನ್ನು ನೋಡಿದರೆ ದೇವರು ಅಲ್ಲಿಯೇ ಇರಬಹುದೆಂಬ ನಂಬುಗೆ. ಆದೇಶವೀಯದಿದ್ದರೂ ಕಾಲುಗಳು ಅತ್ತಲೇ ನಡೆದುವು. ಏರುದಿಣ್ಣೆಯ ತಾಣದಲ್ಲಿ ಆತುರದಿಂದ ನಡೆಯುವಾಗ ಒಮ್ಮೆ ಕಲ್ಲೆಡವಿ ಮುಗ್ಗರಿಸಿಯೂ ಬಿದ್ದ. 'ಅಮ್ಮಾ!' ಎಂಬ ಆರ್ತದನಿ ತನಗರಿಯದಂತೆಯೇ ಹೊಮ್ಮಿತು. ಮರುಗಳಿಗೆಯಲ್ಲಿ ಎದ್ದು ನಿಂತು ಮೈ ಕೈ ಕೊಡವಿ ತನ್ನನ್ನು ತಾನೇ ಸಾವರಿಸಿಕೊಳ್ಳುತ್ತ ಧ್ಯಾನಿಸಿದ, ನಾರಾಯಣ ...ನಾರಾಯಣ....

ಮುಂದೆ ಸ್ವಲ್ಪ ದೂರದಲ್ಲಿ ನಿರ್ಮಲವಾದ ಪುಷ್ಕರಣಿ. ಅಲ್ಲಲ್ಲಿ ನೆಲದ ಮೇಲೆ ಮರಗಳಿಂದ ಉದುರಿದ ಪಕ್ವವಾದ ಹಣ್ಣುಗಳು. ಅಲ್ಲಿಗೆ ಹೋಗುತ್ತಲೂ ಮನಸ್ಸಿಗೆ ಅದೆಷ್ಟು ಸಂತಸ ಮೂಡಿತೊ, ಆ ಪುಷ್ಕರಣಿಗಿಳಿದು ಕೈಕಾಲು ತೊಳೆದು ಮುಖಮಜ್ಜನಮಾಡಿ, ಹೊಟ್ಟೆತುಂಬ ನೀರುಕುಡಿದು ಹಣ್ಣುಗಳನ್ನು ಹೆಕ್ಕಿ ಭುಂಜಿಸಿದ. ದೂರ ಹಾದಿಯನ್ನು ನಡೆದು ಎಳೆಯ ಕಾಲುಗಳು ನೋಯುತ್ತಿದ್ದುವು. ಸ್ವಲ್ಪ ಹೊತ್ತು ಅಲ್ಲಿ ಕಾಲು ಚಾಚಿ ಕುಳಿತ ಆಯಾಸ ಪರಿಹಾರವಾಗುವುದರೊಳಗಾಗಿ ಕಣ್ಣುಗಳಿಗೆ ಜೊಂಪು ಕವಿದು ಬಂತು. ಅಲ್ಲಿಂದೆದ್ದು ಶ್ರೀಹೊನ್ನೆ ಮರದ ಬುಡದಲ್ಲಿದ್ದ ಹರವಾದ ಹಾಸ

ಗಲ್ಲಿನ ಮೇಲೆ ಮೈಚಾಚಿದ ಮಸ್ತಕ ಭಾರಕ್ಕೆ ಮೃದು ಮೆತ್ತೆಯಾಗಿ ಮೊಣಕೈ ಸುಖಾಶ್ರಯ ನೀಡಿತು. ದೂರದಿಗಂತದಲ್ಲಿ ಶಾಂತಸೂರ್ಯ ಮುಳುಗುವುದರ ಲ್ಲಿದ್ದ ಪ್ರಕೃತಿಯ ವೈವಿಧ್ಯಮಯ ಸೃಷ್ಟಿಯ ಮೇಲೆ ಸುವರ್ಣಕಾಂತಿಯನ್ನು ಚೆಲ್ಲಿ. ಅತ್ತಲೇ ನೆಟ್ಟ ಸುರುಚಿಪೂರ್ಣವಾದ ದೃಷ್ಟಿಯಿಂದ ಒಂದೆರಡುಗಳಿಗೆ ಸೌಂದರ್ಯ ಸಮೀಕ್ಷೆ ನಡೆಸಿದನೋ ಇಲ್ಲವೋ, ಆಗಲೇ ಗಾಢವಾದ ನಿದ್ರೆ ತುಂಬಿ ಬಂದಿತು ಎಳೆಯ ಕಣ್ಣುಗಳಿಗೆ. ಅನಂತರ ಅವನಿಗೆ ಎಚ್ಚರವಾದುದು ಪೂರ್ವಪ್ರಾಂತದಲ್ಲಿ ಮುನ್ನೇಸರು ಮೂಡಿದಾಗಲೇ. ಏಕಾಂಗಿಯಾದ ಅವನಿಗೆ ಕಾರಿರುಳಿನ ದಿಗಿಲು ಮುಟ್ಟಿಯೂ ಇರಲಿಲ್ಲ ; ದುಷ್ಟಮೃಗಗಳ ಅಪಾಯವು ತಟ್ಟಿಯೂ ಇರಲಿಲ್ಲ. ಅಲ್ಲಲ್ಲಿ ಆಳೆತ್ತರದ ಹುತ್ತಗಳೂ, ಗವಿಗಹ್ವರಗಳೂ ಇವೆ. ಅಲ್ಲಿ ಯಾವುದೇ ಭಯಂಕರ ಪ್ರಾಣಿ ತಂಗಿರಲೂ ಬಹುದು. ಅದನ್ನೆಲ್ಲಾ ಯೋಚಿಸಿಕೊಂಡಮೇಲೆ ಅವನಿಗಾದ ಸಂತಸಕ್ಕೆ ಎಣೆಯೇ ಇರಲಿಲ್ಲ. ಮನಃ ಪ್ರಾಣಗಳು ಸಂತಸದಿಂದ ತುಂಬಿ ತುಯ್ಯಲಾಡಿದುವು.

ಧ್ರುವಕುಮಾರ —(ಉದ್ವೇಗದಿಂದ ಉಚ್ಚಸ್ವರದಲ್ಲಿ ತನಗೆ ತಾನೇ ಹೇಳಿಕೊಂಡ) ನಮ್ಮನ್ನು ಕಾಪಿಡುವ ಭಗವಂತನು ಎಲ್ಲೆಲ್ಲಿಯೂ ಇದ್ದಾನೆ ಎಂದು ನನ್ನ ತಾಯಿಯು ಹೇಳಿದ ಮಾತು ಸತ್ಯಸ್ಯ ಸತ್ಯ.

ದೂರದಬೆಟ್ಟ ಮರುದನಿಗೊಟ್ಟಿತು–ನಮ್ಮನ್ನು ಕಾಪಿಡುವ ಭಗವಂತನು ಎಲ್ಲೆಲ್ಲಿಯೂ ಇದ್ದಾನೆ ಎಂದು ನನ್ನ ತಾಯಿಯು ಹೇಳಿದ ಮಾತು ಸತ್ಯಸ್ಯ ಸತ್ಯ.

ಧ್ರುವಕುಮಾರ ಪರಮಾನಂದಭರಿತನಾದ ಆ ಮರು ಧ್ವನಿಯನ್ನು ಕೇಳಿ ಬೆಟ್ಟದ ಕಿಬ್ಬದಿಯಲ್ಲಿ ಹರಿಯುವ ನದಿಯ ಮೊರೆತ ಇನ್ನಷ್ಟು ಸ್ಪಷ್ಟವಾಗಿ ಕೇಳಿಸುತಿದ್ದುದರಿಂದ ಅದರ ಜಾಡನ್ನೇ ಹಿಡಿದು ಅವನು ಪಯಣವನ್ನು ಮುಂದುವರಿಸಿದ. ಸ್ವಲ್ಪದೂರ ನಡೆದ ಮೇಲೆ ದೂರದಲ್ಲಿ ಯಾರೋ ಬರುತಿದ್ದುದು ಕಾಣಿಸಿತು. ಆ ಗೊಂಡಾರಣ್ಯದಲ್ಲಿ ಯಾರಾದರೂ ಬರುತಿದ್ದಾರೆಂದರೆ ಅದು ನಿಜವಾಗಿಯೂ ವಿಶೇಷವೇ. ಧ್ರುವಕುಮಾರ ಸಖೇದಾಶ್ಚರ್ಯ ವಿಸ್ಮೃತ

ನೋಟವನ್ನು ಅತ್ತಲೇ ಚೆಲ್ಲಿಕೊಟ್ಟ. ವ್ಯಕ್ತಿ ಸಮೀಪಗತವಾದಾಗ ಅವರ ರೂಪಲಕ್ಷಣಗಳು ಸ್ಪಷ್ಟವಾಗಿ ಕಂಡು ಬಾಲಕ ಸಾನಂದ ಪುಳಕಿತನಾದ. ಅವನ ತಾಯಿಯು ವರ್ಣಿಸುತಿದ್ದ ಋಷಿಗಳ ಭವ್ಯಲಕ್ಷಣ ಅವರಲ್ಲಿತ್ತು. ನೆಟ್ಟ ನೋಟವನ್ನು ಅವರಿಂದ ಕೀಳಲಾಗಲಿಲ್ಲ. ಅರಿಶಿನ ವಸ್ತ್ರಧಾರಿ, ಕೈಯಲ್ಲಿ ತಾಳ-ತಂಬೂರಿ, ಕೊರಳಲ್ಲಿ ಸ್ಫಟಿಕಮಾಲೆ, ನೆತ್ತಿಯ ಮೇಲೆ ಕಟ್ಟಿದ ಶಿರ ಮುಡಿ, ಪಾದಗಳಲ್ಲಿ ಪಟತ್ಕಾರ ಗೈಯ್ಯುವ ಹಾವುಗೆಗಳು, ಇವೆಲ್ಲಾ ಅವರು ಋಷಿಗಳು ಹೌದು ಎಂಬುದಕ್ಕೆ ಬ್ರಹ್ಮಾಂಡ ಸಾಕ್ಷಿ. ಅವರು ಬಾಹ್ಯಪ್ರಜ್ಞೆಯೇ ಇಲ್ಲದಷ್ಟು ಭಾವಪರವಶತೆಯಿಂದ ತಾಳ ತಂಬೂರಿ ಶ್ರುತಿಯೊಡನೆ ಹಾಡಿ ಕೊಳ್ಳುತ್ತಿದ್ದಾರೆ ಕಣ್ಣು ಮುಚ್ಚಿ)

ಧ್ರುವಕುಮಾರ— ನಾರಾಯಣ....ನಾರಾಯಣ...

ಋಷಿವರ್ಯ— (ತಟ್ಟನೆ ಕಣ್ತೆರೆದು) ಮಗೂ! ಯಾರಪ್ಪಾ ನೀನು ? (ಆನಂದದಿಂದ ದಿಟ್ಟಿಸುವರು)

ಧ್ರುವಕುಮಾರ— (ನಮಸ್ಕರಿಸಿ) ನಾನು ಉತ್ತಾನಪಾದರಾಜನ ಔರಸ ಪುತ್ರನಾದ ಧ್ರುವಕುಮಾರ.

ಋಷಿವರ್ಯ— ಓಹೋ! ನೀನು ಧ್ರುವಕುಮಾರನೇ? ಅರಮನೆಯನ್ನು ಬಿಟ್ಟು ಇಷ್ಟುದೂರ ಬರುವ ಸಾಹಸವನ್ನು ಏಕಪ್ಪಾ ಕೈಕೊಂಡೆ ? (ತಲೆಯಮೇಲೆ ಕೈಯಿಟ್ಟು ನಲ್ಮೆಯಿಂದ ನೇವರಿಸುವರು)

ಧ್ರುವಕುಮಾರ— (ಕೈಗಳನ್ನು ಜೋಡಿಸಿಕೊಂಡು) ತಮ್ಮ ಪರಿಚಯವಾಗ ಲಿಲ್ಲ ಮಹರ್ಷಿಗಳೇ. ಮೊದಲು ತಮ್ಮ ಪರಿಚಯ ವನ್ನು ಮಾಡಿಕೊಡೋಣವಾಗಲಿ.

ಋಷಿವರ್ಯ— ಎಲ್ಲರೂ ನನ್ನನ್ನು 'ನಾರದ' ಎಂದು ಕರೆಯುತ್ತಾರೆ.

ಧ್ರುವಕುಮಾರ— ಓ....ಈಗ ತಿಳಿಯಿತು. ನನ್ನ ತಾಯಿಯಿಂದ ತಮ್ಮ ವಿಚಾರವನ್ನು ಕೇಳಿರುವೆ. ತಮ್ಮ ದರ್ಶನದಿಂದ ನಾನು ಧನ್ಯ. ಮಹರ್ಷಿಗಳೇ ತಮಗೆ ಶರಣು. (ಅನುನಯದಿಂದ ಪುನಃ ನಮಸ್ಕರಿಸುವನು)

ನಾರದಮಹರ್ಷಿ— ಮಗೂ, ನಿನಗೆ ಮಂಗಳವಾಗಲಿ,

ಧ್ರುವಕುಮಾರ— ಶ್ರೀಮನ್ನಾರಾಯಣನೇ ನಿಮ್ಮನ್ನು ಇಲ್ಲಿಗೆ ಕಳುಹಿಸಿ ಕೊಟ್ಟಿರಬೇಕು !

ನಾರದಮಹರ್ಷಿ— (ಮಂದಹಾಸ ಬೀರಿ) ಹಾಗಾದರೆ ಒಳ್ಳೆತಪ್ಪೆ ?

ಧ್ರುವಕುಮಾರ— ನಿಜವಾಗಿಯೂ ನಾನು ಪುಣ್ಯವಂತ ಎಂದು ಧೈರ್ಯವಾಗಿ ಹೇಳಿಕೊಳ್ಳುವೆ. ತಮ್ಮ ದರ್ಶನಲಾಭ ಸಾಮಾನ್ಯರಿಗೆ ಲಭ್ಯವೇ ?

ನಾರದಮಹರ್ಷಿ— ನನ್ನನ್ನೂ ದೇವರೆಂದು ಬಗೆದಿದ್ದಿ ?
(ನುಡಿ ತಿಳಿಹಾಸ್ಯಪ್ರಧಾನವಾಗಿ ಹೊರಬಿತ್ತು)

ಧ್ರುವಕುಮಾರ— ಗುರು ಹಿರಿಯರು ದೈವಸಮಾನ ಎಂದು ತಿಳಿದುಕೊಂಡಿರುವೆ ಮಹರ್ಷಿಗಳೇ !

ನಾರದಮಹರ್ಷಿ— ಬಹಳ ಸಂತೋಷ. ನಿನ್ನ ತಿಳಿವಳಿಕೆ ಮೆಚ್ಚುವಂತಾದ್ದು.

ಧ್ರುವಕುಮಾರ— ನಿಮ್ಮ ಮೆಚ್ಚಿಗೆ ನನಗೆ ಪ್ರೋತ್ಸಾಹ.
(ಮುಖಬಿಂಬ ಹೂವಿನಂತೆ ಅರಳಿ ಪ್ರಸನ್ನವಾಗುವುದು)

ನಾರದಮಹರ್ಷಿ— (ತಲೆದೂಗಿ) ಅಂದಹಾಗೆ, ನೀನು ಈ ಕಾಡಿನಲ್ಲಿ ಒಬ್ಬನೇ ಎಲ್ಲಿಗೆ ಹೊರಟಿರುವೆ ?

ಧ್ರುವಕುಮಾರ— ನಾನು ನಾರಾಯಣನನ್ನು ಹುಡುಕಿಕೊಂಡು ಹೊರಟಿರುವೆ.

ನಾರದಮಹರ್ಷಿ— ಹಾ ! ಬಹಳ ಮಹತ್ತ್ವದ ವಿಚಾರ. ಕೇಳಿ ತುಂಬ ಸಂತೋಷವಾಯಿತು. ಆದರೆ, ಅವನು ಈ ಕಾಡಿನಲ್ಲಿ ಸಿಗುವನೇ ?

ಧ್ರುವಕುಮಾರ— ಋಷಿಗಳು ಕಾಡಿನಲ್ಲಿ ತಪಸ್ಸು ಮಾಡಿ ಭಗವಂತನ ದರ್ಶನ ಪಡೆದರೆಂದು ಕೇಳಿರುವೆ ಮಹರ್ಷಿಗಳೇ ! ಹಾಗೆಂದು ನನ್ನ ತಾಯಿಯೇ ನನಗೆ ಉಪದೇಶಿಸಿದ್ದಾಳೆ.

ನಾರದಮಹರ್ಷಿ— ಅದು ಋಷಿಗಳ ವಿಚಾರವಾಯ್ತು. ನಿನ್ನಂತಹ ಹಸುಳೆಗೆ ಇದು ಸಾಧ್ಯವೇನಪ್ಪಾ ?

ವಕುಮಾರ— ಏಕೆ ಸಾಧ್ಯವಾಗದು ? ನಾನು ನಾರಾಯಣನ ದರ್ಶನಕ್ಕಾಗಿಯೇ ಹೊರಟಿರುವೆ.

ರದ ಮಹರ್ಷಿ—ತಪಸ್ಸೆಂದರೆ ಹುಡುಗಾಟವಲ್ಲ ಮಗೂ ! ಬಹಳ ಏಕಾಗ್ರತೆ ಬೇಕು.

ವಕುಮಾರ— ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ ಮಹರ್ಷಿಗಳೇ! ನನಗೆ ದಯವಿಟ್ಟು ಮಂತ್ರೋಪದೇಶವನ್ನು ಮಾಡಿರಿ. ನಾನು ತಪಸ್ಸು ಮಾಡಿಯೇ ತೀರುವೆ.

ರದ ಮಹರ್ಷಿ—ಈ ಕಗ್ಗಾಡಿನಲ್ಲಿ ಒಬ್ಬನೇ ಇರುವುದು ನಿನಗೆ ಕಷ್ಟವಾಗದೇ ? ಇಲ್ಲಿ ದುಷ್ಟಮೃಗಗಳೂ ಘಟಸರ್ಪಗಳೂ ಇರುತ್ತವೆ ಅವುಗಳಿಂದ ಅಪಾಯವುಂಟು.

ವಕುಮಾರ— ಇರಲಿ, ಅವೂ ನಮ್ಮಂತೆಯೇ ಜೀವಿಗಳು. ನಾನಾಗಲೇ ಹಗಲಿರುಳುಗಳನ್ನು ಅವುಗಳೊಂದಿಗೆ ಕಳೆದಿರುವೆ.

ರದ ಮಹರ್ಷಿ—ಬಿಸಿಲು ಮಳೆಗಾಳಿಗಳನ್ನು ನೀನು ತಡೆದುಕೊಳ್ಳಬಲ್ಲೆಯಾ !

ವಕುಮಾರ— ಅದೇನೂ ಹೆಚ್ಚಲ್ಲ ಮಹರ್ಷಿಗಳೇ !

ದ ಮಹರ್ಷಿ—ಉಪವಾಸ ಇರಬಲ್ಲೆಯಾ ?

ವಕುಮಾರ— ಅದು ದೊಡ್ಡದಲ್ಲ ಹಣ್ಣು ಹಂಪಲುಗಳು ಇಲ್ಲಿ ಸಿಗುತ್ತವೆ.

ರದ ಮಹರ್ಷಿ—ಇಷ್ಟೆಲ್ಲಾ ಕಷ್ಟಪಟ್ಟು ದೇವರನ್ನು ನೋಡುವ ಉದ್ದೇಶವೇನು ಮಗೂ ?

ವಕುಮಾರ— ಭಗವಂತನ ವರ ಪಡೆಯದೆ ನನ್ನ ತಂದೆಯ ತೊಡೆಯ ಮೇಲೆ ಕೂಡುವಂತಿಲ್ಲ; ಸಿಂಹಾಸನವನ್ನೂ ಏರುವಂತಿಲ್ಲ. ಆದ್ದರಿಂದ ನಾನು ಹಠ ತೊಟ್ಟಿರುವೆ.

ರದ ಮಹರ್ಷಿ—ಹಾಗೆಂದು ಯಾರು ಹೇಳಿದರು ಮಗೂ ?

ವಕುಮಾರ— ನನ್ನ ಚಿಕ್ಕಮ್ಮ ಅಪ್ಪಣೆ ಕೊಡಿಸಿದ್ದಾಳೆ.

ರದ ಮಹರ್ಷಿ—ನಿನಗೆ ಹಾಗೆಂದು ಹೇಳಿದಳೇ ನಿನ್ನ ಚಿಕ್ಕಮ್ಮ? ನಡೆ ಊರಿಗೆ. ನಾನೇ ನಿನ್ನನ್ನು ಸಿಂಹಾಸನದ ಮೇಲೂ ನಿನ್ನ

ತಂದೆಯ ತೊಡೆಯ ಮೇಲೂ ಕೂಡಿಸಿ ಬರುವೆ. ಅದಕ್ಕೇಕಿಷ್ಟು ಕಷ್ಟ ?

ಧ್ರುವಕುಮಾರ— ಈಗದು ಬೇಡವೇ ಬೇಡ, ಅದಕ್ಕೂ ಮೊದಲು ನಾನು ದೇವರನ್ನು ನೋಡಲೇಬೇಕು ! ಅವನ ವರವನ್ನು ಪಡೆದುಕೊಂಡನಂತರ ಆ ವಿಚಾರವೆಲ್ಲಾ.

(ಮಹರ್ಷಿಗಳು ಅವನ ಮುಖವನ್ನು ಪ್ರೇಮಭಾವದಿಂದ ನಿಟ್ಟಿಸಿದರು. ಅವನ ದಿಟ್ಟತನ ಮನಕ್ಕೆ ಆನಂದವನ್ನೂ ಡಿಸಿತು. ತಲೆಯನ್ನು ನೇವರಿಸಿ ನಲ್ಮೆಯಿಂದ ಮುದ್ದು ಗೈದರು)

ನಾರದ ಮಹರ್ಷಿ—ನಿನಗೆ ಭಗವಂತನನ್ನು ಕಾಣುವುದರಲ್ಲಿ ಪೂರ್ಣ ನಂಬಿಕೆ ಇದೆಯೇ ?

ಧ್ರುವಕುಮಾರ— ಅದಿಲ್ಲದಿದ್ದರೆ ನಾನಿಲ್ಲಿಗೆ ಬರುತ್ತಲೇ ಇರಲಿಲ್ಲ.

ನಾರದ ಮಹರ್ಷಿ—ಹಾಗಾದರೆ.... ನೀನು ನಗರಿಗೆ ಈಗ ಹಿಂತಿರುಗಲಾರೆ ?

ಧ್ರುವಕುಮಾರ— ಇಲ್ಲವೇ ಇಲ್ಲ. ಮೊದಲು ಭಗವಂತನ ದರ್ಶನವಾಗಲಿ. ಅನಂತರ ಆ ಯೋಚನೆ. (ಕೆಂದುಟಿಗಳಲ್ಲಿ ಎಳೆಯ ನಗು ಹೂವಿನಂತೆ ಅರಳುವುದು)

ನಾರದ ಮಹರ್ಷಿ—ಮಗೂ, ನಿನಗೆ ಭಗವಂತನನ್ನು ಧ್ಯಾನಿಸುವ ವಿಧಾನ ಗೊತ್ತೇ ?

ಧ್ರುವಕುಮಾರ— ಅದೇನೂ ತಿಳಿಯದು ಮಹರ್ಷಿಗಳೇ. ನನ್ನ ತಾಯಿ ದೃಢವಾದ ನಂಬಿಕೆಯಿಂದ, ಅಪಾರವಾದ ಭಕ್ತಿಯಿಂದ ಭಗವಂತನನ್ನು ಕರೆದರೆ ಓಡಿ ಬರುತ್ತಾನೆಂದು ಹೇಳಿದ್ದಾಳೆ.

ನಾರದ ಮಹರ್ಷಿ—ಆ ನಂಬುಗೆ ದೃಢವಾಗಿರಲಿ... ನಾನು ನಿನಗೆ ಕೆಲವು ಮಂತ್ರಗಳನ್ನು ಉಪದೇಶಿಸುವೆ. ಅವುಗಳ ಮೂಲಕ ನೀನು ಭಗವಂತನನ್ನು ಪ್ರಾರ್ಥಿಸು. ಇಗೋ, ಹೀಗೆ ಬಾ ; ಎಲ್ಲಿ ಪದ್ಮಾಸನ ಹಾಕು.

(ನಾರದ ಮಹರ್ಷಿಯು ಪದ್ಮಾಸನ ಹಾಕುವುದನ್ನು ತೋರುವರು. ಅದರಂತೆಯೇ ಪದ್ಮಾಸನ ಹಾಕಿದ ಧ್ರುವಕುಮಾರ)

ನಾರದ ಮಹರ್ಷಿ—ನಿನಗೆ ಶ್ರೀಮನ್ನಾರಾಯಣನನ್ನು ಕುರಿತು ತಪಸ್ಸು ಗೈಯ್ಯಬೇಕೆಂಬ ಇಚ್ಛೆ ಅಲ್ಲವೇ ?

ಧ್ರುವಕುಮಾರ— ಹೌದು, ಮಹರ್ಷಿಗಳೇ.

ನಾರದ ಮಹರ್ಷಿ—ನಾರಾಯಣನು ಹೇಗಿದ್ದಾನೆಂದು ನಿನ್ನ ತಾಯಿ ತಿಳಿಸಿ ಕೊಟ್ಟಿದ್ದಾಳೆಯೇ?

ಧ್ರುವಕುಮಾರ— ಮಣಿಮುಕುಟಧಾರಿಯೂ, ಚತುರ್ಭುಜನೂ, ಶಂಖ ಚಕ್ರ ಗದಾ ಪದ್ಮ ಹಸ್ತನೂ, ಸುಂದರಾಂಗನೂ ಪೀತಾಂಬರನೂ ಆಗಿದ್ದಾನೆಂದು ವರ್ಣಿಸಿದ್ದಾಳೆ.

ನಾರದ ಮಹರ್ಷಿ—ಸರಿ....ಸರಿ ; ಧ್ರುವಕುಮಾರ, ಕೇಳು ನಿನ್ನ ಮನವನ್ನು ಭ್ರೂಮಧ್ಯೆನೆಟ್ಟು ಅತ್ತಿತ್ತ ಚಲಿಸದಂತೆ ಮೊದಲು ಕಟ್ಟಿಹಾಕು. ಚಿತ್ತಭಿತ್ತಿಯ ಮೇಲೆ ತದ್ರೂಪನ್ನು ಕಡೆದು ನಿಲ್ಲಿಸಿ ತದೇಕ ಚಿಂತನೆಯಲ್ಲಿ ಧ್ಯಾನಮಗ್ನ ನಾಗು. ಮನವನ್ನು ಅತ್ತಿತ್ತ ಚಲಿಸದಂತೆ ಕಟ್ಟಿ ಹಾಕುವುದೇ ತಪಸ್ಸಿನ ಮೊದಲ ಅಂಗ ; ಮೈಮರೆತು ಧ್ಯಾನದಲ್ಲಿ ತಲ್ಲೀನನಾಗುವುದು ಎರಡನೆಯ ಅಂಗ.

ಧ್ರುವಕುಮಾರ— ಈಗ ತಿಳಿಯಿತು. ನಾನು ಆತುರವಾಗಿ ಅರಣ್ಯಕ್ಕೆ ಹೊರಟು ಬಂದೆ. ಮನೆಯಲ್ಲಿ ಇದನ್ನೆಲ್ಲಾ ತಿಳಿದು ಕೊಳ್ಳುವಷ್ಟು ಸಮಯ-ಸಹನೆ ಎರಡೂ ನನ್ನಲ್ಲಿ ಆಗ ಇರಲಿಲ್ಲ.

ನಾರದ ಮಹರ್ಷಿ—(ಮುಗುಳ್ನಕ್ಕು, ತಲೆದೂಗಿ) ನೀನು ತಪಸ್ಸನ್ನು 'ಓಂ ನಮೋ ಭಗವತೇ ವಾಸುದೇವಾಯ' ಎಂಬ ಮಂತ್ರ ದಿಂದ ಆರಂಭಿಸು. ಅನಂತರ ಈ ಮಂತ್ರಗಳನ್ನು ಹೀಗೆ ಉಚ್ಚರಿಸು.

(ನಾರದ ಮಹರ್ಷಿ ಅನೇಕ ಮಂತ್ರಗಳನ್ನು ಬಿತ್ತರಿಸಿದರು. ಅವರ ಶ್ರೀಮುಖದಿಂದ ಹೊಮ್ಮಿದ ಪವಿತ್ರ ಮಂತ್ರಧಾರೆ ಧ್ರುವಕುಮಾರನ ಕರ್ಣ ದ್ವೇಶದಲ್ಲಿ ಧುಮುಧುಮಿಸಿ ವಕ್ಷಃಸ್ಥಲದ ಭಿತ್ತಿಯ ಮೇಲೆ ಸ್ಥಿರವಾಗಿ ಉಲ್ಲೇಖಿಸಲ್ಪಟ್ಟಿತು, ಅವನು ತದೇಕ ಚಿತ್ತನಾಗಿ, ಆನಂದ ಆಸಕ್ತಿಗಳ ಒಕ್ಕೂಟವಾಗಿ ಮಂತ್ರಮುಗ್ಧ ಫಣಿಯಂತೆ ನಿಶ್ಚಲನಾದ. ರೋಮ ರೋಮಗಳಲ್ಲೂ ಆತ್ಮ ವಿಶ್ವಾಸ ಹೊಮ್ಮಿ ಭಾವಪರವಶತೆಯ ಅಪೂರ್ವಕಳೆ ಉಜ್ವಲಿಸಿತು ನಯನದ್ವಯಗಳಲ್ಲಿ. ಅವರ ಅಮರವಾಣಿ ಶ್ರವಣೇಂದ್ರಿಯಕ್ಕೆ ನಿರ್ಮಿಸಿದ ಸೇತು ತುಂಡುಗಡಿದ ಮೇಲೆಯೇ ಮೈಯರಿವು ಮೂಡಿದ್ದು. ನಾರದಮಹರ್ಷಿ ಅವನ ಏಕಾಗ್ರತೆಗೆ ಅತ್ಯಂತ ಸಂತುಷ್ಟರಾದರು)

ನಾರದ ಮಹರ್ಷಿ—ಮಗೂ, ನೀನು ಈ ಭೂಮಿಗೆ ಅಕಸ್ಮಾತ್ತಾಗಿ ಬಂದಿರುವ ಕಲ್ಪತರು.

ಧ್ರುವಕುಮಾರ— (ಎಳೆಯ ತುಟಿಗಳಲ್ಲಿ ತರಲಹಾಸವನ್ನು ಸೂಸಿ) ತಾವು ಈಗಲೇ ಅಷ್ಟೊಂದು ಮುಂದೆ ಹೋದರೆ ತುಂಬ ಕಷ್ಟ.

ನಾರದ ಮಹರ್ಷಿ—ಅಂದರೆ ?

ಧ್ರುವಕುಮಾರ— ಎಲ್ಲಿ ವಿಪರ್ಯಾಸಕ್ಕೆ ಕಾರಣವಾಗುವುದೋ ಎಂಬ ಭಯ.

ನಾರದ ಮಹರ್ಷಿ—ಮಗೂ, ಆ ಭಯ ಉತ್ತುಂಗಕ್ಕೆ ಏಣಿ.

ಧ್ರುವಕುಮಾರ— ತಮ್ಮ ದಯೆಯೊಂದಿದ್ದರೆ ಸಾಕು ; ನಾನು ಉತ್ತುಂಗಕ್ಕೇರಬಲ್ಲೆ.

(ಕರಗಳನ್ನು ಜೋಡಿಸುವನು ಅರ್ಧಮುದ್ರಿತ ನೇತ್ರಗಳಲ್ಲಿ ಅಂತಃಸತ್ವದ ಮಿಂಚು ಮಿನುಗಿತು)

ನಾರದ ಮಹರ್ಷಿ—ಮಗೂ, ಪ್ರಾತರ್ವಿಧಿಗಳನ್ನು ಪೂರೈಸಿದನಂತರ ತಪಸ್ಸಿಗೆ ಕೂಡು. ಶ್ರೀಮನ್ನಾರಾಯಣ ನಿನ್ನ ಕರೆಗೆ ಖಂಡಿತ ಓಗೊಡುತ್ತಾನೆ. ನೀನು ತುಂಬ ಅದೃಷ್ಟಶಾಲಿ.

ಧ್ರುವಕುಮಾರ— ಎಲ್ಲಾ ತಮ್ಮ ಅನುಗ್ರಹದಿಂದ.

ನಾರದ ಮಹರ್ಷಿ—(ಪ್ರಸನ್ನನಾಗಿ) ಭಗವಂತನ ಅನುಗ್ರಹವೇ ನನ್ನ ಮೇಲಿರುವಾಗ ನಮ್ಮದೇನು ?

ಧ್ರುವಕುಮಾರ— ಭಗವಂತನ ಅನುಗ್ರಹ ನಮಗೆ ಬರಬೇಕಾದರೆ ಅದು ಗುರುಗಳ ಮೂಲಕವೇ.

ನಾರದ ಮಹರ್ಷಿ—ನಿನ್ನ ಜಾಣ್ಮೆಗೆ ಮೆಚ್ಚಿದೆ.

ಧ್ರುವಕುಮಾರ— ತಾವು ನನಗೆ ತಪಸ್ಸಿನ ಕ್ರಮವನ್ನು ತಿಳಿಸಿದಿರಿ. ನಾನು ಎಲ್ಲಿ ತಪಸ್ಸುಗೈಯ್ಯಬೇಕು, ಯಾವ ತಾಣ ಅದಕ್ಕೆ ಸೂಕ್ತ ಎಂಬುದನ್ನು ತಿಳಿಸಲಿಲ್ಲ ಮಹರ್ಷಿಗಳೇ !

ನಾರದ ಮಹರ್ಷಿ—ಓಹೋ...! ಮರೆತಿದ್ದೆ ಇಲ್ಲಿಂದ ಸ್ವಲ್ಪ ದೂರದಲ್ಲಿ ಕಾಳಿಂದೀ ನದಿ ಪ್ರವಹಿಸುತ್ತಿದೆ. ಅದರ ತೀರದಲ್ಲಿ ಅನೇಕ ಬೃಹತ್ ವೃಕ್ಷಗಳು ಸೊಂಪಾಗಿ ಬೆಳೆದಿವೆ. ಫಲವೃಕ್ಷಗಳು ಇವೆ, ಅಲ್ಲಿಗೆ ನೀನು ಹೋದರೆ ಉತ್ತಮವಾದ ಸ್ಥಳವನ್ನು ಆಯ್ದುಕೊಳ್ಳಬಹುದು.

ಧ್ರುವಕುಮಾರ— ಅದು ತಪೋವನವೇ ?

ನಾರದ ಮಹರ್ಷಿ—ಹೌದು. ಅಲ್ಲಿ ಬಹಳ ಮಂದಿ ತಪಸ್ವಿಗಳು ನಾರಾಯಣನಿಂದ ಅನುಗ್ರಹೀತರಾಗಿದ್ದಾರೆ.

ಧ್ರುವಕುಮಾರ— ತಾವು ..?

ನಾರದ ಮಹರ್ಷಿ—ನಾನೂ ಕೂಡ.

(ಪ್ರೀತಿಯಿಂದ ಅವನ ಮಸ್ತಕದ ಮೇಲೆ ಮುಕ್ತ ಹಸ್ತವನ್ನು ಇಡುವನು)

ಧ್ರುವಕುಮಾರ— ಮಹರ್ಷಿಗಳೇ. ಈಗಣ ತಮ್ಮ ಹಸ್ತಸ್ಪರ್ಶ ನನ್ನನ್ನು ಸ್ವರ್ಗಕ್ಕೆ ಕೊಂಡೊಯ್ಯಿತು. ಹಾ.... ನಿದ್ದೆಯಲ್ಲಿರುವವರ ಮೇಲೆ ತಣ್ಣೀರೆರೆಚಿದಂತೆ ಏನೋ ಒಂದು ಬಗೆಯ ಹೊಸ ಅನುಭವ. ನಾನು ಅನುಗ್ರಹೀತನಾದೆ.

ನಾರದ ಮಹರ್ಷಿ—ನಿನ್ನ ನಾಡಿಯಲ್ಲಿ ಪ್ರವಹಿಸುವ ಉಷ್ಣರಕ್ತವು ತಾಪಸ ಪ್ರಭಾವದಿಂದ ಸಹಜವಾಗಿ ಸಾಂತ್ವನಗೊಳ್ಳುವುದು. ಅದೇ ನಿನಗುಂಟಾಗುವ ಹೊಸ ಅನುಭವ.

ಧ್ರುವಕುಮಾರ— ತಮ್ಮ ಮುಖ ದರ್ಶನವಾದಾಗಿನಿಂದ ನನ್ನಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಲೌಕಿಕ ಪ್ರವೃತ್ತಿಯು ಸಂಕಲೆಯು

ಕಳಚಿಬಿದ್ದಿತು. ನನ್ನಲ್ಲೀಗ ಯಾವ ಪ್ರಲೋಭನೆಯೂ ಉಳಿದಿಲ್ಲ.

ನಾರದ ಮಹರ್ಷಿ—ಅಂದರೆ ನಿನ್ನಲ್ಲಿ ಯಾವ ಆಸೆಯಾದರೂ ಉಳಿದಿತ್ತೇ ?

ಧ್ರುವಕುಮಾರ— ಹೌದು ಮಹರ್ಷಿಗಳೇ. ಮೊದಲನೆಯದಾಗಿ ನಮ್ಮ ತಾಯಿಗೆ ಬಂದಿರುವ ಕಷ್ಟ ನಿವಾರಣೆಯಾಗಬೇಕು. ಎರಡನೆಯದಾಗಿ ಸಿಂಹಾಸನಕ್ಕೆ ಉತ್ತಮಕುಮಾರ ನಂತೆ ನಾನೂ ಆ ಹಕ್ಕುದಾರನಾಗಬೇಕು ಎಂಬೀ ಆಶಾಭಾವನೆ ಮನದಲ್ಲಿ ತುಂಬಿತ್ತು. ಈಗ ಅವೂ ಇಲ್ಲ. ನಾನು ಲೋಕವಾಸನೆಯಿಂದ ಬಹಳ ದೂರವಾಗಿ ದ್ದೇನೆ. ಇನ್ನು ನನಗೆ ನಾರಾಯಣನು ವರವನ್ನು ಕರುಣಿಸುತ್ತಾನೆ ಅಲ್ಲವೇ ?

(ಪ್ರಸನ್ನ ಮುಖದಲ್ಲಿ ಹೊಮ್ಮಿದ ಪ್ರಶ್ನೆ ವಿಶ್ವಾಸ ಪೂರ್ಣವಾಗಿತ್ತು)

ನಾರದ ಮಹರ್ಷಿ—ಖಂಡಿತ.... ನೀನು ನರಜನ್ಮವೆತ್ತಿ ಧನ್ಯನಾದೆ.

ಧ್ರುವಕುಮಾರ— ನನ್ನನ್ನು ಅಕ್ಕರೆಯಿಂದ ಕಂಡು ಅನುಗ್ರಹಿಸಿದ್ದೀರಿ. ನಾನು ತಮಗೆ ಅತ್ಯಂತ ಕೃತಜ್ಞನು.

ನಾರದ ಮಹರ್ಷಿ—ನಿನ್ನ ವಿನಯವಂತಿಕೆ ನನಗೆ ಆನಂದವನ್ನುಂಟು ಮಾಡಿದೆ.

ಧ್ರುವಕುಮಾರ— ನಾನು ಯಾವ ಕಡೆ ಪಯಣಿಸಬೇಕು ? ಯಾವ ದಾರಿ ಸುಗಮ ?

ನಾರದ ಮಹರ್ಷಿ—(ಕೈದೋರಿ ಹೀಗೆ ಉತ್ತರೀತಟದ ಮಾರ್ಗವಾಗಿ ಪಯಣಿಸು ಮಗುವೇ ಇಲ್ಲಿಂದ ನದೀತೀರ ಬಹಳ ದೂರವೇನೂ ಇಲ್ಲ

ಧ್ರುವಕುಮಾರ— ತುಂಬ ಉಪಕಾರವಾಯಿತು.

(ನಮಸ್ಕರಿಸುವನು)

ನಾರದ ಮಹರ್ಷಿ—ದೀರ್ಘಾಯುಷ್ಮಂತನಾಗು.

(ಪರದೆಯು ಬೀಳುವುದು)

ದೃಶ್ಯ

೭

[ನಾರದ ಮಹರ್ಷಿಗಳು ತಂಬೂರಿಯನ್ನು ಮೀಟುತ್ತ ನಗರ ಪ್ರವೇಶ ಮಾಡಿದರು. ಹೃದಯ-ಮಸ್ತಿಷ್ಕಗಳು ಭಕ್ತಿಭಾವನೆಯ ಆಧಿಪತ್ಯಕ್ಕೊಳ್ಳ ಪಟ್ಟಿದ್ದರೂ ಅವರು ಸರಿದಾರಿ ಹಿಡಿದುದು ಸಹ ವಿಶೇಷವೇ, ನಿರ್ನಿಮೇಶ ನಯನಗಳ ಉಜ್ವಲ ಮಿಂಚು, ಹರಿಧ್ಯಾನಯುಕ್ತ ಕಂಠಸ್ವನ, ತಾಳ ತಂಬೂರಿಗಳ ಸ್ವರವಿನ್ಯಾಸ ಇವು ಯಾರಿಗಾದರೂ ಅವರನ್ನು 'ನಾರದ ಮಹರ್ಷಿ' ಎಂಬುದಾಗಿ ತಕ್ಷಣವೇ ಪರಿಚಯಿಸುವಷ್ಟು ಸುಪರಿಚಿತ ಮುಖಮೈಗಳಲ್ಲಿ ಹೊಮ್ಮಿ ಸೂಸುವ ಸ್ವೇದಬಿಂದುಗಳು, ಅಭಿಶಸ್ತ ಹೆಜ್ಜೆಗಳ ವಿಚಿತ್ರಗರಿಮೆ ಅವಿಶ್ರಾಂತ ಪರ್ಯಟನಕ್ಕೆ ಸಾಕ್ಷೀಭೂತವಾಗಿದ್ದುವು. ಅವರು ಹರಿನಾಮಸ್ಮರಣೆ ಮಾಡುತ್ತ ಪುಷ್ಪಗುಲ್ಮವೀಥಿಯನ್ನು ದಾಟಿ ಅರಮನೆಯ ಮಹಾದ್ವಾರಕ್ಕೆ ಬಂದರು. ಅಲ್ಲಿ ಕಾವಲಿದ್ದ ಕಾವಲುಗಾರರು ಅವರ ವೇಷಭೂಷಣಗಳನ್ನು ನೋಡುತ್ತಲೂ ಭಯ ಭಕ್ತಿಗಳಿಂದ ಕರಗಳನ್ನು ಜೋಡಿಸಿದರು ಮೈಬಾಗಿ]

ಭೈರವ— (ಸಹ ಕಾವಲುಗಾರರನ್ನು ಕುರಿತು ಅತ್ಯಂತ ಮೆಲುದನಿಯಲ್ಲಿ) ಇವರನ್ನು ನೋಡಿದರೆ ನಾರದ ಮಹರ್ಷಿಗಳಂತೆ ಕಾಣಿಸುತ್ತಾರೆ ಅಲ್ಲವೇ ?

ಕಾಳಿಂಗ— (ಅಷ್ಟೇ ಪಿಸುದನಿಯಲ್ಲಿ) ಹೌದು...ಹೌದು ! ಅವರೇ ಎಂದು ತೋರುತ್ತೆ. ಈವರೆಗೆ ಇವರನ್ನು ನೋಡಲಿಲ್ಲ. ನಾನು.

ಭೈರವ— (ಸ್ವಗತ) ಆರೆಂಬುದನ್ನು ಖಚಿತ ಪಡಿಸಿಕೊಳ್ಳದೆ ಪ್ರಭುಗಳಿಗೆ ವರದಿ ಮಾಡುವುದೆಂತು ? (ಪ್ರಕಾಶ) ಮಹಾ

ಸ್ವಾಮಿನ್, ತಮ್ಮನ್ನು ನೋಡಿದರೆ ನಾರದ ಮಹರ್ಷಿಗಳೆಂಬುದು ವ್ಯಕ್ತವಾಗುತ್ತೆ. ಆದರೂ ಅದನ್ನು ಖಚಿತಪಡಿಸಿಕೊಳ್ಳದಿದ್ದಲ್ಲಿ ಸಣ್ಣ ತಪ್ಪಾಗುತ್ತದೆ. ದಯಮಾಡಿ ಕ್ಷಮಿಸಿರಿ.

ಕಾಳಿಂಗ— ತಾವು ಎಲ್ಲಿಂದ ಬರೋಣವಾಯಿತು ? ತಮ್ಮ ಸ್ವಸ್ಥಳ ವಾವುದು ಎಂಬುದನ್ನು ನಾವು ತಿಳಿಯಬಹುದೇ ?

ನಾರದ ಮಹರ್ಷಿ—ಓಹೋ...! ಏನಪ್ಪಾ, ಮೇಲಿಂದಮೇಲೆ ಪ್ರಶ್ನೆ. ನಾನು ಯಾರಿಗೆ ಉತ್ತರಿಸಲಿ ?

(ಭಕ್ತಿ ಸಮುಜ್ವಲ ಮುಖಬಿಂಬದಲ್ಲಿ ಎಳೆಯ ಮುಗುಳು ಅರಳಿತು)

ಭೈರವ— ತಮ್ಮ ಆಗಮನವನ್ನು ಪ್ರಭುಗಳಿಗೆ ವರದಿ ಮಾಡಬೇಕು. ಅದಕ್ಕಾಗಿ.. (ಮಾತು ಅಲ್ಲಿಗೇನೇ ತುಂಡುಗಡಿಯಿತು)

ಕಾಳಿಂಗ— ಹೌದು ಮಹರ್ಷಿಗಳೇ, ದಯಮಾಡಿ ತಮ್ಮ ಪರಿಚಯವನ್ನು ತಿಳಿಸಿಕೊಟ್ಟಲ್ಲಿ ನಾನು ಈಗಲೇ ಹೋಗಿ ಮಹಾಪ್ರಭುಗಳಿಗೆ ವರದಿ ಮಾಡುವೆ.

ನಾರದ ಮಹರ್ಷಿ—ನನ್ನನ್ನು ಎಲ್ಲರೂ 'ನಾರದ' ಎಂದು ಕರೆಯುತ್ತಾರೆ.

(ಒಡನೆ ಇಬ್ಬರೂ ಮೈಬಾಗಿ ಮತ್ತೆ ಅಡ್ಡ ಬೀಳುವರು)

ಭೈರವ— ನಮ್ಮ ಪೂರ್ವಾರ್ಜಿತ ಪುಣ್ಯಯೋಗದಿಂದ ತಮ್ಮ ದರ್ಶನವಾಯಿತು. ನಮ್ಮ ಅನುಚಿತವಾದ ಪ್ರಶ್ನೆಗಳಿಂದ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಿರಿ.

ಕಾಳಿಂಗ— ಮಹರ್ಷಿಗಳೇ, ತಮಗೆ ಬೇಸರವಾಗಿದ್ದರೆ ಮತ್ತೊಮ್ಮೆ ಶರಣೆನ್ನುವೆ. (ಕೈಮುಗಿಯುವನು)

ಭೈರವ— ನಾನು ಮಹಾಪ್ರಭುಗಳಿಗೆ ತಮ್ಮ ಆಗಮನ ವಾರ್ತೆಯನ್ನು ತಿಳಿಸಿ ಬರಲೇ ?

ನಾರದ ಮಹರ್ಷಿ—ಆಗಬಹುದು

ಕಾಳಿಂಗ— ತಾವು ದಯಮಾಡಿ ಇಲ್ಲಯೇ ಇರೋಣವಾಗಲಿ. ನಾನು ಕೆಲವೇ ಕ್ಷಣ ಹಿಂದಿರುಗಿ ಬರುವೆ.

ನಾರದ ಮಹರ್ಷಿ— ಆಗಲಿ, ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.
(ಅದೇ ಕೂಡಲೇ ಕಾಳಿಂಗ ಅಂತಃಪುರಕ್ಕೆ ಹೋಗಿ ಉತ್ತಾನಪಾದರಾಯನ ಮುಂದೆ ಕೈಜೋಡಿಸಿ ಕೊಂಡು ಅತ್ಯಂತ ವಿನಮ್ರತೆಯಿಂದ ನಿಲ್ಲುವನು)

ಉತ್ತಾನಪಾದರಾಯ—ಏನಯ್ಯ, ಏನು ಬಂದೆ ?

ಕಾಳಿಂಗ— ನಾರದ ಮಹರ್ಷಿಗಳು ಹೆಬ್ಬಾಗಿಲಿಗೆ ಬಿಜಯಂಗೈದಿದ್ದಾರೆ.
(ಭಕ್ತಿಭಾವದಿಂದ ಬಿನ್ನವಿಸಿಕೊಳ್ಳುವನು)

ಉತ್ತಾನಪಾದರಾಯ—ಹೋಗು, ಈಗಲೇ ಅವರನ್ನು ಕರೆದುಕೊಂಡು ಬಾ.
(ಅವನು ಓಡುತ್ತಲೇ ಹೋಗಿ ಹೆಬ್ಬಾಗಿಲನ್ನು ತಲ್ಪುವನು)

ಕಾಳಿಂಗ— ಸ್ವಾಮಿ, ಮಹರ್ಷಿಗಳೇ! ತಮ್ಮನ್ನು ಅಂತಃಪುರಕ್ಕೆ ಕರೆತರಲು ಪ್ರಭುಗಳ ಅಪ್ಪಣೆಯಾಗಿದೆ. ತಾವು ಹೀಗೆ ದಯಮಾಡಿಸಬೇಕು .. ಹೀಗೆ....ಹೀಗೆ ಬನ್ನಿ.
(ನಾರದ ಮಹರ್ಷಿಯು ತಂಬೂರಿ ಮೀಟುತ್ತ ಅವನನ್ನು ಹಿಂಬಾಲಿಸುವರು)

ನಾರದ ಮಹರ್ಷಿ— ನಾರಾಯಣ ...ನಾರಾಯಣ.
(ಅವರನ್ನು ಬಾಗಿಲಲ್ಲಿ ಕಂಡಾಗಲೇ ಉತ್ತಾನಪಾದರಾಯನು ಆಸನದಿಂದ ದಿಗ್ಗನೆದ್ದು ಗೌರವಪೂರ್ವಕವಾಗಿ ಮಹರ್ಷಿಗಳನ್ನು ಬರಮಾಡಿಕೊಂಡು ಉಚಿತಾಸನದಲ್ಲಿ ಕೂಡಿಸಿ ಯಥೋಚಿತವಾಗಿ ಸತ್ಕಾರ ನಡೆಸುವನು)

ನಾರದ ಮಹರ್ಷಿ— ಮಹಾರಾಜಾ ! ನಿನ್ನ ಮುಖವೇಕೆ ಕಳೆಗುಂದಿದೆ ?

ಉತ್ತಾನಪಾದರಾಯ—ತಾವು ತ್ರಿಕಾಲಜ್ಞಾನಿಗಳು. ತಮಗೆ ತಿಳಿಯದ ವಿಷಯವಾದರೂ ಯಾವುದು ? ಆದರೂ ತಮ್ಮಲ್ಲಿ ನನ್ನ ಸಂಕಷ್ಟವನ್ನು ಬಿನ್ನವಿಸಿಕೊಳ್ಳುವುದು ನನ್ನ ಕರ್ತವ್ಯ.... (ಮುಂದೆ ಪ್ರಯತ್ನಿಸಿದರೂ ಮಾತು

ಗಳು ಹೊರಡದಾದುವು ಕಂಠಾರೋಧವಾಗಿ ಕಣ್ಣು ಗಳಲ್ಲಿ ಬೆಳ್ಳಿಯ ಗೆರೆಯಂತೆ ಸಣ್ಣಗೆ ನೀರಾಡಿತು)

ನಾರದ ಮಹರ್ಷಿ— ಅರಮನೆಯಲ್ಲಿ ಎಲ್ಲರೂ ಸೌಖ್ಯವಷ್ಟೆ? ರಾಜ್ಯವಲಯ ದಲ್ಲಿ ಮಳೆಬೆಳೆಗಳ ಸಮೃದ್ಧಿ ಯಥಾಪ್ರಕಾರ ನಡೆದಿದೆ ಯಷ್ಟೆ ?

ಉತ್ತಾನಪಾದರಾಯ—ತಮ್ಮ ಕೃಪೆಯಿಂದ ಮತ್ತು ದೈವಾನುಗ್ರಹದಿಂದ ಸಕಲ ಸೌಭಾಗ್ಯವೂ ಉಂಟು ಆದರೆ ನನ್ನ.... (ಅಷ್ಟಕ್ಕೆ? ಸುಮ್ಮನಾಗುವನು)

ನಾರದ ಮಹರ್ಷಿ— ನಿನ್ನ ಆಡಳಿತ ವ್ಯವಸ್ಥೆ ಸರಿಯಾಗಿದ್ದು ಈಗ ಶತ್ರು ಗಳ ಭಯವೇನೂ ಇಲ್ಲವಷ್ಟೆ ?

ಉತ್ತಾನಪಾದರಾಯ—ನನಗೆ ಅಂತಹ ಯಾವ ಕೊರತೆಯೂ ಇಲ್ಲ. ಆದರೂ....

ನಾರದ ಮಹರ್ಷಿ— ಮತ್ತೇಕೆ ಮಾನಸಿಕ ನೆಮ್ಮದಿ ಕಳೆದುಕೊಂಡಿದ್ದಿ ?

ಉತ್ತಾನಪಾದರಾಯ—ಸ್ವಾಮಿ, ನಾನು ಮಹಾಪಾಪಿ. ಅತ್ಯಂತ ಗುರುತರ ವಾದ ಪಾಪವನ್ನೆಸಗಿ ಕಣ್ಣೀರಿಡುತ್ತಿರುವೆನೀಗ, ನನ್ನ ಪಾಪಕ್ಕೆ ಪ್ರಾಯಶ್ಚಿತ್ತವೇನೋ ತಿಳಿಯದು.

ನಾರದ ಮಹರ್ಷಿ— ಈಗ ನಡೆದುದಾದರೂ ಏನು ? ಏನಾಯಿತು ಮಹಾ ರಾಜ ?
(ಆ ಪ್ರಶ್ನೆಗೆ ಉತ್ತರವಾಗಿ ನಡೆದ ವಿಚಾರವನ್ನೆಲ್ಲ ವಿಶದವಾಗಿ ಅರಿಕೆ ಮಾಡಿಕೊಂಡ ಮಹಾರಾಜ. ದುಃಖದಿಂದ ಕಂಬನಿಯು ಧಾರೆಧಾರೆಯಾಗಿಳಿಯು ವುದು)

ನಾರದ ಮಹರ್ಷಿ— ಮಹಾರಾಜ, ಸಮಾಧಾನ ಹೊಂದು. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು ?

ಉತ್ತಾನಪಾದರಾಯ—ಮಹರ್ಷಿಗಳೇ, ಧ್ರುವಕುಮಾರನು ಕಾಡಿಗೆ ಹೊರಟು ಹೋದ ಸುದ್ದಿಯು ತಿಳಿದ ತಕ್ಷಣವೇ ನನ್ನ ಭಟರ ನ್ನೆಲ್ಲಾ ಹುಡುಕಿತರಲು ನಾನು ಕಳುಹಿಸಿದೆ. ಆದರೆ,

ಈವರೆಗೆ ಎಲ್ಲಿಯೂ ಅವನ ಸುಳಿವು ಸಿಗಲಿಲ್ಲ. ಏನಾಯಿತು ಎಲ್ಲಿ ಹೋದ ಎಂಬುದು ತಿಳಿಯದೆ ಬಹಳ ದುಃಖವಾಗಿದೆ. ಭಟರು ಈಗಲೂ ಹುಡುಕು ತಿದ್ದಾರೆ. ಬ್ರಹ್ಮಜ್ಞಾನಿಗಳಾದ ತಾವು ಅವನಿರುವನ್ನು. ದಯವಿಾಡಿ ತಿಳಿಸಿ ಉಪಕಾರ ಮಾಡಬೇಕು.

(ಅತ್ಯಂತ ಆರ್ತ ಹೃದಯವಾಗಿ ಅಂಗಲಾಚುವನು)

ರದ ಮಹರ್ಷಿ— ದೊರೆಯೆ, ಯೋಚಿಸಬೇಡ. ನಾನು ಅವನನ್ನು ನೋಡಿ ಬಂದಿರುವೆ. ಅವನು ಉಗ್ರ ತಪಸ್ಸು ಮಾಡಿ ಶ್ರೀಮನ್ನಾರಾಯಣನ ಅನುಗ್ರಹ ಪಡೆದುಕೊಂಡು ಹಿಂತಿರುಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ತ್ತಾನಪಾದರಾಯ—(ಸಂತುಷ್ಟನಾಗಿ) ಹೌದೇ ? ಸುನೀತಿದೇವಿಯು ಅಷ್ಟು ಭಾಗ್ಯವಂತಳೇ ?

ರದ ಮಹರ್ಷಿ— ಹೌದು ಮಹಾರಾಜ. ಖಂಡಿತವಾಗಿಯೂ ಆಕೆ ಭಾಗ್ಯವಂತೆ.

ತ್ತಾನಪಾದರಾಯ—ಮಹರ್ಷಿಗಳೇ, ತಮ್ಮನ್ನು ಕೈಮುಗಿದು ಬೇಡಿಕೊಳ್ಳುವೆ, ತಮ್ಮ ಆಶೀರ್ವಾದ ನಮ್ಮ ಕುಮಾರನ ಮೇಲಿರಲಿ.

ರದ ಮಹರ್ಷಿ— ಅಷ್ಟೊಂದು ಕಾತರತೆ ಬೇಡ; ದೈವಾನುಗ್ರಹವೇ ಅವನ ಮೇಲಿದೆ.

ತ್ತಾನಪಾದರಾಯ—ಭಗವಂತನು ಕರುಣಿಸಿ ಅವನನ್ನು ಕಾಪಾಡಿದರೆಸಾಕು.

ರದ ಮಹರ್ಷಿ— ಇನ್ನು ಚಿಂತನೆಯನ್ನು ಬಿಡು ಎಲ್ಲವೂ ಮಂಗಳ ಕರವಾಗುವುದು.

ತ್ತಾನಪಾದರಾಯ—ನಾನು ಅತ್ಯಂತ ಕೃತಜ್ಞನಿರುವೆ.

ರದ ಮಹರ್ಷಿ— ನೀನು ಸುನೀತಿಯಂತಹ ಮಂಗಳಾಂಗಿಯ ಮನ ವನ್ನು ನೋಯಿಸಿ ತುಚ್ಛಕಾರ್ಯ ಮಾಡಿದ್ದಿ. ಅವಳು ಮಹಾಸಾಧ್ವಿ ಎಂಬುದನ್ನು ಅರಿತಿದ್ದ ನೀನು ರಾಜೋಚಿತವಾದ ಮಾನ ಮರ್ಯಾದೆಗಳಿಂದ

ಅವಳನ್ನು ವಂಚಿಸಿದ್ದಿ. ಇದು ಮಹೀಪಾಲನಾದ ನಿನಗೆ ತರವೇ ? ಕಾಮಾಂಧತೆ ಮನುಷ್ಯತ್ವವನ್ನು ಯಾವ ಸ್ಥಿತಿಗೆ ಇಳಿಸುತ್ತದೆ ಎಂಬುದನ್ನು ಈಗ ಲಾದರೂ ಅರಿತುಕೊಂಡೆಯಾ ? ನಿನ್ನ ಕರ್ತವ್ಯ ಜ್ಞಾನವು ಇನ್ನಾದರೂ ಸರಿಯಾದ ಫಲ ಬಿಟ್ಟೀತೇ ? ಮೇಲು–ಕೀಳುಗಳ ಭೇದಭಾವನೆಯನ್ನು ಬಿಟ್ಟು ಧರ್ಮದಿಂದ ರಾಜ್ಯಪರಿಪಾಲನೆ ಮಾಡಬಲ್ಲೆಯಾ?

ತಲೆದೂಗುತ್ತ ತುಟಿಗಳಲ್ಲಿ ಮುಗುಳುಚೆಲ್ಲುವನು)

ಉತ್ತಾನಪಾದರಾಯ—(ನಾರದ ಮಹರ್ಷಿಯ ಪಾದಗಳಿಗೆ ಅಡ್ಡ ಬಿದ್ದು ಕೈ ಜೋಡಿಸಿಕೊಂಡು ಲಜ್ಜೆ–ಸಂಕಟಗಳಿಂದ ತನ್ನಲ್ಲಿ ತಾನೇ ಅಡಗಿ ಹೋಗುವಷ್ಟು ಸಂಕುಚಿತವಾಗಿ) ನಾನು ಮಹಾ ಅಪರಾಧಿ ಮೋಹಾಂಧನಾಗಿ ಸ್ವಶಕ್ತಿ ಯನ್ನು ಕಳೆದುಕೊಂಡು ಇಷ್ಟೆಲ್ಲಕ್ಕೂ ಕಾರಣನಾಗಿ ದ್ದೇನೆ. ದಯವಿಟ್ಟು ಕ್ಷಮಿಸಿ ಬಿಡಿರಿ.

ನಾರದ ಮಹರ್ಷಿ—ಆದುದು ಆಗಿಹೋಯಿತು, ಮುಂದಿನದನ್ನು ಕ್ರಮ ಪಡಿಸಿಕೊಳ್ಳು. ಅದರಿಂದ ಎಲ್ಲವೂ ಶುಭವಾಗುವುದು. (ನಾರದ ಮಹರ್ಷಿಯು ಉತ್ತಾನಪಾದರಾಯನಿಂದ ಬೀಳ್ಕೊಂಡು ಸುನೀತಿದೇವಿಯ ಕುಟೀರದತ್ತ ಪಯ ಣಿಸುವರು. ತೀವ್ರ ದುಃಖಿತಳಾದ ಸುನೀತಿದೇವಿಯು ದೂರದಲ್ಲಿ ಮೊಳಗಿದ ತಂಬೂರಿಯ ನಾದ ಮತ್ತು ನಾರಾಯಣ ನಾಮೋಚ್ಚಾರವನ್ನು ಕೇಳಿಸಿಕೊಂಡು ದಾಸಿಯನ್ನು ಕರೆಯುವಳು)

ಸುನೀತಿದೇವಿ— ದಾಸೀಮಣಿ ಇಲ್ಲಿ ಬಾ.

ದಾಸಿ— ಇದೋ ಬಂದೆ.

(ದಾಸಿಯು ಆಕ್ಷಣವೇ ಎದುರಿಗೆ ಬಂದು ನಿಲ್ಲುವಳು)

ದಾಸಿ— ಏನಪ್ಪಣೆ ತಾಯಿ ?

ಸುನೀತಿದೇವಿ— ಅದೋ ನೋಡು, ಎಲ್ಲಿಯದೋ ತಂಬೂರಿಯ ನಾದ ಕೇಳಿಸುತ್ತಿದೆ.

ದಾಸಿ— (ಬಾಗಿಲ ಹೊರಗೆ ತಲೆಹಾಕಿ ನೋಡಿ) ಅರಮನೆಯ ಕಡೆಯಿಂದ ಯಾರೋ ಮಹರ್ಷಿಗಳು ಬರುತಿದ್ದಾರೆ ತಾಯಿ. ಅವರು ತಂಬೂರಿ ಹಿಡಿಯುತ್ತ ಹಾಡಿಕೊಳ್ಳು ತ್ತಿದ್ದಾರೆ.

ಸುನೀತಿದೇವಿ— ಅವರು ತಂಬೂರಿಧಾರಿಗಳೇ ? ಹಾಗಾದರೆ ನಾರದ ಮಹ ರ್ಷಿಗಳೇ ಇರಬೇಕು ! ಬಹುಶಃ ಭಗವಂತನೇ ಅವರನ್ನು ಈ ಸಮಯದಲ್ಲಿ ಇಲ್ಲಿಗೆ ಕಳುಹಿಸಿರಬಹುದು.

(ಪಕ್ಕನೆ ಎದ್ದು ತಲೆಯಮೇಲೆ ಸೆರಗನ್ನೆಳೆದುಕೊಂಡು ಕಂಬನಿಯ ಕಲೆಯನ್ನು ನಿವಾರಿಸಿಕೊಂಡು ತಲೆ ಬಾಗಿ ಲಿಗೆ ಬರುವಳು)

ನಾರದ ಮಹರ್ಷಿ—ನಾರಾಯಣ, ನಾರಾಯಣ.

ಸುನೀತಿದೇವಿ— ನಮಸ್ಕಾರ ಮಹರ್ಷಿಗಳಿಗೆ.

(ಅವಳು ಭಕ್ತಿಯಿಂದ ನಮಸ್ಕರಿಸಿದಾಗ ದುಃಖಾಶ್ರು ಗಳು ತಟಪಟನೆ ಪಾದಗಳ ಮೇಲೆ ಉದುರಿದುವು)

ನಾರದ ಮಹರ್ಷಿ—ಮಹಾರಾಣಿ, ನಿನಗೆ ಮಂಗಳವಾಗಲಿ.

ಸುನೀತಿದೇವಿ— ತಮ್ಮ ಅನುಗ್ರಹದಿಂದ ನನ್ನ ಸಂಕಟ ಪರಿಹಾರವಾಗಲಿ.

ನಾರದ ಮಹರ್ಷಿ—ಚಿಂತೆ ಮಾಡಬಾರದು ದೇವಿ.

ಸುನೀತಿದೇವಿ— ಒಳಗಡೆ ದಯಮಾಡಿಸಿರಿ ಮಹರ್ಷಿಗಳೇ.

ನಾರದ ಮಹರ್ಷಿ—ಆಗಬಹುದು. ಮಗಳೇ.

(ನಾರದ ಮಹರ್ಷಿಯು ಒಳಬಂದು ದರ್ಭೆಯ ಹಾಸಿನ ಮೇಲೆ ಕೂಡುವರು. ಸುನೀತಿದೇವಿಯು ಹರಿವಾಣದಲ್ಲಿ ಹಣ್ಣು ಹಂಪಲುಗಳನ್ನು ಮುಂದಿಟ್ಟು ನಸುದೂರದಲ್ಲಿ ಮಂಡಿಸುವಳು. ದಾಸಿಯೂ ಸಹ ಅವಳ ಸಮೀಪದಲ್ಲಿ ಕೂಡುವಳು)

ನಾರದ ಮಹರ್ಷಿ—ನಿನ್ನ ಮನೋಗತ ಚಿಂತೆಯೇನೆಂಬುದನ್ನು ನಾನುಬಲ್ಲೆ. ಅದಕ್ಕಾಗಿ ನೀನೇನೂ ಯೋಚಿಸಬೇಡ. ನಿನಗೆ ದೈವಕೃಪೆ ಇದೆ, ಮಗಳೇ !

ಸುನೀತಿದೇವಿ— ಮಹರ್ಷಿಗಳೇ, ತಾವು ಮಹಾಜ್ಞಾನಿಗಳು. ತಮಗೆ ತಿಳಿಯದ ವಿಷಯವಾವುದೂ ಇಲ್ಲ. ತಾವು ಯಾವ ಮಾರ್ಗವಾಗಿ ಪಯಣಿಸಿದಿರಿ ? ದಾರಿಯಲ್ಲಿ ನನ್ನ ಕುಮಾರನನ್ನು ನೀವು ಕಂಡಿರಲೇ ಬೇಕು. ಅವನು ಕ್ಷೇಮವೇ? ಅವನ ವಿಚಾರವನ್ನು ದಯವಿಟ್ಟು ತಿಳಿಸಿರಿ. ಅದಕ್ಕಾಗಿ ನನ್ನ ಜೀವ ಕಾತರಿಸುತ್ತಿದೆ. ನಿಮ್ಮನ್ನು ಸೆರೆಗೊಡ್ಡಿ ಬೇಡಿಕೊಳ್ಳುವೆ.
(ಕಣ್ಣುಗಳಂಚಿನಲ್ಲಿ ಅಶ್ರುಬಿಂದುಗಳು ಫಳಫಳ ಮಿಂಚುವುವು.

ನಾರದ ಮಹರ್ಷಿ—(ನಲ್ಮೆಯಿಂದ) ಮಗಳೇ, ಅವನು ಸುಖವಾಗಿದ್ದಾನೆ. ಇಷ್ಟರಲ್ಲೇ ದೈವಾನುಗ್ರಹ ಸಹ ದೊರೆಯುತ್ತದೆ. (ಮಂದಸ್ಮಿತರಾಗಿ ಶಾಂತಭಾವದಿಂದ ನುಡಿಯುವರು)

ಸುನೀತಿದೇವಿ— ಅಷ್ಟಾದರೆ ಸಾಕು. ಅವನಿಲ್ಲದೆ ನನಗೆ ಒಂದೊಂದು ಗಳಿಗೆಯೂ ಯುಗವಾಗಿ ತೋರುತ್ತಿದೆ. ಹೆತ್ತೊಡಲ ಸಂಕಟವನ್ನು ನೀವು ಬಲ್ಲಿರಿ. ನಾನದನ್ನು ಹೇಳಿ ಪೂರೈಸಲಾರೆ. (ನಿಟ್ಟುಸಿರು ಬಿಡುವಳು)

ನಾರದ ಮಹರ್ಷಿ—ಬೆಳಕು ಮೂಡಬೇಕಾದರೆ ಇರುಳು ಕವಿಯಲೇಬೇಕು. ಅದನ್ನಷ್ಟು ಅರ್ಥಮಾಡಿಕೊಂಡರೆ ಯಾರಿಗೂ ವ್ಯಥೆ ಇರುವುದಿಲ್ಲ.

ಸುನೀತಿದೇವಿ— ಅದು ಗೊತ್ತು. ಆದರೂ ಒಡಲ ಸಂಕಟಕ್ಕೆ ಮೇರೆಯೇ ಇಲ್ಲ. ಇನ್ನೂ ಹಸುಳೆಯಾದ ಧ್ರುವಕುಮಾರನಿಗೆ ವನ್ಯ ಮೃಗಗಳಿಂದ ರಕ್ಷಣೆಯೆಂತು? ಹಸಿವು ಬಾಯಾರಿಕೆಗಳನ್ನು ತಡೆಯಬಲ್ಲನೇ ? ಅವನಿಂದ ಕಠಿಣ ತಪಸ್ಸನ್ನು ಆಚರಿಸಲು ಸಾಧ್ಯವೇ ಎಂಬಂತ ಆಲೋಚನೆಗಳೆಲ್ಲಾ

ಮನವನ್ನು ಕುಕ್ಕುತ್ತವೆ. ಸ್ತ್ರೀ ಸಹಜವಾದ ದೌರ್ಬಲ್ಯ ನನ್ನಲ್ಲೂ ಇದೆ.
(ಕಂಠಸ್ವರ ಸಂಕಟದಿಂದ ಕೂಡಿತು.

ನಾರದ ಮಹರ್ಷಿ—(ಮೆಲ್ಲನೆ ತಲೆದೂಗಿ ಧ್ರುವಕುಮಾರನು ಆಚಂದ್ರಾರ್ಕವಾದ ಕೀರ್ತಿಗೆ ಪಾತ್ರನಾಗುವ ಮಹಾ ಪುಣ್ಯವಂತ. ಅವನನ್ನು ಹೆತ್ತ ನೀನು ಭಾಗ್ಯಶಾಲಿನಿ. ಮುಂದೆ ಅವನು ರಾಜ್ಯಸೂತ್ರಗಳನ್ನು ಕೈಕೊಂಡು ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುವುದನ್ನು ನೀನು ಕಣ್ತುಂಬ ನೋಡುವೆ; ಯೋಚಿಸಬೇಡ ಮಗಳೇ.
(ಆ ಮಾತು ಕೇಳಿ ಹೃದಯ ಹಿಡಿಸಲಾರದಷ್ಟು ಸಂತಸ ಮೂಡಿತು ಸುನೀತಿದೇವಿಗೆ)

ಸುನೀತಿದೇವಿ— (ಸ್ವಗತ) ಆ ಸುದಿನಗಳು ಬೇಗನೆ ಬಂದರೆ ಸಾಕು. ಇದುವರೆಗೆ ಅನುಭವಿಸಿದ ನೋವನ್ನೆಲ್ಲಾ ಒಂದೇಬಾರಿಗೆ ಜೀರ್ಣಿಸಿಕೊಳ್ಳುವೆ. (ಪ್ರಕಾಶ) ತಮ್ಮ ಅನುಗ್ರಹಕ್ಕೆ ನಾನು ಅತ್ಯಂತ ಕೃತಜ್ಞಳು.

ನಾರದ ಮಹರ್ಷಿ—ನಾನು ಧ್ರುವಕುಮಾರನಿಗೆ ಅಗತ್ಯವಾದ ಮಂತ್ರೋಪದೇಶ ಮಾಡಿ ತಪಸ್ಸಿನ ಕ್ರಮಾನುಕ್ರಮಗಳನ್ನೂ ತಿಳಿಸಿರುವೆ. ಅವನ ಭಕ್ತಿಜ್ಞಾನವು ಮತ್ತು ದೃಢಸಂಕಲ್ಪವು ಅಸಾಮಾನ್ಯವಾದುದು. ಏನೇ ಬಂದರೂ, ಕೈಕೊಂಡ ಕಾರ್ಯಸಾಧನೆಯನ್ನು ಅವನೆಂದೂ ಬಿಟ್ಟುಕೊಡಲಾರ.

ಸುನೀತಿದೇವಿ— ಅದೆಲ್ಲವೂ ತಮ್ಮ ಆಶೀರ್ವಾದದ ಫಲ ಮಹರ್ಷಿಗಳೇ! (ಸ್ವಲ್ಪ ಸಮಯ ಸುಮ್ಮನಿದ್ದು) ಅವನ ಕ್ಷೇಮಾಭ್ಯುದಯಕ್ಕಾಗಿ ನಾನು ಒಡಲ ಸಂಕಟವನ್ನು ಸಹಿಸಿಕೊಂಡಿರುವೆ. ಇಲ್ಲದಿದ್ದಲ್ಲಿ ನನಗೆ ಈ ಬದುಕಾದರೂ ಏಕೆ ಬೇಕು ?

ನಾರದ ಮಹರ್ಷಿ—ಮಗಳೇ, ಆ ಮಾತು ಹೇಳಬಾರದು. ಮಾನವ ಜನ್ಮ ಅಮೂಲ್ಯವಾದುದು. ಅದನ್ನು ಹೊಂದಿಯೂ ಉದ್ಧರಿಸ

ದಿದ್ದಲ್ಲಿ ತಪ್ಪು ನಮ್ಮದೇ ಆಗವುದು. ಆದ್ದರಿಂದ ಹದವರಿತು ಧ್ಯೇಯೋದ್ದೇಶಗಳನ್ನು ಸಾಧಿಸಿಕೊಳ್ಳುವುದು ಪರಮಲೇಸು.

ಸುನೀತಿದೇವಿ— ಭಗವಂತನ ಪದತಲದಲ್ಲಿ ಎಲ್ಲವನ್ನೂ ಸಮರ್ಪಿಸಿಬಿಡುವೆ. ಅದರ ಸಂಯೋಜಕನು ಅವನೇ.

ನಾರದ ಮಹರ್ಷಿ—ಅದು ಸಾಧುವಾದುದು.

ಸುನೀತಿದೇವಿ— ತಮ್ಮ ಉಪದೇಶದಿಂದ ನಾನು ಸಂತುಷ್ಟಳಾದೆ ಮಹರ್ಷಿಗಳೇ ! ನಿಮಗೆ ವಂದನೆಗಳು.

ನಾರದ ಮಹರ್ಷಿ—ನಿನಗೆ ಮಂಗಳವಾಗಲಿ ಮಗಳೇ

(ನಾರದ ಮಹರ್ಷಿಯು ಸುನೀತಿದೇವಿಯಿಂದ ಬೀಳ್ಕೊಂಡು ಅಲ್ಲಿಂದ ಹೊರಡುವರು)

ದಾಸಿ— ತಾಯಿ, ನೀವೊಂದು ವಿಷಯ ಮರತೇ ಬಿಟ್ಟಿರಿ.

ಸುನೀತಿದೇವಿ— ಏನದು ?

ದಾಸಿ— ತಾಯಿ, ಅವರೊಂದಿಗೆ ನೀವಿಷ್ಟೊತ್ತು ಮಾತಾಡಿದರೂ ಧ್ರುವಕುಮಾರನ ಆಗಮನ ಯಾವಾಗೆಂಬುದು ಕೇಳಿಕೊಳ್ಳಲೇ ಇಲ್ಲವಲ್ಲ? ಬಹುಶಃ ನೀವು ಮರೆತು ಬಿಟ್ಟಿರಾ?

ಸುನೀತಿದೇವಿ— ಓಹೋ! ಕೇಳಬಹುದಾಗಿತ್ತು...ಆಗ ನೆನಪೇ ಆಗಲಿಲ್ಲ. ನಿನಾದರೂ ನೆನಪಿಸಿದ್ದರೆ ಒಳ್ಳೆಯದಿತ್ತು.

ದಾಸಿ— ನೀವು ಕೇಳಬಹುದೆಂದು ಭಾವಿಸಿದ್ದೆ. ಅವರಿನ್ನೂ ಬಹಳ ದೂರ ಹೋಗಿರಲಾರರು.(ತಲೆಬಾಗಿಲಲ್ಲಿ ಹಣಿಕಿ ನೋಡಿ) ಅದೋ ಇಲ್ಲೇ ಹೋಗುತಿದ್ದಾರೆ.

ಸುನೀತಿದೇವಿ— ಆದರೂ, ಈಗ ಅವರ ಹಿಂದೆ ಹೋಗುವುದು ಸರಿಯಲ್ಲ. (ಆ ಕ್ಷಣ ಅವರ ಕಡೆ ದೃಷ್ಟಿ ಹೊರಳಿಸುವಳು. ಅವರು ಹರಿನಾಮಸ್ಮರಣೆ ಮಾಡುತ್ತ ಮುನ್ನಡೆಯುತ್ತಿದ್ದುದು ಕಣ್ಗೋಚರಿಸಿತು)

ಸುನೀತಿದೇವಿ— ನನ್ನಲ್ಲೀಗ ಸುಖ–ದುಃಖ ಎರಡೂ ತುಂಬಿ ಹೋಗಿವೆ.

ಹೇಗೆ ಭರಿಸುವುದೋ ಎಂಬಷ್ಟು ತೀವ್ರ ಒತ್ತಡ. ಈ ಪುಟ್ಟ ಹೃದಯ ಸಾಲದೇ ಸಾಲದು.

ದಾಸಿ— ಕೆಲವು ದಿನಗಳಷ್ಟೆ.

ಸುನೀತಿದೇವಿ— ರಾಜಭಟರು ಹುಡುಕಿ ಹುಡುಕಿ ಧ್ರುವಕುಮಾರ ಸಿಗಲಿಲ್ಲವೆಂದು ಬಂದಾಗ ನನಗೆಷ್ಟು ದುಃಖವಾಯಿತೋ, ದೇವರೇ ಬಲ್ಲ.

ದಾಸಿ— ಈಗಲೂ ಹುಡುಕುತ್ತಲೇ ಇದ್ದಾರೆ. ಮಗು ಯಾರ ಕಣ್ಣಿಗೂ ಕಾಣಿಸದಿರುವುದೇ ವಿಶೇಷ. ಮಹರ್ಷಿಗಳು ಹುಡುಕದಿದ್ದರೂ ಕಂಡು ಬಂದಿದ್ದಾರೆ.

ಸುನೀತಿದೇವಿ— ಮಹರ್ಷಿಗಳೆಂದರೆ ಸಾಮಾನ್ಯವೇ ? ಅವರು ಎಲ್ಲಾ ವಿದ್ಯಮಾನವನ್ನೂ ತಮ್ಮ ಜ್ಞಾನದೃಷ್ಟಿಯಿಂದಲೇ ಕಂಡಿರುತ್ತಾರೆ. ಧ್ರುವಕುಮಾರನನ್ನು ನೋಡಿದವರು ಹಾಗೇ ಪಯಣ ಮುಂದುವರಿಸಬಹುದಾಗಿತ್ತು. ಆದರೂ ಇಲ್ಲಿಗೆ ಬಂದು ನಮಗೆ ಹೇಳಿಹೋಗುವಷ್ಟು ದಯೆದೋರಿದ್ದಾರೆ.

ದಾಸಿ— ಎಂತಹ ಅಮೋಘವಾದ ಗುಣ ಅವರದು ?

ಸುನೀತಿದೇವಿ— ಅದರಿಂದಲೇ ಅವರು ಮಹರ್ಷಿಗಳಾದುದು.

ದಾಸಿ— ಅವರ ಅನುಗ್ರಹ ಬೇಗನೇ ಕೈಗೂಡಿ ಬಂದರೆ ಸಾಕು. ಧ್ರುವಕುಮಾರನಿಲ್ಲದೆ ಮನೆ-ಮನಸ್ಸು ಎರಡೂ ಬಣಬಣ ಎನ್ನುತಿವೆ.

ಸುನೀತಿದೇವಿ— ಅದಕ್ಕೂ ಒಂದು ಗಳಿಗೆ ಕೂಡಿಬರಬೇಕಲ್ಲ ?

(ತಲೆ ಬಾಗಿಲ ಬಳಿ ನಿಂತ ಸುನೀತಿದೇವಿಯು ದೂರದಲ್ಲಿ ನಾರದ ಮಹರ್ಷಿಗಳು ಕಣ್ಮರೆಯಾಗುತಿದ್ದುದನ್ನು ನೋಡಿ ಕಣ್ಣುಗಳಲ್ಲಿ ಆನಂದ ಭಾಷ್ಪಗಳನ್ನು ಸುರಿಸುವಳು)

ದೃಶ್ಯ

೭

[ಶ್ರೀ ನಾರದ ಮಹರ್ಷಿಗಳಿಂದ ನಲ್ಮೆಯ ಆಶೀರ್ವಾದದೊಡನೆ ಬೀಳ್ಕೊಂಡ ಧ್ರುವಕುಮಾರನು ಆನಂದವೇ ಮೈವೆತ್ತು ಬಂದಂತೆ ಆನಂದಮಯ ನಾಗಿ ಕಾಳಿಂದೀ ನದಿಗಭಿಮುಖನಾಗಿ ನಡೆಯತೊಡಗಿದ. ಮೈಯ್ಯಲ್ಲಿ ನೂರ್ಮ್ಮಡಿಯ ಹುಮ್ಮಸ್ಸು; ಮನದಲ್ಲಿ ಅಭಿಷಿಕ್ತ ಶ್ರೀಮನ್ನಾರಾಯಣ; ಶ್ರದ್ಧಾ ಭಕ್ತಿಗಳಿಂದ ಪ್ರವ್ಯಾಪ್ತವಾದ ಹೃದ್ಗಡಲು. ಅವನಿಗೆ ಹಾದಿ ನಡೆದ ಶ್ರಮವಾಗಲೀ, ಗಮ್ಯಸ್ಥಾನಕ್ಕೆ ಹಾದಿ ಹುಡುಕುವ ತೊಂದರೆಯಾಗಲೀ ತೋರಲೇ ಇಲ್ಲ. ಹೀಗೆಯೇ ಬಾ ಬಾರೆಂದು ಕೈಬೀಸಿ ಕರೆಯುತ್ತದೆ ನದಿಯ ಮೊರೆತ. ಹಚ್ಚ ಹಸುರಾಂತ ವನಶ್ರೀ ಹರಸುವುದು ತಣ್ಣೆಳಲು ಸುಖಾಶ್ರಯ ನೀಡಿ. ನದಿಯ ತೀರಕ್ಕೆ ಕಾಡುಪ್ರಾಣಿಗಳು ಹಿಂಡುಹಿಂಡಾಗಿ ನಡೆದು ಸವೆಸಿದ ಸಣ್ಣ ಕಾಲು ಹಾದಿಯಲ್ಲಿ ನಿರಾತಂಕವಾಗಿ ಸಾಗಿತು ಮುಂದಿನ ಪಯಣ. ಛಂದೋಬದ್ಧವಾದಂತಿದ್ದ ಅವನ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅದೆಂತಹ ಗುರುತ್ವವಿತ್ತೋ, ಅವು ಒಮ್ಮೆಯಾದರೂ ವಿಶ್ರಮಿಸಲಿಲ್ಲ; ಕಾಳಿಂದೀ ನದಿ ತಟಾಕವನ್ನು ಮುಟ್ಟಿ ಸಂತೃಪ್ತಿ ಪಡೆಯುವವರೆಗೆ.

ಆನಂದವಿಸ್ತೃತ ನಯನಗಳಿಂದ ನಿಟ್ಟಿಸಿ ನೋಡೆ, ಎದುರಿಗೆ ಅದೆಂತಹ ದರ್ಶನೀಯ ದೃಶ್ಯ! ಭೋರ್ಗರೆದು ಮುನ್ನುಗ್ಗುವ ಅಗಾಧವಾದ ಸುನೀಲ ಜಲರಾಶಿ. ಬೊಗಸೆಯೆತ್ತಿ ಹೀರಿಬಿಡಲೇ ಎಂಬಷ್ಟು ಸ್ಫಟಿಕ ನಿರ್ಮಲ. ಧ್ರುವ ಕುಮಾರ ಮಂತ್ರಮುಗ್ಧನಂತೆ ನಿಶ್ಚಲಭಂಗಿಯಲ್ಲಿ ಕಣ್ದಣಿಯೆ ನೋಡಿದ ಅಂತಹ ಸುರಮ್ಯ ಚಿತ್ತಾರವನ್ನು ಹಿಂದೆಂದೂ ಅವನು ಕಂಡೇ ಇರಲಿಲ್ಲ. ಆನಂದವೇ ಅದರ ಉದ್ಗಮ; ಆನಂದವೇ ಅದರ ಅಭಿಸಾರ; ಆನಂದವೇ ಅದರ ಲಕ್ಷ್ಯ.

ಧ್ರುವಕುಮಾರ ಸರ್ವಾಂಗ ಪುಳಕಿತನಾದ. ಜಗತ್ತು ಅಮೋಘವಾಗಿ ಸುಖಸಂತೋಷ ಪ್ರಧಾನವಾಗಿ ತೋರಿಬಂತು. ತದೇಕ ಶ್ರದ್ಧೆಯಲ್ಲಿ, ತದೇಕ ನಿಷ್ಠೆಯಲ್ಲಿ ಕೆಲವು ಗಳಿಗೆಗಳು ಉರುಳಿ ಹೋದುವು. ತರುವಾಯ ಮೈತಿಳಿದ ಧ್ರುವಕುಮಾರ ನದೀಪಾತ್ರಕ್ಕಿಳಿದು ಮುಖಮಜ್ಜನ ಮಾಡಿ ಬೊಗಸೆಯೆತ್ತಿ ಜಲಪಾನ ಮಾಡಿದನಂತರ ನಿರ್ಭೀತಿಯಿಂದ ಮುಳುಗುಹಾಕಿ ಈಜಾಡಿ ಸ್ವಚ್ಛ ಸ್ನಾನ ಮುಗಿಸಿ ಮೇಲೆ ಬಂದ. ಮೈ ಹೂವಿನಷ್ಟು ಹಗುರವಾಗಿತ್ತು. ನಸು ದೂರದ ಕಲ್ಲುಬಂಡೆಯನ್ನೇರಿ ಸುತ್ತುಮುತ್ತಿನ ಪರಿಸರದ ಮೇಲೆ ಪಕ್ಷಿನೋಟ ಚೆಲ್ಲಿದ.

ತೀರದಾಚೆ ಸಾಲುಸಾಲಾಗಿ ಹಬ್ಬಿದ ಬೆಟ್ಟಗಳ ಮೇಗಡೆ ದಿಶೆಯಿಂದ ದಿಶೆಗೆ ಮೈಚಾಚಿದ ಅದ್ಭುತ ಪಯೋನಿಧಿಯು ತೆರೆಮರೆಯಲ್ಲಿ ವಿಶ್ರಮಿಸಿದ್ದ ಸಂಧ್ಯಾಸೂರ್ಯನ ಕೆಂಗಿರಣಗಳು ಅಲ್ಲಲ್ಲಿ ತೆರೆಯನ್ನು ಹರಿದು, ಕೋರೈಸುವ ಕೆಂಗೋಲುಗಳಂತೆ ತೂರಿ ಬರುತ್ತಿದ್ದುವು. ಬಾಲಕ–ಧ್ರುವಕುಮಾರ ಆ ಅಮೂಲ್ಯವಾದ ತೇಜೋರಾಶಿಯಲ್ಲಿ ತೀವ್ರ ಮಗ್ನನಾಗಿ 'ಆ ಪುಣ್ಯಪಯೋನಿಧಿಯೇ ನಾನಾಗಿದ್ದರೆ ಎಷ್ಟು ಸುಲಭವಾಗಿ ದೇವಲೋಕವನ್ನು ಸೇರಿಕೊಳ್ಳಬಹುದಾಗಿತ್ತು' ಎಂಬ ಭಾವನೆಯಲ್ಲಿ ವಿಹರಿಸಿದ.

ಹೊತ್ತು ಸರಾಗವಾಗಿ ಉರುಳಿತು. ಇನ್ನೇನು ಪಶ್ಚಿಮ ಘಟ್ಟವನ್ನು ಮುಟ್ಟುವುದರಲ್ಲಿದ್ದಾನೆ ಶಾಂತ ಸೂರ್ಯ!

ಧ್ರುವಕುಮಾರ ಅಲ್ಲಿಂದೆದ್ದು ಫಲವೃಕ್ಷಗಳಡಿಯಲ್ಲಿ ಓಡಾಡಿ,ಉದುರಿದ ಹಣ್ಣುಕಾಯಿಗಳನ್ನು ಹೆಕ್ಕಿ ತಿಂದು ಕ್ಷುಧ್ಬಾಧೆಯನ್ನು ಪರಿಹರಿಸಿಕೊಂಡ.ಹಾಗೆ ಓಡಾಡಿದುದರಿಂದ ಸ್ಥಳಪರಿಚಯವೂ ಆಯಿತು.ಅದು ಅಂತಹ ದಟ್ಟಡವಿಯೂ ಅಲ್ಲ; ಕುರುಚಲು ಗಿಡಿಗಳ ಮುಳ್ಳುದಾಣವೂ ಅಲ್ಲ. ಹಿಂದೆ ಯಾರಾದರೂ ಅಲ್ಲಿ ನೆಲೆಸಿದ್ದರೋ ಅಥವಾ ಇನ್ಯಾವ ಮಹರ್ಷಿ ಅಲ್ಲಿ ತಪಂಗೈದಿದ್ದರೋ ಎಂಬ ಆಲೋಚನೆಯನ್ನು ಮೂಡಿಸುವಂತಹ ಮೋಹಕದಾಣ. ಎಲ್ಲಾ ವಿಧದಿಂದಲೂ ಅದು ತಪಸ್ಸಿಗೆ ಸರಿಯಾದ ಸ್ಥಳ ಎಂಬ ಭಾವನೆಯನ್ನು ದೃಢೀಕರಿಸುವ ರಾಮಣೀಯಕ ವನಧಾತ್ರೀ.

ಹೆಮ್ಮರವೊಂದರ ತಲಪ್ರದೇಶದಲ್ಲಿ ಹಾಸುಗಲ್ಲು ಹರಡಿತ್ತು. ಅದರ ಮೇಲೆ ಅನುಕೂಲವಾದ ಇನ್ನೊಂದು ಪೀಠಗಲ್ಲು. ಪೂರ್ವದಿಗ್ದೇಶಕ್ಕೆ ಎದುರಾ

ಗಿದ್ದ ಅದರ ಮೇಲೆ ಕುಳಿತು ಸೌಂದರ್ಯ ಸಮೀಕ್ಷೆ ನಡೆಸುವುದೇ ಒಂದು ಆನಂದ. ಆದರೆ ಸ್ವಲ್ಪದರಲ್ಲಿಯೇ ಕಣ್ಣಿಗೆ ತೂಕಡಿಕೆ ಬಂತು. ಅವನು ಪೀಠಗಲ್ಲಿಂದ ಇಳಿದು ಹಾಸುಗಲ್ಲಿನ ಮೇಲೆ ಅಡ್ಡಾಗಿ ನಾರಾಯಣ ಮಂತ್ರದೊಡನೆ ಕಣ್ಮುಚ್ಚಿದ. ಸ್ವಲ್ಪಹೊತ್ತಿನೊಳಗಾಗಿ ಸೊಗಸಾದ ನಿದ್ದೆ ಕಣ್ತುಂಬಿಬಂತು. ಕನಸಿನ ಲೋಕದ ವೈಕುಂಠದಲ್ಲಿ, ಶ್ರೀಮನ್ನಾರಾಯಣನ ದಿವ್ಯ ಸನ್ನಿಧಿಯಲ್ಲಿ ಆನಂದದಿಂದ ಸೇವಾದೀಕ್ಷೆಕೈಕೊಂಡಿದ್ದಾನೆ ಧ್ರುವಕುಮಾರ. ಆ ಅತುಲನೀಯವಾದ ಆನಂದವನ್ನು ಭರಿಸಲು ಈ ಪುಟ್ಟಹೃದಯ ಸಾಲದಲ್ಲಾ, ಏನು ಮಾಡಲಿ, ಎಲ್ಲಿ ತುಂಬಿಕೊಳ್ಳಲಿ ಎಂಬ ಕೊರಗು ಒಂದುಕಡೆ; ಅತ್ಯಂತ ಸಂಭ್ರಮ-ಸಡಗರ ಇನ್ನೊಂದು ಕಡೆ. ಆ ಮಹತ್ತಮ ಹಾಗೂ ಬೃಹತ್ತಮ ಸೇವೆಯಲ್ಲಿ ಎಲ್ಲಿ ಕುಂದೆಸಗುವೆನೋ ಎಂಬ ಕಳವಳವೂ ಇಲ್ಲದಿಲ್ಲ. ಮಣಿಮಕುಟಧಾರಿಯಾದ ನಾರಾಯಣ ಎದುರಿಗೇ ಬಂದ. ಎಂತಹ ಹೊಳಪು ಅವನ ಮೈಯ್ಯಲ್ಲಿ ? ಸಾಕ್ಷಾತ್ ಸೂರ್ಯದೇವನೇ ನಡೆದು ಬರುತ್ತಿರುವಂತೆ ಭಾಸವಾಯಿತು ಧ್ರುವಕುಮಾರ ಅತ್ಯಂತ ವಿನಮ್ರತೆಯಿಂದ ಅಡ್ಡಬಿದ್ದು ಕೈಜೋಡಿಸಿದ. ಆದರೆ ಅವನನ್ನು ನೋಡಲು ಮೈಯೆಲ್ಲಾ ಕಣ್ಣಾದರೂ ಸಾಲದು. ಒಡನೆ ಕಣ್ಣುಗಳನ್ನು ಅಗಲವಾಗಿ ತೆರೆದು ನಿರಿನಿರಿ ನಿಟ್ಟಿಸಿ ನೋಡಿದ. ಮೂಡಣ ದಿಗ್ದೇಶದಲ್ಲಿ ಬಾಲಸೂರ್ಯ ಬಾನೇರುತಿದ್ದು ಹೊಂಗಿರಣಗಳು ಮೈಮನಗಳನ್ನು ಏಕತ್ರ ಮುತ್ತುತ್ತಿನೆ, ಶ್ರೀಮನ್ನಾರಾಯಣನ ಅಮೋಘವಾದ ವೈಖರಿಯಲ್ಲಿ.

ಧ್ರುವಕುಮಾರ ಎದ್ದು ಕಣ್ಣುಜ್ಜಿಕೊಂಡು ಪ್ರಾತರ್ವಿಧಿಗಳಲ್ಲಿ ನಿಮಗ್ನನಾದ. ಮನಸ್ಸು ಕನಸಿನ ಲೋಕದಲ್ಲಿ ವ್ಯವಹರಿಸುತಿತ್ತು. ಇನ್ನು ತನಗೂ ಸ್ವರ್ಗಕ್ಕೂ ಮೂರೇಗೇಣು ಎಂಬಷ್ಟು ಆನಂದ. ಆದರೆ ಅಂತರ್ವಿಕಾರವೇನು ಕಡಿಮೆಯಾದುದೇ ?

ಉತ್ತಮಕುಮಾರನ ಧ್ವನಿ— ಧ್ರುವಾ ಎಲ್ಲಿದ್ದಿ? ಬೇಗ ಬಾ, ಆಟ ಆಡೋಣ.
ಮೂರು ದಿನದಿಂದ ನೀನಿಲ್ಲದೆ ಬೇಸರವಾಗಿದೆ.
ಈವತ್ತಾದರೂ ಕೂಡಿ ಆಡೋಣ.

ಸುನೀತಿದೇವಿಯ ಕರೆ— ಧ್ರುವಕುಮಾರ, ನೀನು ಹೋಗಿ ಎಷ್ಟು
ಸಮಯ ಆಯಿತಪ್ಪಾ ! ನಿನ್ನನ್ನು ಬಿಟ್ಟು
ನಾನೆಂತಿರಲಿ ? ಮಗುವೇ ಬೇಗ ಬಾಪ್ಪಾ !

ನಾರದ ಮಹರ್ಷಿಯ ಸಲಹೆ— ಮಗೂ, ನೀನು ಸಿಂಹಾಸನವನ್ನು ಏರಲೇಬೇಕೆಂದರೆ ಅದೇನೂ ವಿಶೇಷವಲ್ಲ. ಈಗಲೇ ನನ್ನೊಂದಿಗೆ ಹಿಂದಿರುಗು. ನಾನೇ ನಿನ್ನನ್ನು ಸಿಂಹಾಸನದ ಮೇಲೆ ಕೂಡಿಸಿ ಬಿಡುವೆ. ಅದಕ್ಕೇಕಿಷ್ಟು ಕಷ್ಟ ಪಡಬೇಕು ?

ದಾಸಿಯ ಬೇಡಿಕೆ— ಹಾಲು ಹಸುಳೆ ಕಾಡಿಗೆ ಹೋಗುವುದೆಂದರೇನು? ಅಲ್ಲಿ ಕ್ರೂರ ಮೃಗಗಳಿರುತ್ತವೆ. ಅವುಗಳಿಂದ ಅಪಾಯವುಂಟು; ಹೋಗಬೇಡಪ್ಪಾ.

(ಆ ಬೇಡಿಕೆ, ಆ ಹೇಳಿಕೆ ಚಿತ್ರವಿಚಿತ್ರವಾಗಿ ಮನವನ್ನು ಮುತ್ತಿ ಹೊಸ ಹೊಸ ಪ್ರಲೋಭನೆಗಳನ್ನು ಮೂಡಿಸುವುವು. ಆಗಲೂ ಧ್ರುವಕುಮಾರ ಸ್ವಲ್ಪವೂ ವಿಚಲಿತನಾಗದೆ ತನ್ನನ್ನು ತಾನೇ ಗೆದ್ದು ಪೀಠಗಲ್ಲನ್ನು ಏರಿ ನಾರಾಯಣ ಮಂತ್ರದೊಡನೆ ಧ್ಯಾನಾಸಕ್ತನಾದ. ಹೊತ್ತು ಉರುಳಿ ಮನಸ್ಸು ಬಲಿಯುತಿದ್ದಂತೆ ಆಶಾಬದ್ಧ ಸಂಭವಗಳು ತಂಗಾಳಿಯಲ್ಲಿ ತೂರಿಹೋಗತೊಡಗಿದುವು. ಕ್ರಮಕ್ರಮೇಣ ಅಂತಃಪಟಲದ ಮೇಲೆ ನಾರಾಯಣನ ದಿವ್ಯ ಮೂರ್ತಿ ಸರ್ವಾಂಗ ಸುಂದರವಾಗಿ ರೂಪುಗೊಂಡು ಮಂತ್ರಮುಗ್ಧನನ್ನಾಗಿಸಿತು. ಮೊದಮೊದಲು ಹಣ್ಣುಹಂಪಲುಗಳು ಆಹಾರ; ಅನಂತರ ಬರಿಯ ಜಲಪಾನ ಮಾತ್ರ; ಮನಸ್ಸು ಬಲಿತಮೇಲೆ ವಾತಾವರಣವೇ ಆಹಾರ. ಕೆಲವೊಮ್ಮೆ ಉದಯಾಸ್ತಗಳು ಗಮನಕ್ಕೆ ಬರುತ್ತಲೇ ಇರಲಿಲ್ಲ. ಇನ್ನೂ ಕೆಲವೊಮ್ಮೆ ಕಾರಿರುಳು ಕವಿಯುವುದೇ ಆಗಲೀ ಸುಡುಬಿಸಿಲು ಏರುವುದೇ ಆಗಲೀ ತಿಳಿಯುತ್ತಿರಲಿಲ್ಲ. ದಿನಕ್ಕೊಮ್ಮೆ ಯಾವಾಗಲಾದರೂ ಎದ್ದು ದಿನಚರಿಯನ್ನು ಮುಗಿಸಿ ಮತ್ತೆ ಕುಳಿತರೆ ಪುನಃ ಮರುದಿನವೇ ಎಚ್ಚರ.

ಅಲ್ಲಲ್ಲಿ ಆಗಾಗ ದುಷ್ಟಮೃಗಗಳ ಘರ್ಜನೆ ಕರ್ಣಪಟಲ ಹರಿಯುವಂತೆ ಮೊಳಗಿದರೂ ಮನಸ್ಸು ಮಣಿಯಲಿಲ್ಲ; ತಪಸ್ಸು ಕೆಡಲಿಲ್ಲ. ಮನುಷ್ಯಗಂಧದಿಂದ ಕೆರಳಿ ಮುನ್ನುಗ್ಗಿ ಬಂದ ಅವು ತಪಸ್‌ಜ್ವಾಲೆಯಿಂದ ಸುಟ್ಟು ಬೆದರಿ ಹಿಂದಿರುಗಿ ಓಡಿ ಹೋದುದು ಸಹ ಗಮನಕ್ಕೆ ಬರಲಿಲ್ಲ. ಕಗ್ಗಲ್ಲಿನ ಪೀಠದ ಮೇಲೆ ಚಿನ್ನದ ಪುತ್ಥಳಿಯಂತೆ ನಿಶ್ಚಲಭಂಗಿಯಲ್ಲಿ ಧ್ರುವಕುಮಾರ ಮಂಡಿಸಿದ್ದ.

ದಿನಗಳ ಗಾಳಿಯುರುಳಿ ಸಿದ್ಧಿಯ ಹಂತವನ್ನೇರಿತು ತಪಸ್ಸಾಧನೆ.

ಅಂದು, ಧ್ರುವಕುಮಾರ ಒಂದು ವಿಚಿತ್ರ ಪ್ರಸಂಗಕ್ಕೆ ಒಳಗಾದ ತನಗೆ ಪರಮಾತ್ಮ ಇನ್ನೂ ಒಲಿಯಲಿಲ್ಲವಲ್ಲಾ ಎಂಬ ಅಂತರಂಗಿಕ ಪರಿತಾಪದಿಂದ ಬಿಕ್ಕಿಬಿಕ್ಕಿ ಅಳುತಿದ್ದಾನೆ, ಕಣ್ಣೀರಿನ ಕೋಡಿ ಧಾರೆಧಾರೆಯಾಗಿ ಹರಿಯು ತ್ತಿದೆ. ಆದರೂ ಬಾಹ್ಯ ಪ್ರಜ್ಞೆಯೇ ಇಲ್ಲ. ಅದೆಷ್ಟು ಹೊತ್ತು ಹಾಗೆ ಉರು ಳಿತ್ತೋ!... ಅನಂತರ ಇದ್ದಕ್ಕಿದ್ದಂತೆಯೇ ಇನ್ನೊಂದು ಅನಿರೀಕ್ಷಿತ ಅಭಾಸ.... ಒಳಗಣ್ಣಿನ ಮುಂದೆ ಅಂತಃಪಟಲದ ಮೇಲೆ ನಲಿಯುತಿದ್ದ ಪರಮಾತ್ಮನ ರೂಪು ಅದೃಶ್ಯನಾಗಿ ಅವನು ಬೆಚ್ಚಿಬಿದ್ದು ತಟ್ಟನೆ ಕಣ್ಣು ತೆರೆದ.

ನೋಡಿದರೆ, ಅದೆಂತಹ ಅದ್ಭುತ ಪವಾಡ ಕಣ್ಮುಂದೆ ! ವನ್ಯ ಪ್ರದೇಶ ವೆಲ್ಲಾ ಜಗಜಗಿಸುವಂತಹ ಉಜ್ವಲ ಕಾಂತಿಯ ಮಧ್ಯೆ ಪರಮಾತ್ಮನ ಮನ ಮೋಹಕ ರೂಪು? ಕರ್ಣಕುಂಡಲ, ಕಿರೀಟ, ಕೊರಳ ಹಾರ, ಶಂಖ, ಚಕ್ರ, ಗದಾ, ಪದ್ಮಹಸ್ತಗಳು ಅವನು ಪರಮಾತ್ಮನೇ ಎಂಬುದಕ್ಕೆ ಸತ್ಯಸಾಕ್ಷಿ ! ಮಹದಾನಂದದಿಂದ ಒಮ್ಮೆಗೇ ಹೃದಯ ಬಿರಿದುಹೋಗುವಂತಹ ಸನ್ನಿವೇಶ !

ಆ ಮುಹೂರ್ತದಲ್ಲಿ ಧ್ರುವಕುಮಾರ ದಿಗ್ಭ್ರಾಂತನಾದ. ಮಂತ್ರ ಮುಗ್ಧತೆ ಮನಃಪ್ರಾಣಗಳನ್ನು ಆವರಿಸಿತು. ಅವನು ಏಳಲೂ ಆರ; ಬೇಡಲೂ ಆರ. ಸ್ತುತಿಸಲೂ ತಿಳಿಯದು. ಆಗ ಪರಮಾತ್ಮನೇ ನಾಲ್ಕು ಹೆಜ್ಜೆ ಮುಂದು ವರಿದು ಮಗುವಿನ ಕಪೋಲವನ್ನು ಶಂಖದಿಂದ ಮೃದುವಾಗಿ ನೇವರಿಸಿ ಸಂಭ್ರಾಂತಿಯನ್ನು ಹೋಗಲಾಡಿಸಿದ. ಆ ಸುಖಸ್ಪರ್ಶದಿಂದ ಎಚ್ಚೆತ್ತುಕೊಂಡ ಧ್ರುವಕುಮಾರನು ಎದ್ದು ಆನಂದದಿಂದ ಅವನ ಅಡಿದಾವರೆಗಳಿಗೆ ಎರಗಿದ.

ಶ್ರೀಮನ್ನಾರಾಯಣ—(ಅವನನ್ನು ಹಿಡಿದೆತ್ತಿ) ಮಗೂ, ಧ್ರುವಕುಮಾರ! ನಿನಗೇನು ಬೇಕು ಕೇಳಿಕೊ.

ಧ್ರುವಕುಮಾರ— ಸ್ವಾಮಿ, ಪ್ರಭುವೇ! ನಿಮ್ಮ ಹೊರತು ನನಗೇನೂ ಬೇಡ. ಸರ್ವದಾ ನನ್ನನ್ನು ನಿಮ್ಮ ಬಳಿಯಲ್ಲಿ ಇರಿಸಿ ಕೊಳ್ಳುವಷ್ಟು ದಯೆದೋರಿದರೆ ಸಾಕು.

ಶ್ರೀಮನ್ನಾರಾಯಣ—ಇನ್ನೇನು ಬೇಕು ಹೇಳು.

ಧ್ರುವಕುಮಾರ— ಸ್ವಾಮಿ. ನನಗೀಗ ಬೇರಾವ ಆಶೆಯೂ ಇಲ್ಲ. ಅನುಗಾಲವೂ ನಿನ್ನ ಕಿಂಕರನಾಗಿರುವಂತೆ ನನ್ನನ್ನು ಅನುಗ್ರಹಿಸು.

ಶ್ರೀಮನ್ನಾರಾಯಣ—ಅಯ್ಯಾ. ನೀನಿನ್ನೂ ಬಾಲ್ಯಾವಸ್ಥೆಯಲ್ಲಿದ್ದಿ. ನೀನು ನಿನ್ನ ಜೀವಮಾನವನ್ನು ಭೂಲೋಕದಲ್ಲಿ ಕಳೆಯ ಬೇಕು. ಮುಂದೆ ಧರ್ಮದಿಂದ ರಾಜ್ಯವಾಳಿ ಧರ್ಮ ಸಂಸ್ಥಾಪನೆ ಮಾಡಲಿರುವೆ. ಅನಂತರ ನಿನ್ನ ಅಭಿ ಲಾಷೆಯು ಕೈಗೂಡುವುದು.

ಧ್ರುವಕುಮಾರ— ಪ್ರಭುವೇ, ನಿನ್ನನ್ನು ಬಿಟ್ಟು ನಾನೆಂತಿರಲಿ ? (ಬಿಕ್ಕಿ ಬಿಕ್ಕಿ ಅಳುವನು)

ಶ್ರೀಮನ್ನಾರಾಯಣ—ಮಗೂ. ನಿನ್ನ ಭಾಗದ ಧರ್ಮಕರ್ಮಗಳನ್ನು ಸವೆ ಸಿಯೇ ತೀರಬೇಕು. ಅನಂತರ ಸ್ವರ್ಗವನ್ನು ಸೇರಲಿ ರುವೆ. ಈಗಲೇ ಆ ಆಲೋಚನೆಯನ್ನು ಮಾಡ ಬಾರದು. ನಿನ್ನ ಹೆಸರು ಶಾಶ್ವತವಾಗಿರುವಂತೆ ನಿನಗೆ ನಕ್ಷತ್ರಲೋಕವು ಲಭಿಸುವುದು. ಜಗತ್ತಿಗೆ ಆದರ್ಶ ವ್ಯಕ್ತಿಯಾಗಿ ಬಾಳು. ನಿನಗೆ ನನ್ನ ಭಕ್ತರಲ್ಲಿ ಅಗ್ರ ಸ್ಥಾನ ದೊರೆಯಲಿದೆ. ನೀನು ನಗರಕ್ಕೆ ಹಿಂತಿರುಗಿ ಹೋಗು. ನಿನಗೆ ಶುಭವಾಗಲಿ.

(ಆ ವಾಗ್ಧಾರೆ ಅಮೃತಧಾರೆಯಂತೆ ಅಂತಃಪಟಲದ ಮೇಲೆ ಬೀಳುವಾಗ ಧ್ರುವಕುಮಾರನು ಅತ್ಯಂತ ವಿನಮ್ರತೆಯಿಂದ ಕರಗಳನ್ನು ಜೋಡಿಸಿಕೊಂಡೇ ನಿಂತಿದ್ದ. ಹೃದಯಾಬ್ಧಿ ಆನಂದದ ಹೆದ್ದೆರೆಗಳಿಂದ ತುಂಬಿ ತುಯ್ಯಲಾಡು ತಿತ್ತು. ಆದರೂ, ಅವನಿಗೆ ಇನ್ನಾವ ಬೇಡಿಕೆಯನ್ನೂ ಮುಂದಿಡಲು ಸಾಧ್ಯ ವಾಗಲಿಲ್ಲ. ಕಣ್ಣುಗಳಲ್ಲಿ ಭಕ್ತಿಬಿಂದುಗಳು ತುಂಬಿ ಮಂಜುಮಂಜಾಯಿತು ದೃಷ್ಟಿ. ಚಿತ್ರಭಿತ್ತಿಯಲ್ಲಿ ಮತ್ತೆ ಶ್ರೀಮನ್ನಾರಾಯಣನ ಪ್ರತಿರೂಪು ಮೂಡಿ ಬಂದು ಹೊಸ ಅಧ್ಯಾಯ ಪ್ರಾರಂಭವಾದರೂ ಮುಗಿದ ಕೈಗಳು ಇಳಿಯಲಿಲ್ಲ. ಮೈಯರಿವು ಮೂಡಲಿಲ್ಲ. ಆವುದೋ ಕಂಡರಿಯದ ದಿವ್ಯ ಪ್ರಪಂಚದಲ್ಲಿ ಅಭಿ ಷಿಕ್ತನಾದ ಪ್ರಭುವಿನಂತೆ ತಾನೇ ತಾನಾಗಿ ಮೈಮರೆತಿದ್ದಾನೆ, ಬಾಲಕ ಧ್ರುವಕುಮಾರ.

ಕೆಲವು ಗಳಿಗೆಗಳು ನಿರಾತಂಕವಾಗಿ ಉರುಳಿದುವು.

ಮನಃಪ್ರಾಣಗಳನ್ನು ಮುಸುಗಿದ್ದ ಮಂತ್ರಮುಗ್ಧತೆ, ಭಕ್ತಿಯ ಪರಿಮಳಗಳ ಪ್ರಭಾವ ಅಳಿದು ಮುಗ್ಧ ಭಾವದ ಕಟ್ಟೆಯೊಡೆದಮೇಲೆ ಕಣ್ಣುಗಳನ್ನು ತೆರೆದು ನೋಡಿದರೆ ಶ್ರೀಮನ್ನಾರಾಯಣನ ದಿವ್ಯಮೂರ್ತಿ ಅಂತರ್ಧಾನವಾಗಿ ಎಂದೋ! ಒಡನೆ ಧ್ರುವಕುಮಾರ 'ಅಯ್ಯೋ, ದೇವರೇ!' ಎಂದು ಉದ್ಗರಿಸಿದ. ಕಾತರಯುಕ್ತ ಲೋಚನಗಳು ಸುತ್ತಮುತ್ತಲೂ ಹರಿದಾಡಿದುವು ಶ್ರೀಮನ್ನಾರಾಯಣನ ವಿನಾ ಮತ್ತೆಲ್ಲವೂ ಇದ್ದ ಹಾಗೆಯೇ ಇವೆ. ಕಾಳಿಂದಿ ಯಥಾರೀತಿ ಭೋರ್ಗರೆದು ಹರಿಯುತಿದ್ದಾಳೆ. ವನವಲಯ ಮೊದಲಿನಂತೆಯೇ ನಳನಳಿಸುತ್ತಿದೆ. ಶ್ರೀಮನ್ನಾರಾಯಣ ಮಾತ್ರ ಕಾಣಿಸುತ್ತಲೇ ಇಲ್ಲ. ಅವನು ಇಲ್ಲೇ ಎಲ್ಲಾದರೂ ಅಡಗಿರಬಹುದೇ ಎಂಬ ಆಶಾಭಾವ ಮನದಲ್ಲಿ. ಮತಿಭ್ರಾಂತನಂತೆ ಅಲ್ಲಿ ಇಲ್ಲಿ ಹುಡುಕಾಡಿದ. ಮರಗಳ ಮೇಲೆ, ಪೊದೆಗಳ ಒಳಗೆ, ಬಂಡೆಗಳ ಹಿಂದೆ ಹೀಗೆ ಎಲ್ಲಾ ಕಡೆಯೂ. ಆದರೆ, ಎಲ್ಲಿದ್ದಾನೆ ಅವನು? ಧ್ರುವಕುಮಾರ ಕಂಬನಿಗರೆಯುತ್ತಲೇ ಬೇಡಿದ ; ಗೋಳಾಡಿದ. ಎಲ್ಲಿಯೂ ಪರಮಾತ್ಮನ ಸುಳಿವೇ ಇಲ್ಲ.

(ಧ್ರುವಕುಮಾರ ಮನಸ್ಸು ತಿಳಿಯಾದ ಮೇಲೆ ಅಲ್ಲಿಂದ ಪುರಾಭಿಮುಖವಾಗಿ ಹೊರಟ. ಸಂತೃಪ್ತ ಮನಃಪ್ರಾಣಗಳು ಪರಮಾತ್ಮನಲ್ಲಿ ಲೀನವಾಗಿದ್ದುವು)

ಧ್ರುವಕುಮಾರ ನಾರಾಯಣ....ನಾರಾಯಣ .. ನಾರಾಯಣ...

ದೃಶ್ಯ
೮

[ರಾಜಧಾನಿಯಿಂದ ಧ್ರುವಕುಮಾರನನ್ನು ಅರಸಿಕೊಂಡು ಹೋಗಿದ್ದ ರಾಜಭಟರು ಅವನು ತಪೋವನದಿಂದ ಹಿಂತಿರುಗಿ ಬರುತಿದ್ದುದನ್ನು ನೋಡಿ, ಆನಂದೋನ್ಮತ್ತರಾಗಿ ಕೂಡಲೇ ರಾಜಧಾನಿಗೆ ಓಡಿಬಂದು ಉತ್ತಾನಪಾದ ರಾಜನಿಗೆರಗುತ್ತಾರೆ ಮುಖದಲ್ಲಿ ಭಾವೋದ್ವೇಗ ಕಂಡು ಬರುತ್ತದೆ]

ಭಟ— ಮಹಾಪ್ರಭೋ ಪರಾಂಬರಿಸಬೇಕು !

ಉತ್ತಾನಪಾದರಾಯ—(ಸ್ವಗತ) ದೇವರೇ ಒಳ್ಳೆಯ ಸುದ್ದಿಯೇ ಇರಲಿ. (ಪ್ರಕಾಶ) ಏನು, ಬೇಗನೇ ಹೇಳು ?

ಭಟ— ಜೀಯಾ. ಧ್ರುವಕುಮಾರರು ಬರುತಿದ್ದಾರೆ !

ಉತ್ತಾನಪಾದರಾಯ—(ಅತ್ಯಾನಂದದಿಂದ) ಎಲ್ಲಿ ?....ಎಲ್ಲಿ .. ?

ಭಟ— ವಿಂದ್ಯಾಟವಿಯನ್ನು ದಾಟಿ ರಾಜಧಾನಿಯ ಕಡೆ ಬರುತಿದ್ದಾರೆ... ಮಹಾಪ್ರಭೂ !

ಉತ್ತಾನಪಾದರಾಯ—ಅಂದರೆ ಭಗವತೀ ಬೆಟ್ಟದ ಸಾನು ಪ್ರದೇಶದಲ್ಲೇ ?

ಭಟ— ಇನ್ನೂ ಅದಕ್ಕಿಂತ ಸ್ವಲ್ಪ ಹಿಂದೆಯೇ ಇದ್ದಾರೆ. ಇಷ್ಟರಲ್ಲಿ ಅಲ್ಲಿಗೆ ಬಂದಿದ್ದರೂ ಬಂದಿರಬಹುದು.

ಉತ್ತಾನಪಾದರಾಯ—(ಪ್ರಸನ್ನಮುಖಿಯಾಗಿ) ಹೇಗಿದ್ದಾನೆ? ತೀರ ದಣಿದಿದ್ದಾನೆಯೇ ?

ಭಟ— ಅಷ್ಟೇನೂ ಇಲ್ಲ, ಮಹಾಪ್ರಭೂ ! ಆದರೆ ಬಾಹ್ಯಪ್ರಜ್ಞೆಯೇ ಇದ್ದಂತಿಲ್ಲ.

ಉತ್ತಾನಪಾದರಾಯ—(ಆಶ್ಚರ್ಯದಿಂದ) ಅಂದರೆ...?

ಭಟ— ಅವರ ನೇತ್ರಗಳು ನಿಮೀಲಿತವಾಗಿವೆ. ಅತ್ತ ಇತ್ತ ನೋಡುವುದೇ ಇಲ್ಲ. ಹರಿನಾಮಸ್ಮರಣೆಯಲ್ಲಿಯೇ ಪೂರ್ಣಮಗ್ನರಾಗಿ ಬಿಟ್ಟಿದ್ದಾರೆ.

ಉತ್ತಾನಪಾದರಾಯ—ನೀನವನೊಂದಿಗೆ ಮಾತಾಡಲಿಲ್ಲವೇ ?

ಭಟ— ಇಲ್ಲ ಮಹಾಪ್ರಭೂ! ಅವರ ಮನಸ್ಸೆಲ್ಲಾ ಭಗವಂತನ ಮೇಲೆಯೇ ಇದೆ.

ಉತ್ತಾನಪಾದರಾಯ—ಅವನ ವೈಗಾವಲಿಗೆ ಯಾರಿದ್ದಾರೆ ಅಲ್ಲಿ ?

ಭಟ— ಎಂಟು ಮಂದಿ ಭಟರನ್ನು ನಿಯಮಿಸಿ, ನಿಮಗೆ ಸುದ್ದಿ ಕೊಡುವ ಸಲುವಾಗಿ ನಾನು ಓಡಿ ಬಂದೆ. ಆ ಎಂಟು ಮಂದಿಯೂ ಅವರ ಸುತ್ತಮುತ್ತ ನಡೆಯುತಿದ್ದಾರೆ.

ಉತ್ತಾನಪಾದರಾಯ—ಒಳ್ಳೆಯದು. ಹಾಗಾದರೆ ಅವನು ನಗರದ ಹೆಬ್ಬಾಗಿಲನ್ನು ಮುಟ್ಟಬೇಕಾದರೆ ಇನ್ನು ಎಷ್ಟು ಸಮಯ ಬೇಕಾಗಬಹುದು ?

ಭಟ— ಮಹಾಪ್ರಭೂ, ಈ ಸಂಜೆಯೊಳಗಾಗಿ ಬಂದಾರು.

ಉತ್ತಾನಪಾದರಾಯ— ನೀನು ಈಗಲೇ ಹೋಗಿ ಅಮಾತ್ಯರನ್ನು ಬರಮಾಡು.

ಭಟ— ಅಪ್ಪಣೆ ಜೀಯಾ !

(ತಕ್ಷಣ ಭಟ ಅಲ್ಲಿಂದ ನಿಷ್ಕ್ರಮಿಸುವನು)

ಉತ್ತಾನಪಾದರಾಯ—(ಬಾಗಿಲ ಕಡೆ ತಿರುಗಿ) ಯಾರಲ್ಲಿ ?

(ಬಾಗಿಲ ಬಳಿ ಕಾದಿದ್ದ ದೂತನು ಒಳಗಡೆ ಬಂದು ಕರಗಳನ್ನು ಜೋಡಿಸುವನು)

ದೂತ— ಅಪ್ಪಣೆಯಾಗಲಿ, ಬುದ್ಧಿ !

ಉತ್ತಾನಪಾದರಾಯ—ನೀನು ಈಗಲೇ ಅಂತಃಪುರಕ್ಕೆ ಹೋಗಿ, ಹಿರಿಯರಾಣಿಯವರಿಗೂ ಕಿರಿಯ ರಾಣಿಯವರಿಗೂ ಧ್ರುವ ಕುಮಾರನು ತಪೋವನದಿಂದ ಪುರಾಭಿಮುಖವಾಗಿ ಆಗಮಿಸುತಿದ್ದಾನೆಂದೂ ಅವನನ್ನು ಎದುರುಗೊಳ್ಳಲು ಸಕಲ ಪರಿವಾರ ಸಮೇತ ಸಿದ್ಧರಾಗಿರಬೇಕೆಂದೂ ತಿಳಿಸು.

ದೂತ— ಅಪ್ಪಣೆ. ಮಹಾಪ್ರಭೂ !
(ಅದೇ ವೇಳೆಗೆ ಅಮಾತ್ಯನು ಒಳಬಂದು ಕರಗಳನ್ನು ಜೋಡಿಸುವನು)

ಉತ್ತಾನಪಾದರಾಯ—ಅಮಾತ್ಯರೇ ಸುವಾರ್ತೆಯನ್ನು ಕೇಳಿದಿರಾ ?

ಅಮಾತ್ಯ— ಕೇಳಿದೆ ಮಹಾಸ್ವಾಮಿ ! ನನಗೆ ಬಹಳ ಆನಂದವಾಯಿತು; ಧ್ರುವಕುಮಾರರು ಪುರಾಭಿಮುಖವಾಗಿ ಬರುತಿದ್ದಾರೆಂದು ತಿಳಿದು. ದೇವರು ದೊಡ್ಡವನು. ತಾವಿನ್ನು ನಿಶ್ಚಿಂತೆಯಿಂದ ಇರಬಹುದು.

ಉತ್ತಾನಪಾದರಾಯ—(ಸುಖಾನಂದ ತುಂದಿಲನಾಗಿ) ದೇವರು ದಯಾಘನ ! ನನ್ನ ಮೊರೆ ಅವನಿಗೆ ಮುಟ್ಟಿತು. ಇಂದು ಎಲ್ಲಾ ಭವಬಂಧನಗಳಿಂದ ನಾನು ಬಿಡುಗಡೆ ಹೊಂದಿದೆ. ನಾನಿನ್ನು ಪರಿವ್ರಾಜಕನೇ ಸೈ !
(ಅಮಾತ್ಯನು ಅತ್ಯಾಶ್ಚರ್ಯದಿಂದ ನಿಟ್ಟಿಸುವನು ಏನು ಹೇಳಲೂ ಬಾಯಿ ಬರಲಿಲ್ಲ)

ಉತ್ತಾನಪಾದರಾಯ—ಧ್ರುವಕುಮಾರನು ಪ್ರವರ್ಧಮಾನಕ್ಕೆ ಬರುವವರೆಗೆ ರಾಜ್ಯಸೂತ್ರಗಳನ್ನು ನೆಪಮಾತ್ರಕ್ಕೆ ನಿರ್ವಹಿಸುವೆ. ತರುವಾಯ ಅವನೇ ನನ್ನ ಉತ್ತರಾಧಿಕಾರಿ !

ಅಮಾತ್ಯ— ಸಂತೋಷ ಮಹಾಪ್ರಭೂ !

ಉತ್ತಾನಪಾದರಾಯ —ಈಗಲೇ ನೀವು ಪುರಶೃಂಗಾರಕ್ಕೆ ತೊಡಗಬೇಕು ತತ್‌ಕ್ಷಣವೇ ಅಧಿಕಾರಿಗಳನ್ನು ಬರಮಾಡಿಕೊಂಡು ಪುಷ್ಪಗುಲ್ಮವೀಥಿಯುದ್ದಕ್ಕೂ ತಳಿರು ತೋರಣಗಳಿಂದಲೂ ಹೂಮಾಲೆಗಳಿಂದಲೂ ಶೃಂಗರಿಸಲು ಏರ್ಪಡಿಸಿರಿ. ಬೀದಿಯನ್ನು ಗುಡಿಸಿ ಸಾರಿಸಿ ರಂಗೋಲಿಯಿಟ್ಟು ಸಕಲ ಸಜ್ಜುಗೊಳಿಸಲು ಪುರಜನರಿಗೆ ತಿಳಿಸುವಂತೆ ಮಾಡಿರಿ. ಕಳಸ ಕನ್ನಡಿ ಮಂಗಳವಾದ್ಯಗಳ ಸಹಿತ ಎಲ್ಲರೂ ಪುರದ್ವಾರಕ್ಕೆ ಹೋಗಿ ಅಲ್ಲಿಂದಲೇ

ಅವನನ್ನು ಎದುರುಗೊಂಡು, ರಾಜಗೌರವ ಪೂರ್ವಕವಾಗಿ ಕರೆತರಬೇಕು ತಿಳಿಯಿತೇ ?

ಅಮಾತ್ಯ— ಆಯಿತು; ಮಹಾಪ್ರಭೂ !

ಉತ್ತಾನಪಾದರಾಯ—ದಳವಾಯಿಗಳನ್ನು ಈ ಕೂಡಲೇ ಬರ ಮಾಡಿರಿ.

ಅಮಾತ್ಯ— ಅಪ್ಪಣೆ ಮಹಾಪ್ರಭೂ !

(ನಿಷ್ಕ್ರಮಿಸುವನು)

ಉತ್ತಾನಪಾದರಾಯ—(ಸ್ವಗತ) ನಾನು ಇಂದು ಖಂಡಿತ ಧನ್ಯ! ನನ್ನ ಪಾಪ ಬಂಧಗಳು ಇನ್ನು ಬಿಡುಗಡೆ ಹೊಂದುತ್ತವೆ. ನಾನು ನಿಶ್ಚಿಂತನಾಗುವೆ. ಭಗವಂತನಿಗೆ ಅನಂತ ಧನ್ಯವಾದಗಳು.

(ದಳವಾಯಿಯು ಒಳ ಬಂದು ನಮಸ್ಕರಿಸುವನು)

ಉತ್ತಾನಪಾದರಾಯ—ದಳವಾಯಿಗಳೇ- ನಿಮಗೆ ಧ್ರುವಕುಮಾರನಾಗಮನದ ಸುವಾರ್ತೆಯು ತಿಳಿಯಿತೇ ?

(ಅತ್ಯಾನಂದದಿಂದ ಮುಖಬಿಂಬ ಅರಳಿ ಹೂವಾಗುವುದು)

ದಳವಾಯಿ— ತಿಳಿಯಿತು ಮಹಾಸ್ವಾಮಿ, ತಮ್ಮ ಸಂಕಟದ ಮೊರೆ ಪರಮಾತ್ಮನಿಗೆ ಮುಟ್ಟಿತು. ಇನ್ನು ಮಹಾ ಪರಿವಾರದವರ ಮನಸ್ಸಿನ ಆತಂಕ ಅಳಿದು ಸುಖ ಶಾಂತಿಗಳು ನೆಲಸಿದರೆ ಸಾಕು.

ಉತ್ತಾನಪಾದರಾಯ—ಭಗವಂತನಿಗೆ ಪ್ರಣಾಮಗಳು !

(ಎರಡೂ ಕೈಗಳನ್ನು ಭಗವಂತನಿಗೆ ಭಕ್ತಿಯಿಂದ ಜೋಡಿಸಿದ ನಂತರ...)

ಉತ್ತಾನಪಾದರಾಯ—ನನಗಿಂದು ಎಷ್ಟು ಸಂತೋಷವಾಗಿದೆಯೋ ಹೇಳಿ ಪೂರೈಸಲಾರೆ.

ದಳವಾಯಿ— ಮಹಾರಾಣಿಯವರ ಭಾಗ್ಯ.

ಉತ್ತಾನಪಾದರಾಯ—(ಸ್ವಗತ)ಅದನ್ನು ನೂರುಬಾರಿ ಹೇಳಿದರೂ ಸಾಲದು. (ಪ್ರಕಾಶ) ದಳವಾಯಿಗಳೇ, ನಮ್ಮ ಪಟ್ಟದಾನೆಗೆ

ಹೂಹಾರವನ್ನು ಕೊಟ್ಟು ಅದನ್ನು ಮುಂದಿಟ್ಟು ಕೊಂಡು, ರಥ, ಪದಾತಿಗಳು ಮತ್ತು ರಾಹುತರುಗಳೊಂದಿಗೆ ನೀವು ಊರ ಹೆಬ್ಬಾಗಿಲಿಗೆ ಪಯಣಿಸಿರಿ. ರಾಜ ಕುಮಾರನನ್ನು ರಾಜಗೌರವಪೂರ್ವಕವಾಗಿ ಕರೆತರಬೇಕು. ಯಾವುದರಲ್ಲೂ ಮರ್ಯಾದೆಗೆ ಲೋಪವಾಗಬಾರದು.

ದಳವಾಯಿ— ಅಪ್ಪಣೆ, ಮಹಾಪ್ರಭೂ !

(ಅವನು ನಿರ್ಗಮಿಸುವನು)

ಉತ್ತಾನಪಾದರಾಯ—(ಸ್ವಗತ) ನಾನಿಂದು ಎಂತಹ ಕಡು ಸಂಕಟದಿಂದ, ಘೋರಘೋರ ಪಾಪದಿಂದ ಪಾರಾದೆ? ನಾರದ ಮಹರ್ಷಿಗಳು ಹರಸಿ ಹೋಗಿದ್ದರೂ ನಾನು ಚಿಂತೆಯಿಂದ ವಿಮುಕ್ತನಾಗಿರಲಿಲ್ಲ. ಇನ್ನು ಅವನೊಮ್ಮೆ ಹಿಂದಿರುಗಿ ಬಂದರೆ ಸಾಕು. ಅದಕ್ಕಿಂತ ಹೆಚ್ಚಿನ ಯಾವ ಸೌಭಾಗ್ಯವೂ ನನಗೆ ಬೇಡ.

(ನಿಮೀಲಿತ ನಯನಗಳಲ್ಲಿ ಹೃದಯದಾಹೀ ಪ್ರೇಮಾಗ್ನಿಯ ಮಿಂಚು ಮಿನುಗಿತು. ಗಗನ ಭಿತ್ತಿಯತ್ತ ನೋಡುತ್ತ ವಿನಮ್ರತೆಯಿಂದ ಕರಗಳನ್ನು ಮತ್ತೆ ಮತ್ತೆ ಜೋಡಿಸುವನು. ಸುಖದುಃಖಾಶ್ರುಗಳು ಕೆನ್ನೆಯಮೇಲೆ ಧಾರಾಕಾರವಾಗಿ ಇಳಿಯುವುದು. ಅವನು ಹಾಗೇ ಭಾವನಾ ಲೋಕದಲ್ಲಿ ವಿಹರಿಸುತ್ತ ಅಲ್ಲಿಂದಲೇ ಶತಪಥ ತಿರುಗುವನು)

ಅಮಾತ್ಯ— (ಒಳಗಡೆ ಪ್ರವೇಶಿಸಿ) ಮಹಾಪ್ರಭೂ. ಧ್ರುವಕುಮಾರರ ಸ್ವಾಗತಕ್ಕೆ ಸಕಲವೂ ಸಿದ್ಧವಾಗಿದೆ.

ಉತ್ತಾನಪಾದರಾಯ—ಕಳಸ ಕನ್ನಡಿಯ ಸಹಿತ ಪುರನಿವಾಸಿನಿಯರು ಹೊರಟಿದ್ದಾರೆಯೇ ?

ಅಮಾತ್ಯ— ಹೌದು, ಮಹಾಸ್ವಾಮಿ.

ಉತ್ತಾನಪಾದರಾಯ—ತಳಿರು ತೋರಣ ಕಟ್ಟಿಸಿದಿರಾ ?

ಅಮಾತ್ಯ— ಹೌದು, ಮಹಾಪ್ರಭೋ! ಆಗಲೇ ಕಟ್ಟಿಸಲಾಗಿದೆ. ಪುರನಿವಾಸಿಗಳು ಬಹಳ ಉತ್ಸಾಹದಿಂದ ತಾವು ತಾವೇ ಕಟ್ಟಿದ್ದಾರೆ.

ಉತ್ತಾನಪಾದರಾಯ—ಪರಮಾನಂದವಾಯಿತು.

ದಳವಾಯಿ— (ಒಳಗೆ ಪ್ರವೇಶಿಸಿ) ಜೀಯಾ. ರಥ ಪದಾತಿಗಳೂ, ರಾಹುತರೂ ಸಿದ್ಧರಾಗಿದ್ದಾರೆ. ವಾದ್ಯ-ಓಲಗದವರೂ ಬಂದಿದ್ದಾರೆ.

ಉತ್ತಾನಪಾದರಾಯ—ಪಟ್ಟದಾನೆಯ ಕೈಗೆ ಹೂಮಾಲೆ ಕೊಟ್ಟಿದ್ದೀರಾ ?

ದಳವಾಯಿ— ಹೌದು. ಮೈತೊಳೆದು ಶುದ್ಧಗೊಳಿಸಿ ಹೂಮಾಲೆ ಕೊಡಲಾಗಿದೆ.

ಉತ್ತಾನಪಾದರಾಯ—ರಥವನ್ನು ಅರಮನೆಯ ಬಾಗಿಲಿಗೆ ತನ್ನಿ. ರಾಣಿಯವರೂ ಉತ್ತಮಕುಮಾರನೂ ಅದರಲ್ಲಿ ಕೂಡಲಿ. ನಾನು ನಡೆದುಕೊಂಡು ಬರುವೆ.

ದಳವಾಯಿ— ಆಗಬಹುದು ಜೀಯಾ !

ಉತ್ತಾನಪಾದರಾಯ—ಇನ್ನು ತಡವೇನೂ ಇಲ್ಲವಷ್ಟೆ ?

ಅಮಾತ್ಯ— ಇಲ್ಲ....ಇಲ್ಲ. ಎಲ್ಲವೂ ಅಣಿಯಾಗಿದೆ. ಇನ್ನು ಹೊರಡುವುದೊಂದು ಬಾಕಿ.

ಉತ್ತಾನಪಾದರಾಯ—ಸರಿ; ಈಗಲೇ ಹೊರಡೋಣ.

(ಅವರಿಬ್ಬರೂ ಹೆಬ್ಬಾಗಿಲ ಕಡೆ ಹೋಗುವರು. ಹೊರಗಡೆ ಜಮಾವಣೆ ಹೊಂದಿದ್ದ ಪುರಜನರ ಮಾತುಕತೆ ಕೇಳಿಸುವುದು; ಉತ್ತಾನಪಾದರಾಯ ಸಮಯಕ್ಕೆ ಸರಿಯಾಗಿ ಸಡಗರ ಸಂಭ್ರಮಗಳ ಒಕ್ಕೂಟವಾಗಿ ಪುತ್ರ, ಪತ್ನಿಯರೊಡಗೂಡಿ ಪುರದ್ವಾರದ ಕಡೆ ಹೊರಟ. ಪಟ್ಟದಾನೆ, ರಥ, ತುರಗ, ಪದಾತಿಗಳೂ, ಪುರೋಹಿತರೂ, ಅಮಾತ್ಯರೂ, ದಳವಾಯಿಗಳೂ, ಪುರನಿವಾಸಿನಿಯರೂ, ಪುರಜನರೂ ಕೂಡಿ ಪುಷ್ಪಗುಲ್ಮವೀಥಿ ಕಿಕ್ಕಿರಿದು ತುಂಬಿಹೋಯಿತು. ತಳಿರು ತೋರಣ, ಚಿತ್ರವಿಚಿತ್ರ ರಂಗವಲ್ಲಿ ಅದ್ಭುತ ಸ್ವಾಗತ ಬಯಸಿದ್ದುವು.

ಜನವಾರ್ಧಿಯ ಮಾತಿನ ಮರ್ಮರ ನಗೆಯ ತರಲಧಾರೆ, ವಿವಿಧ ರೀತಿಯ ಪಾದಧ್ವನಿ ಎಲ್ಲವೂ ಒಂದುಗೂಡಿ ಸದ್ದುಗದ್ದಲವೆಬ್ಬಿಸಿದ್ದುವು. ಉತ್ಸಾಹಪೂರ್ಣ ಮೆರವಣಿಗೆ ಪುರದ್ವಾರವನ್ನು ಮುಟ್ಟಲು ಬಹಳ ಸಮಯ ವನ್ನೇನೂ ತೆಗೆದುಕೊಳ್ಳಲಿಲ್ಲ.ಸುನೀತಿದೇವಿಯು ಇಷ್ಟು ಬೇಗನೆ ಸುದಿನವನ್ನು ಕಾಣುತ್ತೇನೆಂಬ ಭರವಸೆಯನ್ನು ಹೊಂದಿರಲಿಲ್ಲವಾದ್ದರಿಂದ ಸಖೇದಾಶ್ಚರ್ಯ ಗಳ ಒಕ್ಕೂಟವಾಗಿದ್ದಳು. ಅತ್ಯಂತ ಕಾತರದಿಂದ ಹಾದಿಯತ್ತ ಚಲಿಸುತಿದ್ದ ದೃಷ್ಟಿ ಒಂದು ಕ್ಷಣವೂ ಹಿಮ್ಮರಳಲಿಲ್ಲ ಕೊನೆಗೂ ಧ್ರುವಕುಮಾರ ದೂರದಲ್ಲಿ ಕಾಣಿಸಿಕೊಂಡಾಗ ಹೃನ್ಮನಗಳಿಗೆ ಹಬ್ಬವೂಡಿಸಿದಂತಾಯಿತು. ಅವನ ಸುತ್ತ ಮುತ್ತ ರಾಜಭಟರಿದ್ದರೂ ಅವನಲ್ಲಿ ಮಾತ್ರ ಯಾವ ಶ್ರದ್ಧೆಯೂ ತೋರು ತ್ತಿಲ್ಲ. ನಾರಾಯಣ ಮಂತ್ರ ನಾಲಿಗೆಯ ಮೇಲೆ ನಲಿಯುತಿದ್ದು ಬಾಹ್ಯಾಂ ತರಂಗಳನ್ನು ಕಸ್ತೂರಿಲೇಪವೊತ್ತಿದಂತೆ ಆಹ್ಲಾದಗೊಳಿಸಿತ್ತು ಭಕ್ತಿಮುಗ್ಧ ಭಾವ. ಅವನು ಪ್ರಥಮ ಅಸವಮತ್ತನಂತೆ ಹೆಜ್ಜೆಯಿಡುತಿದ್ದ.

ಜನ ಅವನನ್ನು ಕಂಡರೋ ಇಲ್ಲವೋ ಹರ್ಷೋದ್ಗಾರ ಮಾಡಿದರು. ಪಟ್ಟದಾನೆಯು ಹೂಮಾಲೆಯನ್ನು ಹಾಕಿತು. ಉತ್ತಾನಪಾದರಾಯ ಓಡಿ ಹೋಗಿ ಮಗನನ್ನು ಎತ್ತಿಕೊಂಡು ಮುದ್ದಾಡಿದ.

ಧ್ರುವಕುಮಾರ— ಅಪ್ಪಾಜಿ, ತಮ್ಮ ಅಪ್ಪಣೆ ತೆಗೆದುಕೊಳ್ಳದೆ ತೆರಳಿದ್ದ ಕ್ಕಾಗಿ ದಯವಿಟ್ಟು ಕ್ಷಮಿಸಿರಿ.

ಉತ್ತಾನಪಾದರಾಯ—ಕ್ಷಮಿಸಬೇಕಾದವನು ನೀನು ಮಗೂ, ನಾನಲ್ಲ. ಭಗವಂತ ಸದಾಕಾಲವೂ ನಿನ್ನನ್ನು ಚೆನ್ನಾಗಿ ಇಟ್ಟಿರಲಿ.

ಧ್ರುವಕುಮಾರ— ನಾನು ಶ್ರೀಮನ್ನಾರಾಯಣನ ಅನುಗ್ರಹ ಪಡೆದು ಕೊಂಡೆ ತಂದೆಯೆ !

ಉತ್ತಾನಪಾದರಾಯ—(ಪರಮಾನಂದಭರಿತನಾಗಿ) ನೀನು ಧನ್ಯ ! ಧನ್ಯ ! ಇದ್ದರೆ ನಿನ್ನಂತಹ ಮಕ್ಕಳಿರಬೇಕು ! ನಿನ್ನನ್ನು

ಪಡೆದು ಸುನೀತಿದೇವಿಯೂ ಈ ರಾಜ್ಯ ಲಕ್ಷ್ಮಿಯೂ ಧನ್ಯರಾದರು ! ಮಗೂ, ಸುಖವಾಗಿ ಸೂರ್ಕಾಲ ಬಾಳು !

(ಧ್ರುವಕುಮಾರ ತಂದೆಯ ಪಾದಗಳಿಗೆ ನಮಸ್ಕರಿಸುವನು)

ಜನರ ಒಕ್ಕೊರಲದನಿ—ಧ್ರುವಕುಮಾರನಿಗೆ ಜಯವಾಗಲಿ !

ಸೈನಿಕ ದಳ— ಜಯವಾಗಲಿ, ಘೇ! ಉಘೇ !

ಸುವಾಸಿನಿಯರು— ಧ್ರುವಕುಮಾರನಿಗೆ ಸೊಗವಾಗಲಿ !

ಪುರೋಹಿತರು— ಧ್ರುವಕುಮಾರ ಸುಖೀಭವ !

ಮಕ್ಕಳ ಪರಿವಾರ— ಧೀರ ಧ್ರುವಕುಮಾರನಿಗೆ ಜಯವಾಗಲಿ ! ಘೇ ! ಉಘೇ !

ಪುರ ಪ್ರಮುಖರು— ಭಾವೀ ಮಹಾರಾಜನಿಗೆ ಭಗವಂತನ ಕೃಪೆಯಿರಲಿ ಘೇ ! ಉಘೇ !

ಉತ್ತಾನಪಾದರಾಯ—ನನ್ನ ಮುದ್ದು ಕಂದನಿಗೆ ಮಂಗಳವಾಗಲಿ !

ಸುನೀತಿದೇವಿ— ಕುಮಾರ ಕಂಠೀರವನಿಗೆ ಶುಭವಾಗಲಿ !

ಸುರುಚಿದೇವಿ— ಶ್ರೀ ಹರಿಯ ವರಕೃಪೆ ಲಭಿಸಲಿ !

ದಳವಾಯಿಗಳು— ಜಯ ಜಯ ಜಯ ಜಯಹೇ !

(ಜಯಕಾರ ನಭೋಭೇರಿಯಂತೆ ಮೊಳಗಿತು. ಧ್ರುವಕುಮಾರ ಅತ್ಯಂತ ಸಂಪ್ರೀತನಾಗಿ ಎಲ್ಲರೊಡನೆಯೂ ಕುಶಲ ಪ್ರಶ್ನೆ ಮಾಡಿ ಆಶೀರ್ವಚನಗಳನ್ನು ಹೊತ್ತು ತಾಯಿಯ ಕಡೆ ನಡೆದ. ಅವಳು ಜನರ ಗುಂಪಿನಲ್ಲಿ ಮುಂದುವರಿಯಲಾರದೆ ಮಗನ ಸಾಮೀಪ್ಯಕ್ಕಾಗಿ ಹಾತೊರೆಯುತಿದ್ದಳು. ಧ್ರುವಕುಮಾರ ಓಡಿ ಬಂದು

ತಾಯಿಯನ್ನು ಅಪ್ಪಿಕೊಂಡು ಆನಂದ ಬಾಷ್ಪವನ್ನು ಸೂಸುವನು)

ಧ್ರುವಕುಮಾರ— ನಿನ್ನ ಆಶೀರ್ವಾದದಿಂದ ಶ್ರೀಮನ್ನಾರಾಯಣನ ದರ್ಶನ ಮಾಡಿದೆ ಅಮ್ಮಾ !

ಸುನೀತಿದೇವಿ— ಆ ಅನುಗ್ರಹ ಸದಾಕಾಲವೂ ನಿನ್ನ ಮೇಲಿರಲಿ ಮಗೂ ! (ಅನಂತರ ಸುರುಚಿಯ ಕಡೆ ಕೈತೋರಿ) ಇಗೋ, ಅಂದು ದುಡುಕಿದ ಚಿಕ್ಕಮ್ಮ ಇಂದು ನಿನಗಾಗಿ ಹಂಬಲಿಸುತಿದ್ದಾಳೆ. ಅವಳಿಗೆ ನಮಸ್ಕರಿಸು ಮಗುವೇ !

(ಆ ಮಾತು ಕೇಳಿದೊಡನೆ ಮೊದಲು ತಾಯಿಗೆ ನಮಸ್ಕರಿಸಿ ಅನಂತರ ಅವಳಿಗೆ ನಮಸ್ಕರಿಸುವನು. ಎಳೆಯ ಮನಸ್ಸು ಆನಂದಮುಗ್ಧವಾಗಿತ್ತು)

ಧ್ರುವಕುಮಾರ— ನಿಮ್ಮ ಉಪಕಾರ ಸ್ಮರಣೀಯವಾದುದು, ಚಿಕ್ಕಮ್ಮಾ!

ಸುರುಚಿದೇವಿ— ಮೊದಲು ನನ್ನ ಘೋರ ಅಪರಾಧವನ್ನು ಕ್ಷಮಿಸಿಬಿಡು ಮಗೂ !

ಧ್ರುವಕುಮಾರ— ಅದೇನೇ ಇರಲಿ. ಚಿಂತೆಯಿಲ್ಲ. ನಿಮ್ಮ ಅಮೋಘವಾದ ಸಲಹೆಯಿಂದ ನಾನು ತಪಸ್ಸಿಗೆ ಹೊರಟದ್ದು. ಇಲ್ಲದಿದ್ದಲ್ಲಿ ನನಗೆ ಆ ಅಭಿಲಾಷೆ ಮೂಡುತ್ತಿರಲಿಲ್ಲ.

(ಧ್ರುವಕುಮಾರನು ತನ್ನ ಬಗ್ಗೆ ಇನಿತೂ ಬೇಸರವಿಲ್ಲದೆ ನಿಷ್ಕಲ್ಮಶ ಮನದಿಂದ ಮಾತಾಡಿದುದನ್ನು ಕಂಡು ಸಂತಸ ಮೂಡಿದರೂ ಲಜ್ಜೆ ಪರಿತಾಪಗಳಿಂದ ಒಡಲು ತುಂಬಿ ಮುಖಮಂಡಲ ರಾಹುಗ್ರಸ್ತವಾಗಿತ್ತು. ಅವಳು ಮನಃಪೂರ್ವಕವಾಗಿ ಧ್ರುವ

ಕುಮಾರನ ಮೈದಡವಿದಳು. ಕಣ್ಣುಗಳು ತಟ್ಟನೆ ಅಶ್ರುಲಿಪ್ತವಾದುವು)

ಸುರುಚಿದೇವಿ— ಹಳೆಯದೇನನ್ನೂ ಮನಸ್ಸಿನಲ್ಲಿಟ್ಟುಕೊಳ್ಳಬೇಡ ಮಗೂ.

ಧ್ರುವಕುಮಾರ— ಆ ಬಗ್ಗೆ ಚಿಂತೆಯೇ ಬೇಡ. ನಿಮ್ಮ ಉಪಕಾರದಿಂದ ನಾನು ಭಗವದ್ ದರ್ಶನ ಮಾಡಿ ಬಂದಿರುವೆ. ಇಲ್ಲಿದ್ದಲ್ಲಿ ನಾನು ಹೇಗಿದ್ದೇನೋ ಹಾಗೆಯೇ ಇರುತಿದ್ದೆ! (ಅವನ ವಿನಮ್ರ ಪ್ರೇಮಭಾವ ಮನವನ್ನು ತಣಿಸಿತು. ಒಡಲು ಕರುಣರಸದಿಂದ ತುಂಬಿ ಅವನನ್ನು ಗಾಢಾಲಿಂಗನೆ ಮಾಡಿಕೊಂಡಳು ಸುರುಚಿದೇವಿ)

ಧ್ರುವಕುಮಾರ— ಚಿಕ್ಕಮ್ಮಾ, ಉತ್ತಮಕುಮಾರ ಎಲ್ಲಿ?

ಸುರುಚಿದೇವಿ— ಅದೋ, ಆ ರಥದಮೇಲೆ ಮಂಡಿಸಿದ್ದಾನೆ. (ಧ್ರುವಕುಮಾರ ಆ ಕೂಡಲೇ ಅಲ್ಲಿಗೆ ಹೋದ. ಚಿಕ್ಕವನಾದ ಅವನಿಗೆ ಆ ವಿಜೃಂಭಣೆಯು ಅರ್ಥವೇ ಆಗಿರಲಿಲ್ಲ. ಮಂತ್ರಮುಗ್ಧಭಾವದಿಂದ ಎಲ್ಲರೆಡೆಗೂ ಸುಮ್ಮನೆ ಮಿಕಿಮಿಕಿ ನೋಡುತಿದ್ದ)

ಧ್ರುವಕುಮಾರ— ನಿನ್ನನ್ನು ನೋಡುವ ನೆನಪು ನನಗೆ ತಪೋವನದಲ್ಲೂ ಆಗಾಗ ಮೂಡುತಿತ್ತು.

ಉತ್ತಮಕುಮಾರ— ನೀನು ಒಬ್ಬನೇ ಪಯಣಿಸಿದೆ. ನೀನು ಹೋಗಿದ್ದೂ ನನಗೆ ತಿಳಿಯಲಿಲ್ಲ. ಇಬ್ಬರೂ ಕೂಡಿ ಹೋಗಿದ್ದರೆ ಅಲ್ಲಿ ಚಿನ್ನಿ ಆಡಬಹುದಾಗಿತ್ತು!

(ಆ ಮಾತಿಗೆ ಎಲ್ಲರೂ ಗೊಳ್ಳನೆ ನಗುವರು)

ಸುರುಚಿದೇವಿ— (ಸ್ವಗತ) ಇಂದು ನನ್ನ ಗರ್ವವೆಲ್ಲಾ ಹುಡಿಹುಡಿಯಾಯಿತು. ಇನ್ನಾದರೂ ಈ ಜೀವನ ತುಂಬಿ ಬರಲಿ.

ಧ್ರುವಕುಮಾರ— ನಿನ್ನನ್ನು ನೋಡದೆ ತುಂಬ ದಿನಗಳಾದಂತಿದೆ ಉತ್ತಮಕುಮಾರ.

ಉತ್ತಮಕುಮಾರ— ಹೌದಪ್ಪಾ, ನನಗೂ ಹಾಗೆಯೇ ಆಗಿದೆ.

(ಅನಂತರ ಧ್ರುವಕುಮಾರ ಪುರಜನರ ಮಧ್ಯೆ ನುಸುಳಿ ಎಲ್ಲರಿಗೂ ದರ್ಶನಲಾಭವನ್ನು ಕೊಟ್ಟ. ಕಳಶ ಕನ್ನಡಿ ಹೊಂದಿದ್ದ ಪುರನಿವಾಸಿನಿಯರು ಬಾಲಕನ ಹಣೆಗೆ ತಿಲಕವಿಟ್ಟು ಪುಷ್ಪಹಾರವನ್ನು ಹಾಕಿ ಮಂಗಳದ್ರವ್ಯವನ್ನು ಪೂಸಿ ಆರತಿ ಬೆಳಗಿದರು. ಅನಂತರ ಅವನು ತಂದೆ ತಾಯಿಯರೊಂದಿಗೆ ರಥವನ್ನು ಏರಿದ.

ಉತ್ತಾನಪಾದರಾಯ ಒಂದು ಶುಭದಿನದಲ್ಲಿ ಧ್ರುವಕುಮಾರನೇ ತನ್ನ ಉತ್ತರಾಧಿಕಾರಿಯೆಂದು ಘೋಷಿಸಿ ಅವನ ಪಟ್ಟಾಭಿಷೇಕಕ್ಕೆ ಅಣಿಗೊಳಿಸಿದ. ಅಂದಿನ ಆ ಸಂಭ್ರಮದಲ್ಲಿ ಇಡೀ ರಾಜ್ಯವೇ ಪಾಲ್ಗೊಂಡಿತು.

ಧ್ರುವಕುಮಾರ ದೈವ ಭಕ್ತಿಯಿಂದ ಧರ್ಮನಿಷ್ಠೆಯಿಂದ ಹೃದಯ ಕುಂಡವನ್ನು ತುಂಬಿಕೊಂಡು ಲೋಕವಿಖ್ಯಾತನಾಗಿ 'ನಾನೇ ಆ ಪುಣ್ಯ ಪಯೋನಿಧಿಯಾಗಿದ್ದರೆ...?' ಎಂಬ ಅಂದಿನ ಹಂಬಲವನ್ನು ಸಾರ್ಥಕ ಗೊಳಿಸಿದ)

—ಮಂಗಳಂ—

ಮಲ್ಲಿಕಾ ಕೃತಿಗಳು

ಕಾದಂಬರಿಗಳು

೧) ಜೀವನಗಂಗಾ
೨) ಡಾ॥ ಅಘೋರ
೩) ಡಾ॥ ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ
೬) ಮನೋನ್ಮಣಿ
೭) ಸಂತ್ರಾಸಿನಿ
೮) ಆಸೆಯ ಸುಳಿಯಲ್ಲಿ
೯) ಪದ್ಮಾಲಯ
೧೦) ಶ್ರದ್ಧಾಲಯ

(ಕಥಾ ಸಂಕಲನ)

೧೧) ಬಹುರತ್ನಾವಸುಂಧರಾ
೧೨) ರತ್ನಗರ್ಭಾವಸುಂಧರಾ
೧೩) ಸುಧಾಮಣಿ
೧೪) ರಮಣೀಮಣಿ
೧೫) ಲಿಯೋನಾ
೧೬) ಶ್ರೀಮುಖಿ
೧೭) ಶ್ರೀಹರ್ಷಲಾ
೧೮) ವೈಶಾಖೀ ಪರ್ವ
೧೯) ಫಾಲ್ಗುಣೀ ಪರ್ವ
೨೦) ಮಣಿಮೇಖಲಾ
೨೧) ಮಣಿಕರ್ಣಿಕಾ
೨೨) ಪೂಜಾವಸಾನ ಸಮಯೇ....!
೨೩) ಧ್ಯಾನಾವಸಾನ ಸಮಯೇ....!
೨೪) ಗಗನ ಕುಸುಮ
೨೫) ಜೀವನಕುಸುಮ
೨೬) ಚಂಪಕ ರಾಜಿ
೨೭) ಬಕುಳ ರಾಜಿ
೨೮) ಕಸ್ತೂರಿ ಮಾಲಿಕಾ
೨೯) ಮಂದಾರ ಮಾಲಿಕಾ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೩೦) ವಿಜಯ ಗಾಥಾ
೩೧) ಗಾನ ತೀರ್ಥ
೩೨) ನಾದ ಬಿಂದು
೩೩) ಕಾವ್ಯಾನಂದ ನಂದಿನಿ
೩೪) ಭಾವಾನಂದ ನಂದಿನಿ
೩೫) ಸಂಗೀತ ಪುಷ್ಪಾಂಜಲಿ
೩೬) ಆತ್ಮ ಗೀತಾಂಜಲಿ

(ಸಂಜೀವನ ಕಾವ್ಯ)

೩೭) ಮಂಗಳ ಭಾರತಿ
೩೮) ಕಲ್ಯಾಣ ಭಾರತಿ
೩೯) ಉತ್ತರೋತ್ತರಣಿ
೪೦) ರಾಗಾನುರಾಗಿಣಿ
೪೧) ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೨) ಪುಣ್ಯಪಯೋನಿಧಿ
೪೩) ಪುಣ್ಯಾಭಿಸಾರ

(ಸಾನೆಟ್‌ಗಳು)

೪೪) ತರಂಗಿಣಿ

(ಗದ್ಯ ಕಾವ್ಯ)

೪೫) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೬) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೭) ದೂರ ದೇಶದಲ್ಲಿ
೪೮) ಬೆಳದಿಂಗಳ ರಾತ್ರಿ
೪೯) ರಂಗನ ಸಾಹಸ
೫೦) ಓಹಿಯೋಜ ಸರೋವರ
೫೧) ಕೌಶಿಕನ ಗೊಂಬೆ
೫೨) ವಿಶೇಷ ಸುದ್ದಿ
೫೩) ಕಲ್ಯಾಣಿ ರಾಗಿಣಿ

ಲಕ್ಷ್ಮೀ ಪ್ರಕಾಶನ
ನಂ. 359, 14ನೇ ಅಡ್ಡ ರಸ್ತೆ, ಸದಾಶಿವನಗರ, ಬೆಂಗಳೂರು-560 080